File No. Law 59/30

Serial Nos. 78

Previous References

Law 1-30, 2042

Later References

Law 13-32-1-2

General and Revenue Secretariat.

Part B for March 193

SUBJECT.

certain allegations published in Kowa-Kawabata
of 16th Sept 1928 re Chasiem Tole desecration etc
and action taken thereon

VISWAKARNATAKA.

Abstracts and original ~~papers~~ issues put up.

1) The issues of 2nd and 9th September 1928 refer to some temple desecrations under prominent headlines and not all of them true. (Flags H & P

2) A warning on the lines of the draft put up may be sent to the Editor, if he continue publishing news of similar events in this manner in future issues.

THIRD MEMBER,

Thro General Secretary.

Subd) Extracts of newspaper abstracts read. are placed below.

From Mo Editor Viswamatara
No 3361 d. 25. a. 28

States that he is not publishing mere rumours without verification, ~~and that~~ nor any Comment likely to influence f communal feeling

The reply to our earlier letter since received is sub-d

A post-script will be added to the draft acknowledging his letter & stating that it does not call for a detailed reply

Members of Comm Dewan. ✓ 26/9.

26/9/28

27.9.25

To The Editor, Viswabandhu, B'hpr.

No. 1747/C.S. Dy. 1st/2nd Oct. 1924

Draws his attention to the article under the heading "Hemagiri Vrittanta" published in his paper of the 16th inst. containing two serious allegations, which are reported to be false & asks him to withdraw the allegations with an unqualified apology, failing which, permission will be given to the officers concerned to take legal steps against him.

Copy to the Dy. Comm., Tumkur &c
No. 1748/C.S. Dy 2nd Oct. 1924

From the Dy Comr Tumkur Dr

no S.R.9.g 28 d. 5.10.28

Forwards a copy of a D.O. letter received from the Amildar of Kunigal and recommends that he may be permitted to take legal action against the Proprietors and Correspondents of certain Newspapers ~~for public under Section~~ for having defamed him.

The papers referred to are

(i) Prajamitra

(ii) Mysore Patriot

(iii) Viswakarnataka

Of these (i) has ~~been stopped~~ ceased publication and some action under Mysore Newspapers Regn against (ii) is separately under consideration. It is for orders if these are also to be proceeded against

refuting the allegations contained in the article and states that he is investigating the truth or otherwise of the statements made. So the article has not been definitely withdrawn.

The Amildar wants to proceed against the Proprietors and Correspondents". If agreed, the Law Dept. may be asked to advise as to which papers may be proceeded against and who are to be proceeded against. Also the ~~for~~ Sections of the I.P.C. under which action is to be taken.

The allegations in the Vishwakarnataka seem to be the most definite.

A draft reply to D.C. Dharwar is also put up for consideration.

The Dy Commr will doubtless examine all this before taking action.

The draft reply may be approved

Secy Member Cst 8/10

Dewan. 9) 1910

10) DM 12-10-28

11) Issue new 11/10

To the Deputy Comr Tumkur Dt

D.O. 1906 d 11.10.28

States that Govt have no objection to permit Mr. Amildar to take legal steps against the newspapers.

D.O. Lawsuit with compliments for perusal

From the Dy. Comr. Dumka Dt

No. S.R. 9 d. 15.10.28

Reports that he has instructed the Amildar to take action against the Vishwakarmataka, as even in the ~~latest~~ issue of the 14th instant the Editor has merely expressed ~~his~~ regret for publishing the correspondent's letter and not apologised.

No immediate action ~~seems~~ to be necessary. Perhaps the question of costs and advising the course of litigation is for consideration in the Law Deptt.

If appd. the papers may now be transferred to Mat Deptt. for necessary further action

Perhaps no further action is necessary & the result of the Complaint proposed to be filed may be awaited.

Secy)

Yes
25/11
M.

This may perhaps go to Sus B list - It is for orders whether any report is to be called for from the Deputy Com[r] Tumkur

17.1.29
17/1

A. Jr.
18/1

18/1

D O Letter No: 3359/C.B to the D.C. Tumkur enquiring the stage at which the case stands

Letter D O No SR. 9-289 dated 31.1.29 from D.C. Stating that it is posted 11.2 for exam[n] of remaining witnesses.

Submitted for orders as to whether a report may be called for from the Dt. Tumkur as to the progress made in the case

OWP 6324 -GPB-60,000-24-5-27

26.4.29
26/4

Jr.
26/4

Secy
27/4

Draft letter to D.C. Tumkur

Lucy,

To. Deputy Comr, Tumkur
P 6670 / dated 2.5.29
Called for a report as to the
progress of the case

Letter No 9 & 18669—S.R.9/28-29 dated
10.5.29 from D.C. Tumkur reporting the progress made in
the case

Charge has been framed against the
accused & several pws have be
e case stands adj'd to 14.5.29

Asst Sey's note on P.V.D
"await further report" sd N.S.

Read:--

Letter No.T.C.15 dated 31st July 1929 from Mr.S.V. Ananteraman, Deputy Commissioner, Mysore District, stating that he has been summoned as a witness for the prosecution in the Defamation Case filed by Mr.Abdul Khader, Arilder, against the Editor of Vivekavarnateka in the Court of the First Class Magistrate, Tumkur, and requesting sanction for his journey to Tumkur and back, on duty, to attend the Court on the 12th August 1929.

Order No. S-96-8/C.S. 38-28-414

Dated Bangalore, the 7th August 1929.

S a n c t i o n e d .

Sd. R. Ranga Rao.

Offg: Chief Secretary to Government.

To Revenue Commissioner in Mysore.
Deputy Commissioner, Mysore District.
Comptroller to Government.

Copy to Protection Branch.

Defamation case by Municipal Amildar against the Editor of "Vivaranatena"

The last report of the Dot. (10th May 1929) intimated that the case was posted to 14th ma

Draft calling for a report as to the progress made in the case put up

29.4 29/11 Prop 2917 dt 29/11/29

Letter No JC 135/29.30 dated 30th November requiring progress made in the case

As the accused claimed a denovo trial, it seems the case began afresh on 13-6-29 & is posted to 3.12.29 for Defence - Submd for perusal.

3/12 3/12 L-R.)

Letter No. JC 25/30-31 dated 18th Aug 1930 from the Dist. Magr. Tumkur stating that the accused Mr. T. S Sharma was sentenced to pay a fine of Rs 100/- on each Count in a defamation Case C.C. No. 197 of 1928-29 on the file of the Spl. first Magr. Tumkur, launched by Mr. Abdul Khader Amildar, and the appeal preferred by the accused stands adjourned for hearing to 11th Sept 1930 in the Court of Sessions Judge, and requesting necessary further action to support the Conviction by appointing the same Counsel who Conducted the Case in the lower Court.

The Dt made Tumkur, States & in the P.V.D that Mr. Abdul Khader requests the same Counsel who conducted the Case in the lower court to be engaged in the Sessions Court for the appeal. But (Page 7) Mr Abdul Khader's letter of 6th august does not contain this request. He only wants proper arrangements to be made for the conduct of the appeal in the Sessions Court.

for the appeal in the Sessions Court, Bandarban Govt will have perhaps to incur extra costs as to his travelling & other expenses - submitted for orders. The appeal is posted for hearing to 11.9.30.

Legal Rr.

22/8

I do not think there is any need to incur extra cost in this case. The Pub: Prosr may be instructed to appear

D. M. 25/8

3rd Member

will Secy please speak to me apparently Even the Advt. Prosr will have to be paid

by 27/8

If Govt. is agreeable to taking the case, receiving the fees which would be payable to the P.P. under the rules, the proposal of the D.C may be agreed

by 28/8

Mosco Smd as reqd by secy.

D. M. 28/8

Dft, please

MK 29/8

OFFICE OF THE
THIRD MEMBER OF COUNCIL
25 AUG. 1930
No. 1851

42) Draft for approval

(L.R.)

30/8

30/8

To

The Dist. Magte Tumkur

No. P. 1260 d 1.9.30. Stating that Govt have no objection to approve the Proposal if Mr. Venkataramaiah is agreeable to take up the Case receiving the fees which is usually payable to the PPr. under the rules.

Letter no. jc 28/30-31 dated 29th Aug 1930 from the Dist Magte Tumkur requesting early orders in the matter of appeal preferred by Mr. O.T. Shama.

Subd:

Reply has been issued today by No. P. 1260 d 1.9.30.

2/9

Letter No. JC. 25/30-31 of no date from the Dist. Magte Tumkur stating that Mr. Venkataramaiah advocate, Tumkur demands Rs 25/- per day with the usual T.A., if his services will have to be engaged to Conduct the appeal in the Session Court, and intimating that the PPr. Bl'lore has however been requested to appear on 11th inst and take an adjournment.

Sub 2:

Under these Circumstances ~~it is~~ ~~does not appear that~~ Extra Cost will have to be incurred if Mr. Venkataramaiya is asked to take up the appeal. PPr. Bl'lore may perhaps be requested to ~~take up the work~~ Conduct the appeal in the Session Court.

The Dist. Magistrate Tumkur has already requested the PPr to appear on 11th and take an adjournment; ~~orders may be issued accordingly~~

Submit for orders

Legal Rr.

BNG
9.9.30.

I think the Govt. Advt. may be requested to appear & do the necessary on payment of a lump sum fee of Rs: 100/- for the case.

P. M.
9/9

Hon'ble Member

Hand
Drafts to G.A. & D.M and submit for
approval & signature.

Legal Asst

DM 10/9

The Dist. Magte Tumkur

No. P. 10081 dated 10.9.30 informing that the Govt Advocate has been requested to appear for the respondent in this appeal and support the conviction, and stating that Mr. Abdul Khader may be directed to give necessary instructions to the Govt Advocate immediately

The Govt Advocate

No. P. 10081 requesting to appear for the respondent, Mr. S. Abdul Khader in Cr. Appeal 10 of 30-31 (T.T. Shamanna v Abdul Khader) on the file of Sessions Judge B'lore, and informing that Govt have decided to pay a lumpsum fee of Rs. 100/- for the Case

from G. Advocate,

D.O. No. 14 dated 11th Sept 1930, requesting instructions the Dist. Magte, Tumkur to send immediately records of the lower Court in Cr. Appeal No. 10 of 1930-31 on the file of the Sessions Judge B'lore.

Letter no Jc. 25/30-31 dated 11th Sept 1930 from the Dist. Mag Tumkur stating that ~~the~~ Mr. Abdul Khader has been intimated to give necessary

to Govt Advocate

for Perusal.

MM
18/9.

Letter no Jc 25/30-31 d 13th Sept 1930 from the Dist Magte Tumkur. Stating that the Spl Magte intimate he has forwarded the records to H

for Perusal.

MM 18/9

... dated 11th Dec 1930 from the Govt Advocate stating that the appeal took a new turn in the appellate Court, and requesting to ascertain from Govt and the Complainant whether an unqualified apology which the appellant is prepared to tender would prove enough to suit the Complainant's feelings and to inform result before 19th inst to which date the Hg stand adjourned

Mr. K. Ranga Iyengar the Counsel for the appellant Mr. T.T. Sharma has stated to Court that his client is prepared to tender unqualified apology in any term

which the Complainant may want Govt Advocate requires definite instructions in the matter before him

TSD 12/11

In the course of his arguments in reply the Govt Advocate appearing for the Complainant – Mr Abdul Khader – in order to show want of bonafides on the part of the accused, stated that he had not even tendered an apology before the trial Court – The appellant Counsel, seems to have taken advantage of this opportunity & offered ~~to~~ that his client was prepared to tender unqualified apology in any terms which the Complainant may want".

Letter no. JC. 325/30-31 dated 15.12.30 from D.C. Tumkur forwarding a copy of the letter received from Mr. Abdul Khader wherein he has stated that he does not think that an apology at this stage will serve his purpose, and that the Case being launched at the instance of Govt. he would leave everything for the decision of Govt.

Letter no. JC. 25/30-31 dated 17th Dec 1930 from D.C. Tumkur stating that the views of Mr. Abdul Khader were furnished to Govt in the letter noted above.

Mr. Abdul Khader states that the accused Mr. T.S. Sharma tried his best to prove truth and justification in the lower Court, but failed, and that Considering this point and the Time & money spent already in the Case he does not think an apology at this stage serve the purpose, but That since the case is being conducted at Govt: cost, he would leave everything for the decision of Govt.

TSD

WI 02453—G PB—50,000 3-32

Issued Rate: note put up on 12.12.30

The Summary of Appts forwarded by the C. A. with his letter shows that it was only when the C. A. pointed out the absence of good faith on the part of the accused in publishing a manifestly disparaging matter about the Court without any enquiry and further prompted and was corrected in note even tendering any apology in the Court C2 that the accused advocate as ordered to tender an apology.

Conduct of this kind certainly does not disclose any real feeling of regret. She has done more, at this stage, only to avoid the punishment as then to be alternative to escape it.

The power was put to proof & the Court has entered in conviction & it has now the C in C's considerable experience.

I think the C. A. should not hesitate not to accept the suggested apology & to confirm the Appts & sentence.

The Court to give a hearing on merits.

The officers concerned has given good reasons why the apology should be accepted

tendered an apology in the
hearing

18.12.30

Please issue instructions accordingly
W.H.S.G. (R.C. Lodge)

Draft fair print and for
approval
Legal A.

To

The Govt Advocate.

D.O No. P. 3449 dated 15th Dec 1930 informing
the Subboard apology need not be accepted
requesting to continue the arguments and
ask the Courts to give a decision on
writs and to close the action unconditional

P.A has since reported that the
case was argued & Judgt reserved—
Please put up the letter—

Please enquire tomorrow at the G.A's Office. Let me know

MC 6/1

It is learnt that the Case is posted to 13th Jan'31

Awaits Supt

MP 8/1

D.O Letter No 43 dated 29th Jan 1930 from Govt. Advocate intimating that judgment pronounced dismissing the appeal.

Subd for perusal.

Govt. Ad. may be requested to send a copy the judgment Dft. put up.

ISD
20/1

Issue & resubmit

MP
30/1/31

The Govt. Ad.

P 4607 d 2.2.31 requesting to a copy of the judgment in appeal.

Refer: Paras 53+54 above.

The appeal filed by Mr T.T. Sharma was dismissed by the Addl: Sessions Judge on 28th Jan: Govt Adv: has been requested to send a copy of the

Letter No 699 dated 5th Feb 1930 from the Govt Advocate forwarding a bill for Rs 100/- for services rendered in the C: Appeal -

The fee claimed is according to the terms agreed upon.

Copy of the Judgt called for has not yet been received.

Draft G.O sanctioning, the fee may be approved or the copy of the Judgt, may be awaited.

Legal R^r DMP 7.2.31

may be appd

2nd Member DM 11/2

DM 14/2

by 14/2/31 D. 14/2

Issue

DM 14/2

The Govt. Ad.

Comptroller Hyd' Fin & Sec

C No. P. 5742-7 Law Sec-30-8 dated 19.2.31

Sanctioning a bill for Rs 100/- being his remuneration for the services rendered in C. Ap. 10/30-31 on the file of the Addl Sessions Judge B'lore. (Mr. T.T. Sharma vs T. Abdul Khadir)

Letter no 520/30-31 dated 16th Feb 1931 forwarding a copy of the judgment passed in Ap. no 10 of 30-31 on the file of the Addl Sessions Judge.

The learned ~~Judge~~ in dismissing the appeal observes that the accused has been rightly Convicted and he sees no reason to reduce the sentence of fine imposed on him

Important portions of judgment have been marked by the Sec

Subm for perusal

150
25/2

Registered No.M. 1697

ವಿಶ್ವಕರ್ಣಾಟಕ

ಪ್ರತಿ ಭಾನುವಾರವೂ ಬೆಂಗಳೂರು ನಗರದಲ್ಲಿ ಹೊರಡುವ ರಾಷ್ಟ್ರೀಯ ವಾರ ಪತ್ರಿಕೆ

ಬಿಡಿ ಪತ್ರಿಕೆ ೦—೧—೦ ಸಂಪಾದಕ—ತಿರುಮಲೆ ತಾತಾಚಾರ್ಯಶರ್ಮ ವಾರ್ಷಿಕಚಂದಾ ರೂ. ೩—೦—೦

ವರ್ಷ ೬ ಬೆಂಗಳೂರು ನಗರ—ಸೆಪ್ಟೆಂಬರ್ ೧೬ನೇ ಭಾನುವಾರ ೧೯೩೮ [೪೯

ವಿಶ್ವೇಶ್ವರಯ್ಯ ಸಮಿತಿಯ ಕಾರ್ಯಕಲಾಪ

ದೀನದಾರನ ಕೀರ್ತಿಪ್ರತಾಪ

ದೇವಾಲಯಗಳ ಕಳ್ಳರ ಗುಂಪು ಕೋಲಾರಜಿಲ್ಲೆಯಲ್ಲಿ!

ಹೆಡ್ ಆಫೀಸ್ :— ಮದರಾಸ್

ಆಂಧ್ರ ಆಯುರ್ವೇದ ಫಾರ್ಮಸಿ (ಲಿಮಿಟೆಡ್)

ಬ್ರಾಂಚ್ ಆಫೀಸ್ :— ಬೆಂಗಳೂರು ಸಿಟಿ

ಚ್ಯವನಪ್ರಾಶ್ಯರಸಾಯನ

ಇದು ಸರ್ವೋತ್ಕೃಷ್ಟವಾದ ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧವಾಗಿರುವುದರಿಂದ ಇದರ ಸೇವನೆಯು ಕೆಮ್ಮು, ಉಬ್ಬಸ, ಧಾತುಕ್ಷಯ, ಒಳಜ್ವರ, ಹೃದಯ ಮತ್ತು ಶ್ವಾಸಕೋಶದ ವಿಕಾರ, ಸ್ಪರ್ಷೇಂದ್ರಿಯ ಮೊದಲಾದ ಅನೇಕ ರೋಗಗಳನ್ನು ಗುಣಪಡಿಸುವುದಲ್ಲದೆ, ಸ್ತ್ರೀ ಬಾಲರಾದಿಯಾಗಿ ಎಲ್ಲರಿಗೂ ಉತ್ತಮಶಕ್ತಿವರ್ಧಕ(ಟಾನಿಕ್)ಔಷಧವಾಗಿಯೂ ಇದೆ. ಕ್ರಯ ೧೦ ತೊಳೆಗೆ ರೂ. ೧, ೪೦ ತೊ. ರೂ. ೩.

ಸಿದ್ಧ ಮಕರಧ್ವಜ

ಇದು ಸುವರ್ಣ, ಕಸ್ತೂರಿ ಮೊದಲಾದ ಅಮೂಲ್ಯ ವಸ್ತುಗಳಿಂದ ಸಿದ್ಧಮಾಡಲ್ಪಟ್ಟ ರಸಾಯನ ಮತ್ತು ವಾಜೀಕರಣಶಕ್ತಿಯುಳ್ಳ ಔಷಧಗಳಲ್ಲಿ ಅತ್ಯುತ್ತಮವಾದದ್ದರಿಂದ ಸಮಸ್ತ ರೋಗಗಳನ್ನೂ ನಾಶ ಮಾಡಿ, ಪುಂಸ್ತ್ವಶಕ್ತಿ, ಜ್ಞಾಪಕಶಕ್ತಿ, ಕಾಂತಿ, ವೀರ್ಯ ಬಲಪ್ರದವಾಗಿರುತ್ತದೆ. ಕ್ರಯ ಬಾಟ್ಲಿಗೆ ರೂ. ೫.

ಚಂದನಾದಿ ವಟಿ

ಈ ಮಾತ್ರೆಯು (ಗನೋರಿಯಾ) ಪ್ರಮೇಹ, ಉರಿಮೂತ್ರ, ಮೂತ್ರಕೋಶ ಮತ್ತು ಮೂತ್ರದ್ವಾರದ ವ್ರಣ, ಕೀವು ಬರುವುದು ಮೊದಲಾದ ವಿಕಾರಗಳನ್ನು ಗುಣಪಡಿಸುವುದರಲ್ಲಿ ಅನುಭವಸಿದ್ಧವಾದ ಔಷಧವಾಗಿದೆ. ಕ್ರಯ ೧ ಬಾಟ್ಲಿಗೆ ೧ರೂ. ೧.

ವಿ. ಸೂ—ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲಾ ಔಷಧಗಳೂ ಸುಲಭ ಕ್ರಯಕ್ಕೆ ಸಿಕ್ಕುವುದಲ್ಲದೆ, ರೋಗಿಗಳು ರೋಗದ ಲಕ್ಷಣವನ್ನು ವಿಶದವಾಗಿ ತಿಳಿಯಪಡಿಸಿದರೆ ಶಕ್ಯ ಚಿಕಿತ್ಸಾ ಕ್ರಮವನ್ನು ಸೂಚಿಸಿ, ಬೇಕಾದ ಔಷಧಗಳನ್ನು ಕಳುಹಿಸಿಕೊಡುತ್ತೇವೆ. ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿರಿ.

ಆಯುರ್ವೇದ ಭೂಷಣ ವಿಶಾರದ, **ಡಾ. ಕೆ. ನಾರಾಯಣರಾವ್**, ಎ.ಎಂ., ಎ.ಸಿ.,

ಆಂಧ್ರ ಆಯುರ್ವೇದ ಫಾರ್ಮಸಿ, ೬೬, ಚಿಕ್ಕಪೇಟೆ, ಬೆಂಗಳೂರು ಸಿಟಿ

ಟೆಲಿಗ್ರಾಂ:—"ಮಿಷನೆರಿ," ಬೆಂಗಳೂರು. ಗ್ಯಾರಂಟಿ ಮಾಲು !!

ಮದುರೆ ಕಬ್ಬಿನ ಗಾಣ

ಸ್ಥಾಪಿತವಾದದ್ದು 1900. ಬೆಲೆ ಸುಲಭ !!!



ಮೈಸೂರು ಸರ್ಕಾರದ ವ್ಯವಸಾಯದ ಇಲಾಖೆಯಿಂದಲೂ, ವ್ಯವಸಾಯದ ಸೊಸೈಟಿಗಳಿಂದಲೂ, ಅನುಭವಶಾಲಿಗಳಾದ ರೈತರುಗಳಿಂದಲೂ ಅತ್ಯುತ್ತಮವಾದುದೆಂದು ಹೆಸರು ಪಡೆದಿರುವ ಮತ್ತು 1926ನೇ ಇಸವಿಯಲ್ಲಿ ಬೆಂಗಳೂರಿನಲ್ಲಿ ನಡೆದ

ಇಂಡಸ್ಟ್ರಿಯಲ್ ಮತ್ತು ಅಗ್ರಿಕಲರಲ್ ಎಗ್ಸಿಬಿಷನ್ನಲ್ಲಿ

ಭಂಗಾರದ ಮೆಡಲನ್ನು ಪಡೆದಿರುವ **ಮದುರೆ ಕಬ್ಬಿನ ಗಾಣ**ಗಳನ್ನು ಉಪಯೋಗಿಸಿ.

ಇದರ ಶ್ಲಾಘನೀಯವಾದ ಗುಣಗಳು :—ಸಾಧಾರಣವಾದ ಎತ್ತುಗಳು ಸುಲಭವಾಗಿ ಎಳೆಯಬಲ್ಲವು; ಹೆಚ್ಚು ಹಾಲನ್ನು ಹಿಂಡುತ್ತದೆ; ಎಣ್ಣೆ ಹಾಕುವುದಕ್ಕೆ ಅನುಕೂಲವಾದ ಏರ್ಪಾಟು ಮಾಡಿದೆ; ಇದರ ಚಿಲ್ಲರೆ ಭಾಗಗಳು ನಮ್ಮಲ್ಲಿ ಯಾವಾಗಲೂ ದೊರೆಯುತ್ತವೆ.

ನಮ್ಮಲ್ಲಿ ಕಬ್ಬಿನ ಗಾಣಗಳೂ, ಮೋಟಾರುಕಾರಿನ ಭಾಗಗಳೂ, ಕಟ್‌ಗಿಯರುಗಳೂ, ಗಿಯರ್‌ಬಾಕ್ಸ್‌ಗಳೂ, ಎರಕದ ತಿರುಗಣೆ ಮೆಟ್ಟುಗಳೂ, ಗೇಟುಗಳೂ, ರೈಲಿಂಗ್ಸುಗಳೂ ಮತ್ತು ಅನೇಕತರಹ ಮಿಷನರಿ ಸಾಮಾನುಗಳೂ ತಯಾರಿಸ್ಪಡುತ್ತವೆ.

ಹೆಚ್ಚು ಸಂಗತಿಗಳಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ :—

ಪಿ. ಎಂ. ಮದುರೆ ಮೊದಲಿಯಾರ್ ಅಂಡ್ ಸನ್ಸ್,

ಕಬ್ಬಿಣದ ಕಾರ್ಖಾನೆ, ಹೊಸತರಗುಪೇಟೆ, ಬೆಂಗಳೂರು ಸಿಟಿ

"ನನಗೆ ಮಕ್ಕಳಿವೆ, ಮೊಮ್ಮಕ್ಕಳಿವೆ ಆದರೆ ಒಂದು ಚರಕವು ನನ್ನ ಜೀವನವನ್ನು ನಡೆಸುವಷ್ಟು ಅವರೆಲ್ಲರೂ ನಡೆಸಲಾರರು" ಎಂದು ಅಂದ, ದೇಶದ ಕಣ್ಣಿಲ್ಲದ ಮುದುಕಿಯೊಬ್ಬಳು ಸಾರುತ್ತಿರುವಳು

ಖಾದಿ ಬಡವರ ನಿಧಿ

ಉಡುಪನ್ನು ಕೊಳ್ಳಲು ಎಲ್ಲರಲ್ಲಿಯೂ ಹಣವಿದೆ. ಪರದೇಶದ ಮತ್ತು ಮಿಲ್ಲಿನ ಬಟ್ಟೆಗಳ ಜಾಹೀರಾತಿಗಾಗಿ ನಮ್ಮ ಮಾತೃಭೂಮಿಯಲ್ಲಿ ಕೊರಗುತ್ತಿರುವ ದೀನ ಕೆಲಸಗಾರರನ್ನು ಪೋಷಿಸಿ, ಪ್ರತಿವರ್ಷ ಕೋಟಿಗಟ್ಟಲೆ ರೂಪಾಯಿಗಳನ್ನು ವಿದೇಶೀಯರ ಜೊಕ್ಕುಸಗಳ ಪೂರ್ತಿಗಾಗಿ ಚೆಲ್ಲುವುದೇ ?

ಇಲ್ಲವೆ

ಸ್ವದೇಶದ ಸ್ವಾತಂತ್ರ್ಯದ ವೇಲೆ ಸಂಪೂರ್ಣ ದೃಷ್ಟಿಯಿಟ್ಟು
ಖಾದಿಯನ್ನೇ ಕೊಳ್ಳುವುದರ ಮೂಲಕ ಬಡವರ
ಉದ್ಧಾರವನ್ನು ಕೈಕೊಳ್ಳುವುದೇ?

ಭರತವರ್ಷದ ದಾರಿದ್ರ್ಯವನ್ನು ಮನಗಂಡಿರುವವರಿಗೆ ಖಾದಿಯೇ ಸರ್ವೋತ್ಕೃಷ್ಟವಾದ ಜೊತೆಕೆ.

ಅಂಥವರಿಗೆ ಖಾದಿ ಬಟ್ಟೆಯೇ ಶ್ರೇಷ್ಠ. ಖಾದಿಯೇ ಅಗ್ಗ.

ಹಬ್ಬ ಹುಣ್ಣಿಮೆಗಳಲ್ಲಿಯೂ ಮದುವೆ ಮುಂಜಿಗಳಲ್ಲಿಯೂ ಖಾದಿಯನ್ನೇ ಉಪಯೋಗಿಸುವ.

ನೋಡಿ! ಒಂದು ರೂಪಾಯಿಗಳನ್ನು ಕೊಟ್ಟು ಖಾದಿಯನ್ನು ಕೊಂಡರೆ ಏನಾಗುವುದು! ನೋಡಿ!



ಮೈಸೂರು ಸರ್ಕಾರದವರಿಂದ
ಬದನವಾಳ
ನೂಲುವ ಪ್ರಾಂತದಲ್ಲಿ
ತಯಾರಾದ ಖಾದಿ ಒಟ್ಟೆಗಳು.

ಟವಲುಗಳು, ಹಚ್ಚಡಗಳು, ಅಂಗವಸ್ತ್ರಗಳು, ಷರಟು ಬಟ್ಟೆಗಳು, ಕೋಟುಬಟ್ಟೆ ಎಲ್ಲವೂ ಬಿಕರಿಗೆ ಸಿದ್ಧವಾಗಿವೆ.

ದರಗಳು :

36" ಅಗಲ ಷರಟು ಬಟ್ಟೆ, 4 ಷರಟುಗಳಿಗೆ ಆಗುವಷ್ಟು 10 ಗಜವನ್ನುಳ್ಳ ಒಂದು ಥಾನಿನ ಬೆಲೆ ರೂ. 5

28×2½ ಮೊಳ ಉದ್ದಟಿ ಟವಲುಗಳು ಒಂದಕ್ಕೆ ಆ. 9

28×3¼ ಮೊ. ಟ. ಒಂದಕ್ಕೆ ಆ. 12

36×5 ಮೊಳ ಅಂಗವಸ್ತ್ರ (ಸರಕು ಸ್ವಲ್ಪವೇ ಇದೆ) 1ಕ್ಕೆ ರೂ. 1-4-0

— ತಿರುಗಿ ನೋಡಿರಿ —

ವಿದ್ಯಾರ್ಥಿಗಳ ಪಂಡೆಗಳು :

50'×4 ಮೊಳ, ೧ಕ್ಕೆ ರೂ. 1-6-0

45' ×4 ,, ,, ,, 1-4-0

8'×2½,, ಟವಲು ,, ,, 0-8-6

ಅಂದವಾದ ಅಚ್ಚಿನ ಅಂಚಿನವು :

50'×4 ಮೊಳ ೧ಕ್ಕೆ ರೂ. 1-7-0

45'×4 ,, ,, ,, 1-5-0

36'×3 ,, ಟವಲು ,, 0-10-6

ಬೆಡ್ ಜಂಪಾನೆಗಳೂ, ಗಟ್ಟಿ ಬಿಳ್ಳಿದ ಸೀರೆಗಳೂ, ರಾಜಪಾಳ್ಯದ ಮತ್ತು ಅಂಚ್ರದ ತೆಳುವಾದ ಪಂಡೆಗಳೂ, ಪೇಟಾಗಳೂ, ವಲ್ಲಿಗಳೂ, ಕರವಸ್ತ್ರಗಳೂ ಇವೆ

ಪರವೂರಿನ ಆರ್ಡರುಗಳಿಗೆ ಶೇಕಡ ೨೫. ಮುಂಗಡವಿಲ್ಲದೆ ವಿ. ಪಿ. ರವಾನಿಸಲಾಗದು. ಅಳತೆಗಳನ್ನು ಕಳುಹಿಸಿದಲ್ಲಿ ಕೋಟು ಷರಟುಗಳನ್ನು ಹೊಲಿಸಿಯೇ ಕಳುಹಿಸುವೆವು. ಒಂದು ಬಾರಿಗೆ ೧೦೦ರೂ. ಗೆ ಕಡಿವೆಣಿಲ್ಲದೆ ಕೊಳ್ಳುವ ವ್ಯಾಪಾರಸ್ಥರಿಗೆ ರೂಪಾಯಿಗೆ ಅರ್ಧಾಣೆ ಕಮಿಷನ್ ಕೊಡಲಾಗುವುದು. ಒಟ್ಟೆಗಳ ಮಾದರಿ ಪುಸ್ತಕಕ್ಕೆ ಅಳತೆ ತಲೆಚೀಟಿ ಕಳುಹಿಸಬೇಕು.

ಈಗತಾನೆ ಹೊಸ ಸರಕು ಬಂದಿಳಿದಿದೆ.

ಖಾದಿ ವಸ್ತ್ರಾಲಯ, ಕೋಟೆ, ಬೆಂಗಳೂರು ಸಿಟಿ

ವಿಶ್ವಕರ್ನಾಟಕ

ಸ್ಥಿತಿಗತಿಗಳ ಸಿಂಹಾವಲೋಕನ

ಕಳೆದ ವಾರ 'ವಿದ್ಯಾರ್ಥಿ ಮುಷ್ಕರ ನಿವಾರಣೆ' ಯ ಸಮಿತಿಯು ಕೆಲಸ ಮಾಡಲು ಪ್ರಾರಂಭಿಸಿತು. ಶ್ರಿ ಸುಬ್ರಹ್ಮಣ್ಯಂ ಮುಂತಾದವರ ಮೇಲಿನ ಮೊಕದ್ದಮೆಯು ಮೊದಲನೆಯ ದರ್ಜೆಯ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಇನ್ನೂ ನಡೆಯುತ್ತಾ ಇದೆ. ಮೊದಲನೆಯ ಸಮಿತಿಯಿಂದ ಸದ್ಯ ಸ್ಥಿತಿಯಲ್ಲಿ ಯಾವ ಪ್ರಯೋಜನವೂ ಉಂಟಾಗಲಾರದೆಂದು ನಾವು ಹಿಂದೆಯೇ ಸೂಚಿಸಿದ್ದೇವೆ. ಗಣಪತಿಯ ಮುಷ್ಕರದ ವಿಷಯವಾಗಿ ಹುಡುಗರ ಮೇಲೆ ತಪ್ಪನ್ನು ಹೊರಿಸುವುದು ಈ ಸಮಿತಿಯ ಉದ್ದೇಶವಲ್ಲವೆಂದು ಸರಕಾರದವರು ಸಾರಿದ್ದಾರೆ. ಆದರೂ ಬೇರೆ ಬೇರೆ ಶಾಲೆಗಳಿಂದ ಮುಷ್ಕರದ ಕಾಲದಲ್ಲಿ ಪಾಠವನ್ನು ತಪ್ಪಿಸಿಕೊಂಡು ಹೋದ ಹುಡುಗರ ಪಟ್ಟಿಗಳನ್ನು ತರಿಸಿಕೊಂಡಿದ್ದಾರೆ ಎಂದು ನಾವು ಕೇಳುತ್ತೇವೆ. ಇದೇನೂ ಶುಭ ಸೂಚಕವಲ್ಲ. ಆದರೆ ಇತ್ತೀಚೆಗೆ ಸರಕಾರದವರು ತಮ್ಮ ಮನೋವೃತ್ತಿಯನ್ನು ಸ್ವಲ್ಪ ಮಟ್ಟಿಗೆ ಬದಲಾಯಿಸಿರುವುದರಿಂದ ಅವರು ತಮ್ಮ ವಾಕ್ಯವನ್ನು ಪಾಲಿಸಿ ಹುಡುಗರನ್ನು ಶಿಕ್ಷಿಸುವ ಗೋಜಿಗೆ ಹೋಗುವುದಿಲ್ಲವೆಂದು ನಾವು ಆಸಿಸುತ್ತೇವೆ. ವಿದ್ಯಾರ್ಥಿಗಳ ನಡತೆಯು ಈ ಕಾಲದ ಚಿಹ್ನೆಯೆಂದೂ ಅವರ ತೇಜಸ್ಸೂ ಶಕ್ತಿಯೂ ಸದ್ವಿನಿಯೋಗವಾಗುವಂತೆ ಮಾರ್ಗಗಳನ್ನು ಹುಡುಕುವುದೇ ತಮ್ಮ ಸಮಿತಿಯ ಕರ್ತವ್ಯವೆಂದೂ ಆ ಸಮಿತಿಯ ಅಧ್ಯಕ್ಷರಾದ ಶ್ರೀ. ಕೆ. ಆರ್. ಶ್ರೀನಿವಾಸೈಂಗಾರ್ಯರು ಮೊದಲನೆಯ ದಿನ ಹೇಳಿದರು. ಈ ಅಭಿಪ್ರಾಯವನ್ನು ನಾವು ಮನಃ ಪೂರ್ವಕವಾಗಿ ಅನುಮೋದಿಸುತ್ತೇವೆ.

ಖಾನ್ ಬಹದ್ದೂರ್ ಅಬ್ದಾಸ್ ಖಾನರು ಪೌರ ಸಭಾಧ್ಯಕ್ಷ ಪದವಿಗೆ ರಾಜೀನಾಮೆ ಕೊಟ್ಟದ್ದು ಎಲ್ಲರಿಗೂ ಆಶ್ಚರ್ಯವನ್ನುಂಟು ಮಾಡಿತು. ಇದರಿಂದ ಸರಕಾರದಲ್ಲಿ ಜನರಿಗೆ ತಕ್ಕಮಟ್ಟಿಗೆ ಭರವಸೆಯು ಪುನಃ ಅಂಕುರಿಸಲು ಅವಕಾಶವಾಗಿದೆ. ಖಾನ್ ಬಹದ್ದೂರರು ಹೇಳಿದಂತೆಯೇ ಅವರ ರಾಜೀನಾಮೆಯಿಂದ ನಗರ ಶಾಂತಿಯು ಹೆಚ್ಚುವುದರಲ್ಲಿ ಸಂಶಯವಿಲ್ಲ.

ಮೊನ್ನೆ ನಡೆದ ಗಲಭೆಗಳನ್ನು ಮುಸಲ್ಮಾನರು ಯಾವ ದೃಷ್ಟಿಯಿಂದ ನೋಡುತ್ತಾರೆ ಎಂಬುದನ್ನು ವಿಶದ ಪಡಿಸಿ ಮ. ರಾ. ಅಬ್ದುಲ್ ರಹಮಾನರು ಒಂದು ಪುಟ್ಟ ಪುಸ್ತಕವನ್ನು ಬರೆದು ಅದರ ಪ್ರತಿಯೊಂದನ್ನು ನಮಗೆ ಪ್ರಕಟಣೆಗಾಗಿ ಕಳುಹಿಸಿದ್ದಾರೆ. ಇದಕ್ಕಾಗಿ ನಾವು ಅವರನ್ನು ವಂದಿಸುತ್ತೇವೆ. ಈ ಪ್ರತಿಕೆಯು ವಾರ ಪತ್ರಿಕೆಯಾದುದರಿಂದಲೂ ಇನ್ನೂ ಅನೇಕ ಪ್ರಕೃತ ವಿಷಯಗಳಿಗೆ ಈ ಸಂಚಿಕೆಯಲ್ಲಿ ಎಡೆಗೊಡಬೇಕಾಗಿರುವುದರಿಂದಲೂ ನಾವು ಅದನ್ನು ಪ್ರಕಟಿಸಲಾಗಲಿಲ್ಲ.

"ಮುಸಲ್ಮಾನರೆಲ್ಲಾ ಒಟ್ಟು ಸೇರಿ ಈ ಗಲಾಟೆಗೆ ಕಾರಣ ಭೂತರಾಗಲಿಲ್ಲ; ಇದು ಹಿಂದೂ ಮುಸಲ್ಮಾನರ ಜಗಳವಲ್ಲ. ಇಂದು ಕೂಡ ಮುಸಲ್ಮಾನರೆಲ್ಲಾ ಇತರ ಜಾತಿಯ ಪ್ರಜೆಗಳೊಡನೆ, ಭ್ರಾತೃಭಾವದಿಂದಿದ್ದಾರೆ."

ಎಂದು ಅವರು ಉದ್ಘೋಷಿಸುವುದನ್ನು ನಾವು ಆನಂದದಿಂದ ಒಪ್ಪಿಕೊಳ್ಳುತ್ತೇವೆ. ನಾವು ಎಂದಿನಿಂದ ಹೇಳುತ್ತಿರುವುದೂ ಆ ಮಾತೇ. ಪುಂಡರಿಗೆ ಕುಲವಿಲ್ಲ; ಗೋತ್ರವಿಲ್ಲ. ಅವರೆಲ್ಲರೂ ಒಂದೇ ಜಾತಿ.

"ಅವರನ್ನಡಗಿಸುವ ಭಾಗದಲ್ಲಿ ಸರಕಾರದವರು ತಮ್ಮ ಕರ್ತವ್ಯವನ್ನು ಮಾಡಲಿಲ್ಲ, ಅಡಕೆಯಷ್ಟಿದ್ದುದನ್ನು ಆನೆಯಾಗಿ ಬೆಳೆಯುವುದಕ್ಕೆ ಪ್ರಭುತ್ವದವರು ತಮ್ಮ ಉದಾಸೀನತೆಯಿಂದ ಅವಕಾಶ ಕೊಟ್ಟರು. ಇದೇ ಗಲಭೆಗೆ ಮುಖ್ಯಕಾರಣ."

ಎಂಬುದನ್ನು ನಾವು ಮೊದಲಿನಿಂದ ಹೇಳುತ್ತಿದ್ದೇವೆ. ಮ. ರಾ. ರಹಮಾನರು ಹೇಳುವಂತೆ ಬುಡವಿಲ್ಲದ ಸುದ್ದಿಗಳನ್ನು ಹರಡಿ ಜನರಲ್ಲಿ ಅಶಾಂತಿಯನ್ನು ಹೆಚ್ಚಿಸುವುದು ತಪ್ಪು. ಸತ್ಯವಾದ ವೃತ್ತಾಂತವನ್ನು ಪ್ರಕಟಿಸುವುದೇ ಅತ್ಯುತ್ತಮವಾದ ಮಾರ್ಗವೆಂದು ನಾವು ಸಾರಿ ಹೇಳುತ್ತೇವೆ. ಎಷ್ಟೋ ವಿಷಯಗಳಲ್ಲಿ ಸರಕಾರದವರು ಸತ್ಯವನ್ನು ಮರೆ ಮಾಚಿರುವರು, ಮುಚ್ಚಿಟ್ಟಿರುವರು. ಕೆಲವು ಸಂದರ್ಭದಲ್ಲಿ ಬಣ್ಣ ಗಟ್ಟಿರುವರು. ಈ ರೀತಿಯ ನಡತೆಯಿಂದ ಜನರಿಗೆ ಸಂಶಯವು ಹೆಚ್ಚುವುದೇ ಹೊರತು ಅವರಲ್ಲಿ ಶಾಂತಿ ನೆಲಸಲಾರದು. ಸರಕಾರದವರು ಈ ಗಲಭೆಗಳ ವಿಚಾರವಾಗಿ ಮೊಟ್ಟ ಮೊದಲು ಪ್ರಕಟಿಸಿದ ಪ್ರಸಿದ್ಧ ಪತ್ರಿಕೆಗಳಲ್ಲಿ ಕೇವಲ ಸತ್ಯವಾದ ವಿಷಯಗಳನ್ನೇ ತಿಳಿಸಿದ್ದರೆ ಇಂದಿನ ಪರಿಸ್ಥಿತಿಯೇ ಬೇರೆಯಾಗಿರುತ್ತಿದ್ದಿತು. ಮ. ರಾ. ರಹಮಾನರು ತಮ್ಮ ಪುಸ್ತಕದಲ್ಲಿ ಬರೆದಿರುವ ಸಂಗತಿಗಳೆಲ್ಲಾ ಸತ್ಯವಾದ ಸಂಗತಿಗಳೆಂದಾಗಲಿ ನಿಶ್ಚಿತವಾದ ವಿಷಯಗಳೆಂದಾಗಲಿ ಹೇಳುವಂತಿಲ್ಲ. ಈ ವಿಚಾರದಲ್ಲಿ ಅವರು ತಮ್ಮ ನಿಯಮವನ್ನು ತಾವೇ ಮೀರಿರುವರು. ನಿರಾಧಾರವಾದ ಎಷ್ಟೋ ಸಂಗತಿಗಳನ್ನು ಸಾರಿರುವರು. ಸಲ್ಲದ ದೂರುಗಳನ್ನು ಹೊರಿಸಿರುವರು, ಸರಕಾರದ ದೋಷಗಳ ವಿಷಯದಲ್ಲಿ ಒಂದು ಮಾತೂ ಕಾಣಬರದಿರುವುದೊಂದು ಈ ಪುಸ್ತಕದಲ್ಲಿನ ವಿಶೇಷ ಸಂಗತಿ. ಈ ದೋಷಗಳಿದ್ದರೂ ಈ ದೇಶದ ಸಕಲ ಪಂಗಡಗಳ ಪ್ರಜೆಗಳಲ್ಲೂ ಭ್ರಾತೃಭಾವವನ್ನು ಬಿತ್ತುವ ಉದ್ದೇಶದಿಂದ ಈ ಪುಸ್ತಕವು ಬರೆಯಲ್ಪಟ್ಟುದೆಂದು ಅವರು ಹೇಳಿರುವುದರಿಂದ ನಾವು ಮ. ರಾ. ರಹಮಾನರನ್ನು ಅಭಿನಂದಿಸುತ್ತೇವೆ.

ಶ್ರೀ ಮಾಜಯ್ಯನವರ ಕೋರ್ಟಿನ ವಿಚಾರಣೆಯಂತು ಗಂಗಾಪ್ರವಾಹದಂತೆ ತಡೆಯಿಲ್ಲದೆ ಹರಿಯುತ್ತಿದೆ. ಆ ದಿನ ನಡೆದ ಅಪರಾಧಗಳ ಸುಳಿವೇ ತಿಳಿದಿಲ್ಲವೆ? ನಾಲ್ಕಾರು ಅಪರಾಧಿಗಳನ್ನು ಗುರುತಿಸುವುದಕ್ಕೆ ತಕ್ಕಷ್ಟು ಸಾಕ್ಷ್ಯಕೂಡ ದೊರೆತಿಲ್ಲವೆ? ಹಾಗೆ ದೊರೆತಿದ್ದರೆ ಕ್ರಮವಾಗಿ ನ್ಯಾಯಸ್ಥಾನದಲ್ಲಿ ವಿಚಾರಣೆಯನ್ನು ಸರಕಾರದವರು ಆರಂಭಿಸಬೇಕು. ತಡಮಾಡಿದಷ್ಟೂ ಕೇಡು. ಒಂದುವರೆತಿಂಗಳಾದರೂ ಹಾಗೆ ಸಾಕ್ಷ್ಯದೊರೆತಿಲ್ಲದಿದ್ದರೆ ಶ್ರೀ ಮಾಜಯ್ಯನವರ ವಿಚಾರಣೆಯನ್ನು ನಿಲ್ಲಿಸುವುದು ಉತ್ತಮ. ಇಷ್ಟು ದಿವಸವಾದರೂ ಸಾಕಾದಷ್ಟು ಸಾಮಗ್ರಿ ದೊರೆತಿಲ್ಲದಿದ್ದರೆ ಮುಂದೆ ದೊರಕುವುದು ಕೇವಲ ಅಸಂಭವ.

ಸರ್ ವಿಶ್ವೇಶ್ವರಯ್ಯನವರ ಸಮಿತಿಯು ಆಗಲೇ ವಿಚಾರಣೆಯನ್ನಾರಂಭಿಸಿದೆ. ಅದರಿಂದುಂಟಾಗಬಹುದಾದ ಪ್ರಯೋಜವನ್ನೂ ಅದರ ಕೆಲಸದ ಸಮರ್ಪಕತೆಯ ಆಳತೆಯನ್ನೂ ನಿರ್ಧರಿಸುವುದಕ್ಕೆ ಈಗಲೇ ಆಗುವುದಿಲ್ಲ. ಇದುವರೆಗಿನ ವಿಚಾರಣೆಯಲ್ಲಿ ಅತೃಪ್ತಿಗೆ ಅಂತಹ ಕಾರಣವಿಲ್ಲವೆಂದು ಹೇಳಬಹುದು. ಈ ಸಮಿತಿಯ ರಚನೆಯಲ್ಲಿ ಜನಸಾಮಾನ್ಯಕ್ಕೆ ಪೂರ್ಣ ವಿಶ್ವಾಸವಿಲ್ಲದುದರಿಂದ ಸಮಿತಿಯು ಜಬಾಬ್ದಾರಿಯು ಹೆಚ್ಚಿತೆಂದೇ ಹೇಳಬೇಕು. ಸಮಿತಿಯ ಸದಸ್ಯರಲ್ಲಿ ಪ್ರತಿಯೊಬ್ಬರೂ ನ್ಯಾಯಾಧೀಶರಂತೆ ವರ್ತಿಸಬೇಕಲ್ಲದೆ ಬೇರೆಬೇರೆ ಪಕ್ಷಗಳ ವಕೀಲರಂತೆ ವರ್ತಿಸಬಾರದು. ಸಾಕ್ಷಿಗಳು ಯಾರೇ ಆಗಲಿ ನಿರ್ದಾಕ್ಷಿಣ್ಯವಾಗಿ ಪ್ರಶ್ನಿಸಿ ವಿಷಯಗಳನ್ನು ತಿಳಿದುಕೊಳ್ಳಬೇಕು. ರಹಸ್ಯವಾದ ವಿಚಾರಣೆಯನ್ನು—ಕೇವಲ ಅಗತ್ಯವಾದಾಗ ಹೊರತು—ಮಾಡಲೇಬಾರದು. ಈ ಸಮಿತಿಯು ಸರಕಾರದಿಂದ ನೇಮಿತವಾಗಿರುವದೇನೋ ನಿಜ. ಆದರೆ ಈ ಗಲಭೆಗೆ ಸಂಬಂಧಪಟ್ಟಿರುವರೆಂದು ಯಾರ ಯಾರ ವಿಷಯದಲ್ಲಿ ಜನರಿಗೆ ಸಂಶಯವಿದೆಯೋ ಅಂತಹರನ್ನೆಲ್ಲಾ ವಿಚಾರಣೆ ಮಾಡಬೇಕು. ದಿವಾನರ ವಿಚಾರಣೆಯು ಆಗಬೇಕಾದುದು ಅತ್ಯಾವಶ್ಯಕ. ಆ ದಿನ ಮಧ್ಯಾಹ್ನ ಅವರ ಭವನದಲ್ಲಿ ನಡೆದುದಕ್ಕೆಲ್ಲಾ ಅವರು ಪ್ರತ್ಯಕ್ಷದರ್ಶಿಗಳಾಗಿರುತ್ತಾರೆ. ಅವರೇ ವಿನಾಯಕನ ಸ್ಥಾನಪಲ್ಲಟಕ್ಕೆ ಕಾರಣಕರ್ತರೆಂದು ಎಷ್ಟೋ ಜನರು ಸಂಶಯಪಡುತ್ತಾರೆ. ಆ ದಿನ ಸವಾರರನ್ನು ಕರೆಸಿದವರೂ ಅವರೇ ಎಂದು ಕೂಡ ಹೇಳುತ್ತಾರೆ. ಇದಕ್ಕೆ ಆಧಾರವಿರಬಹುದು, ಇಲ್ಲದಿರಬಹುದು. ಆದರೆ ಸಮಿತಿಯವರು ನಿರ್ಧರಿಸಬೇಕಾದ ವಿಷಯಗಳಲ್ಲಿ ಇವೂ ಮುಖ್ಯವಾದುವು. ಅಸತ್ಯವಾದ ಮತ್ತು ಅನಿಶ್ಚಿತವಾದ ಸಂಗತಿಗಳನ್ನೊಳಗೊಂಡ ಪ್ರಸಿದ್ಧ ಪತ್ರಿಕೆಗಳನ್ನು ರಚಿಸಿದವರಾರು, ಹೊರಡಿಸಿದವರಾರು, ಹಾಗೆ ಮಾಡಲು ಕಾರಣವೇನು, ಲಂಡನಿನ ಪತ್ರಿಕೆಗೆ ವರ್ತಮಾನವನ್ನು ಕಳುಹಿಸಿದ ವಿಚಾರ, ಇವೆಲ್ಲಾ ವಿಚಾರಣೆಗೆ ಬರಬೇಕು. ಪೋಲೀಸ್ ಶಾಖಾಧಿಕಾರಿಗಳು, ಜಿಲ್ಲಾ ಮ್ಯಾಜಿಸ್ಟ್ರೇಟರು, ವಿದ್ಯಾಭ್ಯಾಸ ಶಾಖಾಧಿಕಾರಿಗಳು ಇವರುಗಳ ವಿಚಾರಣೆಯೂ ಆಗಬೇಕು. ಕೆಲವು ವೃತ್ತ ಪತ್ರಿಕೆಗಳ ಬಾಯಿಗೆ ಬೀಗಹಾಕಿದುದರ ಯುಕ್ತಾಯುಕ್ತತೆಯೂ ವಿಮರ್ಶಿಸಲ್ಪಡಬೇಕು. ಈ ವಿಷಯಗಳೆಲ್ಲವನ್ನೂ ಸರಕಾರದವರೂ ಸಮಿತಿಯವರೂ ಗಮನಿಸುವರೆಂದು ನಂಬುತ್ತೇವೆ.

ರಾಜಗಣಪತಿ ಕ್ಷೇತ್ರದಲ್ಲಿ ಚಂದ್ರರಾಜನ ಹೇಳಿಕೆ

"ನಾನು ಸಾಯಂಕಾಲ ೫ಕ್ಕೆ ಮನೆ ಬಿಟ್ಟೆ. ಆಲ್ಲಿ ಇಲ್ಲಿ ತಿರುಗಾಡಿಕೊಂಡು ಪೂಜೆನೋಡಲು ಇಳ್ಳಿಗೆ ೭ ಘಂಟೆಗೆ ಬಂದೆನು. ಬಹಳ ಜನರಿದ್ದರು. ನೋಡಬೇಕೆಂದು ಕಾಂಪೌಂಡು ಗೋಡೆ ಹತ್ತಿ ಗಣೇಶನ ಕಡೆ ತಿರುಗಿಕೊಂಡು ಕೂತಿದ್ದೆನು. ಮಂಗಳಾರತಿಯಾಯಿತು. ಸ್ವಲ್ಪ ಹೊತ್ತಿನೊಳಗಾಗಿ ಹಿಂದಿನಿಂದ ಎಡಭುಜದ ಹತ್ತಿರ ಗುಂಡಿನೇಟುಬಿತ್ತು. ಕೆಳಕ್ಕೆ ಬಿದ್ದೆ. ಯಾರೋ ಹುಡುಗರು ಮನೆಗೆ ಕರೆದುಕೊಂಡುಹೋದರು"

'ದೀನದಾರ'ನ ಕೀರ್ತಿ ಪ್ರತಾಪ

ದೀನದಾರ ಜನ್ನಬಸವೇಶ್ವರನೆಂಬ ಅಂಕಿತದ ವ್ಯಕ್ತಿಗಳೊಬ್ಬನು ಉತ್ತರ ಕರ್ನಾಟಕದಲ್ಲಿ ಬಹಳ ಕೀರ್ತಿಸಂಪಾದನೆಯನ್ನು ಮಾಡಿದ್ದಾರೆ. ಅವರ ವಿಚಾರವಾಗಿ ನಾಡಿನ ಪತ್ರಿಕಾಧಿಪ್ರಾಯಗಳನ್ನು ಇಲ್ಲಿ ಸಂಗ್ರಹಿಸಿರುತ್ತೇವೆ. ಸಂ.

ಮಾಡಿದ್ದುಣ್ಣೋ ಮಹರಾಯ

'ದೀನದಾರ'ದಂಥ ಪತ್ರಿಕೆಗೂ ಅವರ ಚಾಲಕರಿಗೂ ಬೆಂಗಳೂರಲ್ಲಿ ಜೀರು ಬಿಡಲು, ಅವಕಾಶ ಕೊಡುವದು, 'ವಿಶ್ವಕರ್ನಾಟಕ', 'ತಾಯಿನಾಡು' ಗಳಂಥ ಪತ್ರಿಕೆಗಳಿಗೆ ಜೀಗಮುದ್ರೆ ಹಾಕಿಸುವದು ''ಕಣಿಯರ ಸತ್ಯಾಗ್ರಹ'' ಪತ್ರಿಕೆಯನ್ನು ಲೆಕ್ಕವಿಲ್ಲದಂತೆ ಮುಟ್ಟುಕೋಲಿಗೆ ಗುರಿಮಾಡುವದು ಪ್ರಜೆಗಳಿಗೆ ಮಾಸ್ಟರಾಗಿದ್ದ ಮುಖಂಡರಿಗೆ ಬಾಯಿಯಲ್ಲಿಡುವದು, ಜನರ ಖಾಸಗಿ ಪತ್ರವ್ಯವಹಾರಗಳ ಮೇಲೆ ಕಣ್ಣಿಡುವದು ಇವೇ ಮೊದಲಾದ ದಬ್ಬಾಳಿಕೆಗೆ ಅಸ್ಪದವಿಲ್ಲದಂತೆ ನಡೆಯುವದೇ ಶ್ರೇಷ್ಠರಾಜನ ಲಕ್ಷಣವು, ಸವಣೂರ ನವಾಬರುಮುಸಲ್ಮಾನರಿದ್ದರೂ 'ದೀನದಾರ'ರ ಜಳಪಕ್ಕೆ ಅವರು ಅಸ್ಪದ ಕೊಡಲಿಲ್ಲ. ಆದರೆ ಬೆಂಗಳೂರಲ್ಲಿ ಮಾತ್ರ ಉಳಿದ ಪತ್ರಿಕೆಗಳಿಗೆ ತೊಂದರೆ ಕೊಟ್ಟ ಕೇವಲ ದೀನದಾರನಿಗೆ ಆಶ್ರಯ ಕೊಟ್ಟದ್ದಕ್ಕಾಗಿ ''ಮಾಡಿದ್ದುಣ್ಣೋ ಮಹಾರಾಯ'' ಎಂಬ ನಾಣ್ಣುಡಿಯ ಅರ್ಥವನ್ನು ಮೈಸೂರು ಸರ್ಕಾರವು ಈಗ್ಗೆ ತಿಳಿದುಕೊಳ್ಳಬೇಕಾಗಿದೆ. ಈಗಲಾದರೂ ಮಹಾರಾಜರು ಯೋಗ್ಯ ಮಾರ್ಗವೆನ್ನೇ ತಮ್ಮ ನಾಕರರು ಕೈಕೊಳ್ಳುವಂತೆ ಆಜ್ಞೆ ಕೊಡುವದು ಅವಶ್ಯವಿದೆ.

—ಕನ್ನಡಿಗ (೨೬–೮–೨೮)

ಬೆಂಗಳೂರು ದೊಂಬಿಯ ಕಾರಣಗಳು

ಈ ಕಾರಣಗಳ ಬಗ್ಗೆ ಬಹು ಜನರಿಗೆ ಸ್ಪಷ್ಟ ಕಲ್ಪನೆಯಿರಲಿಕ್ಕಿಲ್ಲ. ತಾನೇ ಜನ್ನಬಸವೇಶ್ವರನೆಂದು ಹೇಳಿಕೊಳ್ಳುವ ಸಿದ್ದೀಕನ ಹೆಸರು ಈ ಪ್ರಾಂತದವರಿಗೆ ಪರಿಚಿತವೇ ಇರುವದು. ಅವನ ಉದ್ದತನವನ್ನು ಬಗ್ಗುಬಡೆಯುವದಕ್ಕಾಗಿ ಇತ್ತ ಪ್ರಯತ್ನಗಳೂ ಆದವು. ಇಂಥ ಔದ್ಧತ್ಯವನ್ನು ತಾಳುವ ಧೈರ್ಯವು ಅವನಿಗೆ ಬಹಳೇ ದೊಡ್ಡವರ ಬೆಂಬಲದಿಂದ ಬಂದಿರುವದು ಸಹಜವು. ಈ ಪ್ರಾಂತದಲ್ಲಿ ಎಲ್ಲಿಯೂ ಅವನ ಆಟವು ನಡೆಯದಿದ್ದರೂ ಮೈಸೂರ ಸಂಸ್ಥಾನದಲ್ಲಿ ಅವನು ನೆಲೆಯಾಗಿ ನಿಂತು ತನ್ನ ನೀಚ ಕಾರ್ಯವನ್ನು ನಡೆಸಿದನು. ಕೃಷ್ಣರಾಜ ಒಡೆಯರ ರಾಜ್ಯದಲ್ಲಿ ಅವನಿಗೆ ಆತಂಕವಾಗದಿರುವದು ಆಶ್ಚರ್ಯವೇ ಸರಿ. ಇದರಿಂದ ಮೈಸೂರಲ್ಲಿ ಬೇರೆ ಜನರ ರಾಜ್ಯವೇ ಇರುವದೆಂಬುದು ಸಿದ್ಧವಾಗುತ್ತವೆ. ಸಿದ್ದೀಕನ ಸಾಹಸಕ್ಕೆ ಏನಾದರೊಂದು ಉದ್ದೇಶವಿರಲೇಬೇಕು. ಮೈಸೂರು ರಾಜ್ಯದ ಕೆಲ ಮಹಮ್ಮದೀಯರು ಮೊದಲಿನಿಂದಲೂ ಅವನಿಗೆ ದೊರೆತು ಕುಲಕೆಡಿಸುವ ತನ್ನ ಕಾರ್ಯಕ್ಕೆ ಅವನು ಯಾವ ಮರ್ಮಾದೆಯನ್ನೂ ಹಾಕಿದಂತೆ ತೋರುವದಿಲ್ಲ. ಅಜ್ಞ ಮುಸಲ್ಮಾನರ ಧರ್ಮಾಂಧತನದ ಲಾಭವನ್ನು ಪಡೆದು ದೊಂಬಿಯನ್ನುಂಟು ಮಾಡುವದು ದೊಡ್ಡ ಕೆಲಸವಲ್ಲ. ಕಾಫರರನ್ನು ಶಿಕ್ಷಿಸುವ ಕೆಲಸದಲ್ಲಿ ಸುಜ್ಞ ಮುಸಲ್ಮಾನರೂ ಸಹಾಯಕರಾಗಿ ಸೂತ್ರಧಾರಿಗಳಾಗಿರಬಹುದು. ಮೇಲಾಗಿ ಮೈಸೂರ ರಾಜ್ಯದಲ್ಲಿನವರಿಷ್ಠ ಅಧಿಕಾರ ಸ್ಥಳಗಳಲ್ಲಿ ಮುಸಲ್ಮಾನರು ಹೇರಳವಾಗಿರುವರು. ಅವರೆಷ್ಟು ನಿಷ್ಪಕ್ಷಪಾತದ ಆಡಳಿತವನ್ನು ತೊಟ್ಟರೂ ಅಸಹಿಷ್ಣುವಾದ ಮುಸಲ್ಮಾನ ಧರ್ಮದವರಾದ್ದರಿಂದ ಮಹಮ್ಮದೀಯರ ದುಷ್ಟತನವನ್ನು ತಿಳಿಯದಿರುವದು ಸಾಧ್ಯವಾಗಿದೆ. ಕರ್ಮವೀರ (೩–೮–೨೮)

ಕಪಟತಂತ್ರ

ಬೆಳಗಾಂವಿ, ಧಾರವಾಡ, ಗದಗ, ಹುಬ್ಬಳ್ಳಿ ಮೊದಲಾದ ಸ್ಥಳಗಳಲ್ಲಿ ಸರಕಾರದಿಂದ ಮಂಗಳಾರತಿ ಮಾಡಿಸಿಕೊಂಡ ಸಿದ್ದೀಕನೆಂಬ ತುರುಕನು ಈಗ ಕೆಲವು ದಿವಸಗಳಿಂದ ಬೆಂಗಳೂರಲ್ಲಿಯೇ ಬೀಡು ಬಿಟ್ಟಿರುವನು. ತಾನು ಜನ್ನಬಸವೇಶ್ವರನ ಅವತಾರಿಯೆಂದು ನಾರಿ ವೀರಶೈವರನ್ನು ಮರುಳುಮಾಡಿ ಅವರನ್ನು ಮುಸಲ್ಮಾನೀ ಧರ್ಮಕ್ಕೆ ಸೇರಿಸುವ ಕಪಟ ತಂತ್ರವನ್ನು ಈ ಧೂರ್ತನು ಹಲವು ದಿನಗಳಿಂದಲೂ ಸಾಧಿಸಬೇಕೆಂದಿದ್ದಾನೆ. ಈತನಿಗೆ ಉತ್ತರ ಹಿಂದು ಸ್ಥಾನದೊಳಗಿನ ಅನೇಕ ತಲೆತಿರುಕ ಮುಸಲ್ಮಾನರ ಸಹಾಯವಿರುವದಂತೆ! ಬ್ರಿಟಿಷ್ ಕರ್ನಾಟಕದ ಜನರು ಇವನನ್ನು ಹೊಡೆದೋಡಿಸಲಾಗಿ ಈ ಪುಂಡನು ಮೈಸೂರಿನ ರಾಮರಾಜ್ಯವನ್ನು ಸೇರಿ ತನ್ನ ಕಾಯಕವನ್ನು ಅವ್ಯಾಹತವಾಗಿ ನಡಿಸಿರುವನು. ಇಬ್ಬರು ಮಹಮ್ಮದೀಯ ವಕೀಲರನ್ನು ಮುಂದೆ ಮಾಡಿ ಬೆಂಗಳೂರಲ್ಲಿ 'ದೀನದಾರ್' ಎಂಬ ಕನ್ನಡ ಪತ್ರಿಕೆಯನ್ನು ಪ್ರಕಟಿಸಿ ಇಸ್ಲಾಂ ಧರ್ಮವನ್ನು ಸೇರುವಂತೆ ವೀರಶೈವರಿಗೆ ಸಾರುತ್ತಿರುವನಂತೆ ವೀರಶೈವ ಮಹಾಜನರು ಅನೇಕ ಸಭೆಗಳನ್ನು ಕೂಡಿಸಿ ಈ ಸಿದ್ದೀಕನನ್ನು ಪಾರುಪತ್ಯಮಾಡಬೇಕೆಂದು ಸರಕಾರಕ್ಕೆ ಬಿನ್ನಹಸಿದರೂ ಉಪಯೋಗವಾಗಲಿಲ್ಲ

—ಕರ್ನಾಟಕ ವೃತ್ತ.

ನಿಷವಾಹಿನೀ

ಸಿದ್ದೀಖ್ ದೀನ್‌ದಾರ್ ಜನ್ನಬಸವೇಶ್ವರನು ಕರ್ನಾಟಕಕ್ಕೆ ಅಪರಿಚಿತನಲ್ಲ. ಮೈಸೂರಿಗೂ ಹೊಸಬನಲ್ಲ. ಒಂದೆರಡು ಬಾರಿ ಇವನ 'ಕಾರುಬಾರಿ'ನ ಗಂಧವನ್ನರಿತ ಮೈಸೂರು ಆಡಳಿತಗಾರರು ಈತನನ್ನು 'ಹದ್ದಿ'ನಲ್ಲಿರಿಸುವ ಉದ್ದಿಶ್ಯದಿಂದ ಪ್ರಭುತ್ವಶಸ್ತ್ರಗಳ ಮೇಲಿನ ದೂಳನ್ನು ಕೊಡವಿದಹಾಗೆ ಸೆನಪಿದೆ. ಈತನೀಗ ಬೆಂಗಳೂರಲ್ಲಿ 'ದೀನದಾರ ಬಸವಸಮಾಜ' ವೆಂಬ ಮಠವೊಂದನ್ನು ಸ್ಥಾಪಿಸಿರುವನು. ಅಲ್ಲಿಂದ 'ಜಗದ್ಗುರು' ಎಂಬ ಗ್ರಂಥವೊಂದನ್ನು ಮುದ್ರಿಸಿ, ಪ್ರಕಟಿಸಿರುವನು.

"ಭಗವಂತನು ದೀನನಾಥ ನನ್ನನ್ನು ತನ್ನ ಸಾನ್ನಿಧ್ಯದಲ್ಲಿ ಸೇರಿಸಿ ಪೂರ್ವೀಕರ ಕಾರ್ಯವನ್ನು ಪುನಃ ನನಗೆ ವಹಿಸಿರುತ್ತಾನೆ."

"ಸದ್ಯಕ್ಕೆ ಪ್ರಪಂಚದಲ್ಲಿ ಅನೇಕ ಜಗದ್ಗುರುಗಳುಂಟಾಗಿ ಜಗದ್ಗುರುಗಳ ಪಂಥವೇ ಆಗಿರುತ್ತವೆ. ಇದರ ನಿವಾರಣೋದ್ದೇಶವಾಗಿ ಪರಮಾತ್ಮನು ನನ್ನನ್ನು ಪ್ರಪಂಚದಲ್ಲಿ ಕಳುಹಿಸಿರುತ್ತಾನೆ."

ಇಂತಹ ವಚನ ರತ್ನಗಳಿಂದ ಪ್ರಸ್ತಾವನೆಯು ಶೋಭಿತವಾಗಿದೆ. 'ಹಜರತ್ ಪೈಗಂಬರರ ಜಗತ್ತಿನ ಗುರುತ್ವವನ್ನು ಸಾಧಿಸುವ' ಗ್ರಂಥವಿದು. ತಮ್ಮ ಉದ್ದೇಶ (ಇಸ್ಲಾಂ ಧರ್ಮಪ್ರಚಾರ)ವನ್ನು ಸಾಧಿಸುವದಕ್ಕಾಗಿ ಸಿದ್ದೀಕರು ಹಾಕಿರುವ ವೇಷ, ಅವರಾಡುವ ಭಾಷೆಯೇ ನಾಳಿನ ಶಾಂತಿಸಮಾಜವ ಎಸೆಯಲ್ಲಿ ದ್ವೇಷತರಂಗಗಳನ್ನು ಎಬ್ಬಿಸಲಿಕ್ಕೆ. ಗ್ರಂಥದಲ್ಲಿ ಪರಮತಗಳ ನಿಂದೆಯೇ ದೀನದಾರರ ಪಲ್ಲವಿ. ನಿಂದಾವಚನಗಳು ಹಲವೆಡೆ ಭೀಭತ್ಸರಸಭರಿತವಾಗಿವೆ. ಈ ಪುಸ್ತಕದಿಂದ ಭಾಗಗಳನ್ನು ಎತ್ತಿ ಬರೆದು ವಾಚಕರ ಮನಸ್ಸನ್ನು ಮಲಿನಗೊಳಿಸುವ ಪಾಪಕಾರ್ಯಕ್ಕೆ ನಾವು ಹೋಗುವುದಿಲ್ಲ. ಗ್ರಂಥವು ೮—೯ ಚಿತ್ರಪಟಗಳಿಂದ ಬೇರೆ ಅಲಂಕೃತವಾಗಿದೆ. ಅವುಗಳಲ್ಲಿ 'ಜನ್ಮಬಂಧನಚಿತ್ರ' (ಪು. ೧೩೦) 'ವಾಲ್ಮೀಕಾಶ್ರಮ' (ಪು. ೧೩೫) 'ಮಿಲ್ಕಲಂಗಿ' (ಪು. ೧೯೧) 'ಶ್ರೀ ಕೃಷ್ಣನು ಮಾಡಿದ ಯಾಗ' (ಪು. ೨೧೬) ಮುಂತಾದುವು ಸನಾತನ ಮತಾವಲಂಬಿಗಳ ಮನಸ್ಸಿಗೆ ಬಹು ವ್ಯಥೆಯನ್ನು ಅಸಹ್ಯವನ್ನು ಹುಟ್ಟಿಸುತ್ತವೆ. ಇಂತಹ ಗ್ರಂಥವನ್ನು ಪೆಂಸೂರಾಯ್ಡ ಹೇಗೆ ಮುದ್ರಿಸಲಾಯಿತು! ಸಿದ್ದೀಕನಿಗೆ ಮೈಸೂರು ದೇಶದಲ್ಲಿ ವಿಷವಾಹಿನಿಯನ್ನು ಹರಿಸಲು ಹೀಗೆ ಅವಕಾಶ ಸಿಕ್ಕಿತು? ಎಂದೆಲ್ಲಾ ಪ್ರಶ್ನೆಗಳಿಗೆ ಉತ್ತರ ಪಡೆಯಲು ದೇಶ ಹಿತೈಷಿಗಳೆಲ್ಲರೂ ಧರ್ಮಾರ್ತಿಪ್ತಮುಸ್ಲಿಮರೆಲ್ಲರೂ ನಿರ್ಮಂಡನೆಯಿಂದ ಪ್ರಯತ್ನಮಾಡಬೇಕು.

ಈ ಸಿದ್ದೀಕರು ಪ್ರಭಾವವು ಮೈಸೂರು ಒಕ್ಕಲಾಡಿತನ್ನು ಹೊಕ್ಕಿದೆ. ಅವರ ವಿಷವಾಹಿನಿಯು ಸಹಸ್ರಾರು ನಾಲಿಗೆಗಳಲ್ಲಿ ಹರಿದು ಹಳ್ಳಿಹಳ್ಳಿಗಳಲ್ಲಿ ಅವತಾರವೆತ್ತುತ್ತಿದೆ. ('ಸುಜ್ಞಾನರತ್ನ ಪ್ರಭಾ' ಎಂಬುದೊಂದು ಈ ಗ್ರಂಥದ ಮರಿ)

ಸಿದ್ದೀಕರು ಈ ಉದ್ಯಮದಲ್ಲಿ ಬಂದು ಹುಲು ಅಂಗ ಮಾತ್ರ. ಪ್ರಧಾನಾಂಗಗಳು ಅನೇಕವಿವೆ. ಅವುಗಳಲ್ಲಿ ದೆಹಲಿ ನಿವಾಸಿಗಳಾದ ಖ್ವಾಜಾಹಸನ್ ನಿಜಾಮಿ ಎಂಬವರೊಂದು ಮುಖ್ಯಾಂಗ. ಇವರ ಪ್ರಭಾವವು ಅಂತಿಂತಹುದಲ್ಲ. ಧರಣಿಮಂಡಲದೆಲ್ಲೆಲ್ಲ ಕೊಡುಬರುವ 'ವಿಷವಾಹಿನಿ'ಗೆ ಮೂಲಸ್ಥಾನವಿವರ ಬಗೆ. ಇವರು 'ದಾ ಇಮೆ ಇಸ್ಲಾಂ' (ಇಸ್ಲಾಮ ಪ್ರಚಾರಕ) ಎಂಬ ಗ್ರಂಥವನ್ನು ಬರೆದು ಅದರಲ್ಲಿ

"ನಾನು ಹಿಂದುಗಳನ್ನು ಮುಸಲ್ಮಾನರನ್ನಾಗಿ ಮಾಡಲಿಕ್ಕೆ ಬರುವ ಯಾವಯಾವ ಮಾರ್ಗಗಳಿರುವುವೋ ಅವುಗಳನ್ನು ಕ್ರಮವಾಗಿ ಹೇಳಲಿಕ್ಕೆ ಈಗ ಪ್ರಾರಂಭವಾಡುವೆನು".

ಎಂಬದಾಗಿ ಮೊದಲಟ್ಟಿರುವರು.

ವಿಶ್ವಕರ್ನಾಟಕ (೨೨–೮–೨೮)

ದಿವಾನರೂ ವರ್ತಮಾನ ಪತ್ರಿಕೆಗಳೂ

ಪತ್ರಿಕೆಗಳನ್ನು ಜರಿದು ಅವುಗಳೇ ಈ ಗಲಾಟೆಗಳಿಗೆ ಕಾರಣಭೂತರೆಂದು ಹೇಳುವುದು ಯಾವ ಜವಾಬ್ದಾರೀ ಅಧಿಕಾರಿಗೂ ಸರಿಯಾದುದಲ್ಲ. ಅದರಲ್ಲೂ ದಿವಾನರೇ ಹೀಗೆ ಹೇಳುವುದೆಂದರೆ ಅಡಕ್ಕಿಂತಲೂ ಅಸಭ್ಯವಾದುದು ಯಾವುದೂ ಇಲ್ಲವೆಂದು ಹೇಳಬೇಕಾಗುವುದು. ದಿವಾನರಿಗೆ ವರ್ತಮಾನ ಪತ್ರಿಕೆಗಳ ವಿಷಯದಲ್ಲಿ ಎಷ್ಟು ಸಹಾನುಭೂತಿಯೂ, ಸಹನೆಯೂ ಇರುವುದು ಎಂಬುದು ಇದರಿಂದಲೇ ಸ್ಪಷ್ಟವಾಗುವುದು. ದಿವಾನರಂತಹ ಜವಾಬ್ದಾರೀ ಅಧಿಕಾರಿಗಳು ಅನಿರ್ದೇಶವಾಗಿಯೂ, ಸರ್ವ ಸಾಮಾನ್ಯವಾಗಿಯೂ ವರ್ತಮಾನಪತ್ರಿಕೆಗಳಮೇಲೆ ಅನ್ಯಾಯವಾದ ಮತ್ತು ರಜುವಾತಿಗೆ ಸಲ್ಲದ ದೋಷಾರೋಪಣೆಯನ್ನು ಮಾಡುವುದೇ ನಮ್ಮ ಸರಕಾರದ ಸಂಕೋಚದೃಷ್ಟಿಯ ಮತ್ತು ಅವಿವೇಕದ ದ್ಯೋತಕವು.

ತಾಯಿನಾಡು (೨೮–೮–೨೮)

ಬೆಂಗಳೂರು, ಶಿವಮೊಗ್ಗ, ಮತ್ತು ಕೆಜೂರು ವಿ ಪ್ರದರ್ಶನಗಳಲ್ಲಿ ಬೆಳ್ಳಿ ಪದಕಗಳನ್ನು, ಸರ್ವಾಧಿಕೇಸಿಗಳು ಪಡೆದ

ಉತ್ತಮ ಕಾಫಿ ಪುಡಿ

ಕಾಫಿ ಕುಡಿದರಾಯಿತೆ?

ಶ್ರೀ ದತ್ತಾತ್ರೇಯ ಕಾಫಿ

ಹಳೇದೀಪಟಿಯ ೬ ಪೌಂಡಿನ ಟಿನ್ನಿಗೆ ರೂ

ಶ್ರೀ ದತ್ತಾತ್ರೇಯ ಕಾಫಿ ಕಾರ್ಖಾ

(ಬ್ರಾಂಚ್—ಹಳೇಚರಗುಪೇಟೆ)

'ವಿಶ್ವಕರ್ಣಾಟಕ'

ಭಾದ್ರಪದ ೨ ಭಾನುವಾರ

ಆಂಗ್ಲ ಪತ್ರಿಕೆಗಳ ಆಭ್ಯಾಟ

ಮಾದರಿ ಸಂಸ್ಥಾನವೆಂದು ಹೆಸರುಗೊಂಡ ಮೈಸೂರಿಗೆ ಇತ್ತೀಚಿಗೆ ನಡೆದ ಬೆಂಗಳೂರು ನಗರದ ಗಡಿಬಿಡಿಯು ಕಳಂಕವನ್ನು ತಂದಿರುವುದು ಸಹಜವಾಗಿದೆಯಷ್ಟೆ. ಈ ಸಂದರ್ಭದಲ್ಲಿ ಆಂಗ್ಲೇಯ ಪತ್ರಿಕೆಗಳಲ್ಲಿ ಅಗ್ರಗಾಮಿಯೆನಿಸಿ ಮುಂಬಯಿಯಲ್ಲಿ ಹೊರಡುವ ಟೈಮ್ಸ್ ಆಫ್ ಇಂಡಿಯ ಎಂಬ ನಿತ್ಯ ಪತ್ರಿಕೆಯಲ್ಲಿ ತಲೆ ದೋರಿರುವ ಒಕ್ಕಣಿಕೆಗಳು ವಿಶೇಷವಾದ ಲಕ್ಷಣಗಳಿಂದ ಕೂಡಿರುತ್ತವೆ. ಮೊದಲು ಸರ್ಕಾರದವರ ಪ್ರಸಿದ್ಧ ಪತ್ರಿಕೆಗಳನ್ನು ಖಂಡಿಸುವಾಗ ಸರ್ಕಾರದವರು ಬಾಲಿಶ ವ್ಯವಸ್ಥೆಯೆಂಬ ಸಿದ್ಧಾಂತಕ್ಕೆಡೆಗೊಡುವ ರೀತಿಯನ್ನನುಸರಿಸಿತು. ತರುವಾಯ ಹಲ ಕೆಲವು ವರ್ತಮಾನಗಳನ್ನು ಸಾರಿದ್ದಾಯಿತು. ಸುದ್ದಿಗಳನ್ನು ಚಲ್ಲುವುದರಲ್ಲಿ ತಪ್ಪುಗಳು ಹುಟ್ಟಿಕೊಳ್ಳುವುದು ಪ್ರಾಯಶಃ ಅನಿವಾರ್ಯವಾದುದು. ಕೂಡಿದ ಮಟ್ಟಿಗೆ ನಿಜವಾದ ಸಮಾಚಾರಗಳನ್ನೇ ತಿಳಿದು ನಿರ್ಧರ ಮಾಡಿಕೊಂಡು ಪ್ರಕಟಿಸುವ ವರ್ಗಕ್ಕೇ ಈ ಪ್ರಧಾನಾಂಗ್ಲೇಯ ಪತ್ರಿಕೆಯು ಸೇರಿದ್ದೆಂಬುದನ್ನು ಅನೇಕರು ಒಪ್ಪಬಹುದು. ಸೆಪ್ಟೆಂಬರ್ ೧೦ನೇ ದಿನದ ಸಂಚಿಕೆಯಲ್ಲಿ ಪ್ರಕಟವಾದ ಶ್ರೀರಂಗಪಟ್ಟಣದ ಸುದ್ದಿಯನ್ನು ಮೈಸೂರು ಸರ್ಕಾರದವರು ತಮ್ಮ ಪ್ರಸಿದ್ಧ ಪತ್ರಿಕೆಯೊಂದರಲ್ಲಿ ಖಂಡಿಸಿರುವರು. ಟೈಮ್ಸ್ ಆಫ್ ಇಂಡಿಯಾ ಪತ್ರಿಕಾ ಕರ್ತರು ತಮ್ಮ ಹೆಸರನ್ನುಳಿಸಿಕೊಳ್ಳುವುದಕ್ಕೆ ಆ ಸುದ್ದಿಯು ಸುಳ್ಳೆಂದು ಪ್ರಕಟಿಸಿದರೆ ಅಷ್ಟೇಸಾಲದು. ಮೊದಲು ಮೊದಲು ತಮ್ಮ ಕಟಾಕ್ಷವನ್ನು ಬೀರಿದಾಗ ಮೈಸೂರು ಸರ್ಕಾರವನ್ನು ಅಲ್ಲಗಳೆದು ಆದೊಂದು ಬಾಲಿಶ ವ್ಯವಸ್ಥೆಯೆಂಬಂತೆ ಧ್ವನಿಗೈವ ಆಗ್ರ ಲೇಖನದ ಹಿಂದಿನ ಚಿತ್ತವೃತ್ತಿಯಲ್ಲಿ ಕಾಣುವ "ಮೈಸೂರಿನಲ್ಲಿ ಕೋಮುವಾರು ಕಲಹದ ಭೂತ" ವೆಂಬ ವಿಸ್ತಾರವಾದ ವಿವರದಲ್ಲಿ ವಿಪುಲವಾಗಿ ಪ್ರಕಟವಾಗಿದೆ. ಮೈಸೂರಿನಲ್ಲಿ ದಿವಾನರು ಮುಸಲ್ಮಾನರಾಗಿರುವುದರಿಂದ ಹಿಂದೂಗಳಿಗೆ ಅಸಹ್ಯ (Sheer disgust) ವಂತೆ! ಮುಸಲ್ಮಾನರಿಗೆ ಅದರಿಂದ ಮೊಗಲ ಸಾಮ್ರಾಜ್ಯವು ಪ್ರಾಪ್ತಿಯಾಯಿತೆಂಬ ಆನಂದವು ತುಂಬಿ ಹೋಗಿ ಮೈಮರೆತು ಹೋಗಿರುವರಂತೆ! ಎಲ್ಲ ಹಿಂದೂಗಳೂ, ಎಲ್ಲ ಮುಸಲ್ಮಾನರಿಗೂ ಹೀಗೆಯೆ ಅಂತೆ! ಅಬ್ದುಲ್ ಫಜಲ್, ಮಹಮ್ಮದ್ ಗವಾನ್, ಸರ್‌ಸಲಾರ್‌ಜಂಗ್ ಎಂಬ ಹೆಸರುಗಳನ್ನು ಹಿಂದುಗಳು ಕೇಳಿಯೇ ಇಲ್ಲವೋ? ಮುಸಲ್ಮಾನರು ಇನ್ನೂ ಹಿಂದೂ ದೇಶವನ್ನೇ ಕಾಣದೆ, ಇಲ್ಲಿ ಮನೆ ಮಾಡದೆ, ಇಲ್ಲ ನೂರಾರು ವರ್ಷಗಳು ನೆಲೆಸಿ ಹಿಂದೂಗಳೊಡನೆ ಸ್ನೇಹ ಭಾವದಿಂದಿರದೆ ಇರತಕ್ಕ ರೂಕ್ಷ ಜನಗಳೋ? ಟೈಮ್ಸ್ ಆಫ್ ಇಂಡಿಯಾ ಪತ್ರಿಕಾ ಕರ್ತರಿಗೇನು ಚರಿತ್ರೆ ತಿಳಿಯದೇ? ಚನ್ನಾಗಿ ತಿಳಿದವರೇ ಇರಬೇಕು. ಆದರೂ ಹೀಗೆ ಎರಡು ಪ್ರಧಾನ ವರ್ಗದವರ ಮೇಲೂ ಪರಸ್ಪರ ದ್ವೇಷಾರೋಪವನ್ನು ಮಾಡುವುದು ಏತಕ್ಕೆ? ಬುಡವಿಲ್ಲವೆಂದು ತಿಳಿದಿದ್ದರೂ ಕೂಡ ಹೀಗೆ ಬರೆಯುವ ಗುಟ್ಟು ಏನಿರಬಹುದೆಂದರೆ ಅದೇ ಲೇಖನದಲ್ಲಿ ಸಾರಾಂಶ ರೂಪವಾಗಿ ಪ್ರಾರಂಭದಲ್ಲಿಯೇ ರೂಪಗೊಂಡ ಒಂದು ವಾಕ್ಯವುಂಟು. (There are apprehensions of a Hindu-

ಚಂದ್ರರಾಜನ ಕತೆ

ಜಿ|| ಚಂದ್ರರಾಜನಿಗೆ ಆಸ್ಪತ್ರೆಯಿಂದ ಬಿಡುಗಡೆಯಾಯಿತು ಗುಂಡು ತೆಗೆದರೋ ಇಲ್ಲವೋ ಗೊತ್ತಿಲ್ಲ.

ಶುಕ್ರವಾರ ಬೆಳಿಗ್ಗೆ ಸುಲ್ತಾನ್‌ಪೇಟೆ ಶಾಲೆಗೆ ಬಂದು ವಿಶ್ವೇಶ್ವರಯ್ಯ ಸಮಿತಿಯವರಿಗೆ ತಾನು ಅನುಭವಿಸಿದ್ದನ್ನೆಲ್ಲ ವರ್ಣಿಸಿದ.

ಸಮಿತಿಯವರು ಶುಕ್ರವಾರ ಬೆಳಿಗ್ಗೆ ಸುಲ್ತಾನ್‌ಪೇಟೆ ಶಾಲೆ, ಮಿ|| ಅಬ್ಬಾಸಖಾನರ ಮನೆ, ಮೂಲೆಯ ಮಹಡಿಮನೆ, ಹಿಂದಿನ ಮಸೀದಿ ಮುಂತಾದ ಸ್ಥಳಗಳನ್ನೆಲ್ಲ ಖುದ್ದು ನೋಡಿದರು. ಬಹಳ ಜನ ಸೇರಿದ್ದರು.

ಯೇ ಬರಲಿರುವ ಗಣಪತಿಯುತ್ಸವ ಕಾಲದಲ್ಲಿ ಹಿಂದೂ ಮುಸಲ್ಮಾನ ಪಂಗಡಗಳಿಗೆ ಕಲಹವಾದೀತೆಂಬ ಅನುಮಾನವುಂಟು" ಎಂದು. ಅನು ಅನುಮಾನದಂತೆ ನಿಜವಾಗಿ ಕಾಣುವುದಿಲ್ಲ; ಸೂಜನೆಯಂತೆ ಕಾಣುವುದು. ಗಣಪತಿಯುತ್ಸವದಲ್ಲಿ ಅನರ್ಥಗಳು ಸಂಭವಿಸಲೆಂದು ಇವರು ಗೋಪ್ಯವಾಗಿ ಹಾರೈಸುವರೆಂಬ ಅನುಮಾನವು ನಮಗೆ ಹುಟ್ಟುತ್ತದೆ.

ಬ್ರಿಟಿಷ್ ಪ್ರಾಂತ್ಯಗಳ ಜನರಿಗೆ ಗೊತ್ತು ಇತಂಹ ದೊಡ್ಡ ಕಲಹಗಳು ನಡೆದರೆ ಆಂಗ್ಲೇಯರ ಗುಂಪಿಗೆ ವಿಶಾಯಿ ಸಿಕ್ಕಿದ ಹಾಗೆಂಬುದು. ಅವೋಘ ವಿಚಾರವಾದ ಸ್ವರಾಜ್ಯ ಸಾಧನೆಗೆ ಅಡ್ಡಿಗಳನ್ನೊಡ್ಡುವ ಈ ಗುಂಪಿನವರಿಗೆ, ಇಂತಹ ಸಂದರ್ಭಗಳು ಅನುಕೂಲವಾಗಿಯೇ ಇರುತ್ತವೆ. ಅಂತಹ ಸಂದರ್ಭಗಳೊದಗಿದಾಗ ಅವುಗಳನ್ನು ಸಂಪೂರ್ಣವಾಗಿ ಉಪಯೋಗಿಸಿ ಕೊಳ್ಳುವುದೇ ಅಲ್ಲದೆ ಅಜವಾಗಿದ್ದುದನ್ನು ಗಜದಂತೆ ಮಾಡುವುದು ಇವರ ಪದ್ಧತಿಯಾಗಿ ಹೋಗಿದೆ. ಭಾರತೀಯರು ಮೊನ್ನೆ ಮೊನ್ನೆ ನೆಹರು ಸಮಿತಿಯನ್ನು ನಿರ್ಮಿಸಿ ಏಕ ಕಂಠದಿಂದ ಡುಮಿನಿಯನ್ ಸ್ವರಾಜ್ಯವೇ ಮಂತ್ರವೆಂದು ಹೇಳಿದಾಗ ಈ ಆಂಗ್ಲೇಯ ಗುಂಪಿನವರಿಗೆ ಇಂತಹ ಸಮಯಕ್ಕಾಗಿ ಚಕೋರ ಪಕ್ಷಿಗಳಂತೆ ಕಾದಿದ್ದರು. ಇದರಿಂದಲೇ ಟೈಮ್ಸ್ ಆಫ್ ಇಂಡಿಯ, ಲಂಡನ್ ಡೈಲಿಮೆಯಿಲ್, ಮಾರ್ನಿಂಗ್ ಪೋಸ್ಟ್ ಪತ್ರಿಕೆಗಳು ಪ್ರಾರಂಭಿಸಿದ್ದು. ಇವರಿಗೆ ಮೈಸೂರಿನ ಪ್ರಜೆಗಳಲ್ಲಿಯೇ ಏಕೆ, ಭಾರತೀಯರಲ್ಲಿರುವ ಅಭಿಮಾನ ಮಮತೆಗಳೆಷ್ಟೆಂದು ಚರಿತ್ರೆಯೇ ನೂರಾರು ಜಿಹ್ವೆಗಳಿಂದ ಸಾರುತ್ತಿದೆ. ಇದನ್ನು ಕೇಳದೆ, ಕಾಣದೆ, ಮೈಮರೆತು ಟೈಂಸ್ ಆಫ್ ಇಂಡಿಯಾ ಪತ್ರಿಕೆಯ ಜೇಷ್ಠೆಗಳಿಂದ ಭ್ರಾಂತರಾಗತಕ್ಕವರು ಭಾರತೀಯರಾದ ಮೈಸೂರು ಮಕ್ಕಳಲ್ಲವೆಂಬುದನ್ನು ಎಲ್ಲರೂ ನೆನಪಿನಲ್ಲಿಡಬೇಕು.

ನ್ನಾಗಿ ನೇಮಿಸಿರುವರು. ಶಾಖೆಯ ಸಣ್ಣ ಉದ್ಯೋಗಿಗಳಲ್ಲಿ ಮೇಲಿನ ಅಧಿಕಾರಸ್ಥಾನಗಳಿಗೆ ಬೇಕಾದ ಯೋಗ್ಯತೆಯುಳ್ಳವರು ಇಲ್ಲವಂತೆ! ಆದ್ದರಿಂದ ಆಮದುಮಾಡಬೇಕಾಗಿ ಬಂತಂತೆ! ಮೇಲೆ ಹಸಿಯ ಅನನುಭವಜ್ಞರಾದ ಸರ್ವಜ್ಞರು, ಕೆಳಗೆ ಶಾಖಾನುಭವವುಳ್ಳ ಹೊಟ್ಟೆಯುರಿಯ ಉದ್ಯೋಗಿಗಳು! ಕೆಲಸ ಇನ್ನು ಮೇಲೆ ಚೆನ್ನಾಗಿಯೇ ನಡೆಯುತ್ತದೆ. ಈ ಉದ್ಯೋಗಗಳಿಗೆ ಪೋಟಾಪೋಟಿ ಸರೀಕ್ಷೆ ಇಟ್ಟಿದ್ದರೆ ಏನು ಆಗುತ್ತಿತ್ತು? ಕಡೆಗೆ 'ಈ ಕೆಲಸಗಳಿವೆ. ಯಾರಾದರೂ ಅರ್ಜಿಹಾಕಿ' ಅಂತಲಾದರೂ ದುಡ್ಡು ಕೊಟ್ಟು ಪತ್ರಿಕೆಗಳಲ್ಲಿ ವಿಾಸಲಾಗಿರಿಸಿರುವ ಸ್ಥಳದಲ್ಲಿ ಪ್ರಕಟಿಸಬಹುದಾಗಿತ್ತಲ್ಲ!!

* * *

೨೦ನೇ ತಾರೀಖು ನಡತಕೂದಲು ರೇಂಜರುಗಳಿಗೆಲ್ಲ ಅದೇನೋ ಒಂದು ಪರೀಕ್ಷೆಯಂತೆ! ಪಂಡಿತ ಪರೀಕ್ಷೆ, ವಿದ್ವತ್ಪರೀಕ್ಷೆ ಮಾಡಿ ಪಂಡಿತರಿಗೆಲ್ಲ 'ಹೇಳಿ ಬರೆಯಿಸಿ' ಪರೀಕ್ಷೆಯೊಂದನ್ನು ನಮ್ಮ ಶಿಕ್ಷಣ ಶಾಖೆಯವರು ನಡೆಸುತ್ತಿರಲಿಲ್ಲವೆ ಹಾಗೆ!

* * *

೩೦ನೇ ತಾರೀಖು ರಾತ್ರಿ ರಾಜಗಣಪತಿ ರಣರಂಗದಲ್ಲಿ ಭಲ್ಯದ ಸವಾರರು 'ಬೆಲ್ಟು ಗಿಲ್ಟು' 'ಭಲ್ಯ ಗಿಲ್ಯ' ಏನೇನೋ ಕಳಕೊಂಡವಂತೆ. ಭಲ್ಯದವರನಾಯಕರು 'ಸಮಾರು ೨೪ ರೂಗಳ ಸಾಮಾನು ಹೋಯಿತು ಅದನ್ನು ಒರೆಸಿ ಹಾಕಿ ಬಿಡಿ (ರೈಟ್ ಆಫ್). ೨—೩ ಭಲ್ಯಗಳು ಮುರಿದು ಹೋಗಿವೆ. ಅವುಗಳ ರಿಪೇರಿ'ಗೆ ಒಂದು ಒಂದುವರೆ ರೂಗಳಾಗಬಹುದು' ಎಂದು ಬರೆದುಕೊಂಡರಂತೆ. ಅವರ ಪ್ರಾರ್ಥನೆಯನ್ನು ಸೈನ್ಯಶಾಖಾಧಿಕಾರಿಗಳು ಆಲಿಸಿದರಂತೆ. ಈ 'ವೀರರು' ಆ 'ಯುದ್ಧ'ದಲ್ಲಿ ಸಾಮಾನುಗಳನ್ನು ಕಳಕೊಳ್ಳುವುದು ಬೇರೆ; ಆಯುಧಗಳನ್ನು ಮುರಿದು [illegible]

ಚಾಣಿಕ್ಯನ ಚಿಟಿಕೆಗಳು

(ಮುದ್ರಾರಾಕ್ಷಸ)

ಕ್ರೀಡಾಶಾಖೆಯ ಕೂಗು 'ಅರಣ್ಯರೋಧನ'ವಲ್ಲದೆ ಮತ್ತೇನಾದೀತು: ಶಾಖೆಯಲ್ಲಿ ಹತ್ತಾರು ವರ್ಷಗಳಿಂದ ದುಡಿಯುತ್ತಿರುವವರು "'ಗೆಜಿಟೆಡ್' ಉದ್ಯೋಗಕ್ಕೇರಲು ನಮಗೆಳ್ಳಷ್ಟೂ ಅವಕಾಶವಿಲ್ಲವಲ್ಲ" ಎಂದು ಹಾಹಾಕಾರ ಮಾಡುತ್ತಿದ್ದಾರೆ. ಈ ಮಧ್ಯೆ ಸರ್ಕಾರದವರು ಶ್ರೀ ಕೆ. ಕೃಷ್ಣಸ್ವಾಮಿ ಎಂಬುವರಿಗೆ ತಿಂಗಳಿಗೆ ೧೫೦ ರೂಗಳನ್ನೂ ಶ್ರೀ ಬಿ. ಪಿ. ರಾಮಕೃಷ್ಣನ್, ಶ್ರೀ ಡಿ. ಎ. ರಾಮರಾವ್ ಮತ್ತು ಒಬ್ಬ

ಅಶಾರಾಕಜೇರಿಯಲ್ಲಿ ಗೋಡೆಗ[illegible]
ಗಳಾಗಿವೆ. ಕಂಬಗಳಲ್ಲಿ ಪಿಸಪಿಸಗಸ[illegible]
ವತ್ಕಳೆಗೆ ರುಜು ಹಾಕಿಸಿ ಸರ್ಕಾರೀ ಉದ್ಯೋಗಸ್ಥರಿಗೆಲ್ಲ ಬಾಯಿಗೆ ಮುಲ್ಲಾ [illegible]ಳುವಹಾಗಿದೆ." "ಸ್ವರಾಜ್ಯದಲ್ಲಿ ಬರೆದ ಲೇಖನಗಳಿಗಾಗಿ ಶ್ರೀ ವಿಲ್ಲೆಲಕ್ಷ್ಮೀನಾರಾಯಣಪ್ಪನವ[illegible] 'ಕೊರಳಿಗೆ ಬರುತ್ತೆ'" "ಪ್ರಜಾಮಿತ್ರ"ನನ್ನು 'ಪ್ರಾಸಿಕ್ಯೂಟ್ ಮಾಡ್ತಾರಂತೆ.' 'ದೀನ್‌ದಾರ್' ಪತ್ರಿಕೆಯ ವಿಚಾರವಾಗಿ ಏನೇನೋ ನಡೆಯುತ್ತಿ[illegible] 'ಬೆಂಗಳೂರಿಂದ ಮೂವರನ್ನು ಗಡೀಪಾರು [illegible]ಮಾಡ್ತಾರಂತೆ' ಇತ್ಯಾದಿ;

ಸರ್ ವಿಶ್ವೇಶ್ವರಯ್ಯ ಸಮಿತಿಯ ಕಾರ್ಯಕಲಾಪ

ಸ್ಥಳ—ಡೇಲಿಮೆಮೋರಿಯಲ್ ಹಾಲ್
ಕಾಲ—೧೨ನೇ ತಾ॥ ಮಧ್ಯಾಹ್ನ ೧೧॥ ಘಂಟೆಗೆ ಆರಂಭವಾಯಿತು.

"ಸಾಕ್ಷಿಗಳಾರೂ ಸರ್ಕಾರದ ಕ್ರೋಧಕ್ಕೆ ಒಳಗಾಗುವುದಿಲ್ಲ"
"ರಹಸ್ಯವಾಗಿ ಸಾಕ್ಷ್ಯಕೊಟ್ಟರೆ ಅದನ್ನು ಸಾಕ್ಷಿಗಳಿಗೆ ವಿರೋಧವಾಗಿ ಉಪಯೋಗಿಸುವುದಿಲ್ಲವೆಂದು ಅಭಯ ಕೊಡುತ್ತೇವೆ."

ಭವನದಲ್ಲಿರುವ ವೇದಿಕೆಯ ಮುಂಭಾಗದಲ್ಲಿ ಸಮಿತಿಯ ಸದಸ್ಯರ ಪೀಠಗಳನ್ನು ಹವಣಿಸಿತ್ತು. ವೇದಿಕೆಯ ಮೇಲ್ಗೋಡೆಯಲ್ಲಿ ಶ್ರೀಮಚ್ಚಾಮರಾಜೇಂದ್ರ ಒಡೆಯರವರ, ಶ್ರೀಮತ್ಕೃಷ್ಣರಾಜೇಂದ್ರ ಒಡೆಯರವರ ಮತ್ತು ಶ್ರೀಮದ್ಭುವರಾಜರವರ ನೇತ್ರಾನಂದಕರವಾದ ತೈಲ ಚಿತ್ರಪಟಗಳಿವೆ. ಎಡಬಲ ಭಾಗದ ಗೋಡೆಗಳು ಗಾಯಕವಾಡ, ತಿರುವಾಂಕೂರು ಮಹಾರಾಜರುಗಳ ಚಿತ್ರಪಟಗಳಿಂದಲೂ ಬಲಗಡೆ ಸರ್ ಹ್ಯೂ ಚೀಲ್, ಸರ್ ಅಸುತೋಷಮುಖರ್ಜಿ ಮುಂತಾದವರ ಚಿತ್ರಪಟಗಳಿಂದಲೂ ಅಲಂಕೃತವಾಗಿವೆ. ಶ್ರೀಮನ್ಮಹಾರಾಜರ ಪಟಕ್ಕೆದುರಾಗಿ ಗೋಡೆಯ ಮೇಲೆ ರೆಟಾ ಬರ್ಡನ ಪಟವಿದೆ.

ಸರ್. ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು ಮಧ್ಯೆ ಕೂತಿದ್ದರು. ಅವರ ಬಲಗಡೆ ಶ್ರೀಯುತರಾದ ಡಿ. ಕೆ. ರಾಮರಾವ್, ರಾಲ್ಫ್‌ನೈ, ಮಾಣಿಕ್ಯವೇಲುಮೊದಲಿಯಾರರೂ, ಎಡಗಡೆಗೆ ಶ್ರೀಯುತರುಗಳಾದ ನಾಗಪ್ಪ, ನವಾಬ್ ಕಲಾಮಿ ಮತ್ತು ಬಸವಪ್ಪನವರೂ ಕೂತಿದ್ದರು. ಅವರಾಸನಗಳೆಲ್ಲ ಅರ್ಧಚಂದ್ರಾಕೃತಿಯಲ್ಲಿ ರಚಿಸಿದ್ದುವು. ಅದರ ಮಧ್ಯೆ ಅಧ್ಯಕ್ಷರಿಗೆದುರಾಗಿ ಒಂದು ಪೀಠಹಾಕಿತ್ತು. ಸಾಕ್ಷಿಗಳು ಅಲ್ಲಿ ಕೂತು ಹೇಳುತ್ತಿದ್ದರು. ಸಭಾ ಸ್ಥಾನದಲ್ಲಿ ಮುಂದುಗಡೆ ಪತ್ರಿಕಾ ಸುದ್ದಿಗಾರರಿದ್ದರು. ಪ್ರೇಕ್ಷಕರು ಸಭಾಭವನದ ತುಂಬ ಕಿಕ್ಕಿರಿದಿದ್ದರು.

೧೧॥ ಘಂಟೆಗೆ ಸರಿಯಾಗಿ ಅಧ್ಯಕ್ಷರೂ ಸದಸ್ಯರೂ ಬಂದು ಕೂತರು. ಸಮಿತಿಯ ಕಾರ್ಯದರ್ಶಿಗಳು ಅದಕ್ಕೆ ಮೊದಲೇ ಅಂದಿನ ಸಾಕ್ಷಿಗಳ ಹೆಸರುಗಳನ್ನು ಕೊಟ್ಟರು.

ಸಾಕ್ಷಿಗಳು

ಶ್ರೀ ಜಾನ್ ಅಪ್ಪಾಜಿ, ಶಾಲಾ ಹೆಡ್‌ಮಾಸ್ಟರ್; ಶ್ರೀ ನಂಜುಂಡಪ್ಪ, ಕಂಟ್ರಾಕ್ಟರ್; ಜಿಲ್ಲಾ ಪೋ॥ ಸೂಪರಿಂಟಿಂಡೆಂಟ್ ಮಿ॥ ಸಿರಾಜುದ್ದೀನ್; ಅ॥ ಪೋ॥ ಸೂ॥ ಶ್ರೀ ನರಸಿಂಹಅಯ್ಯಂಗಾರ್; ಸಬ್‌ಇನ್‌ಸ್ಪೆಕ್ಟರ್ ಶ್ರೀ ಶೇಷಾದ್ರಿ ಅಯ್ಯರ್. ಮತ್ತು ಮಾರ್ಕೆಟ್ ಕಂಟ್ರಾಕ್ಟರ್ ಶ್ರೀ ಸಂಜೀವಪ್ಪ.

ಅಧ್ಯಕ್ಷರಾದ ಸರ್ ಎಂ. ವಿಶ್ವೇಶ್ವರಯ್ಯನವರು ಜಗಜ್ಜಾಹೀರಾದ ಈ ಭಾಷಣ ಮಾಡಿದರು:

ಅಧ್ಯಕ್ಷರ ಭಾಷಣ

ನಾವು ತನ್ನಿಮಿತ್ತ ಕಾರ್ಯವನ್ನು ಯಾವ ರೀತಿ ನಡೆಸಬೇಕೆಂಬುದರ ವಿಷಯವಾಗಿ ನಿನ್ನೆ ಮಂದಾಳುಗಳಲ್ಲಿ ಕೇ ನಮಗೆ ಪತ್ರಗಳು ಬಂದಿರುತ್ತವೆ. ಸಾಕ್ಷ್ಯವನ್ನು ತೆಗೆದುಕೊಳ್ಳುವುದಕ್ಕೆ ಮುಂಚೆ ನಾನು ಈ ಸಮಿತಿಯ ಪರವಾಗಿ ಜನರ ತಿಳಿವಳಿಕೆಗೋಸ್ಕರ ಕೆಲವು ಮಾತುಗಳನ್ನು ಹೇಳಲೆಳಸುತ್ತೇನೆ.

ಇಲ್ಲಿಗೆ ಸಾಕ್ಷ್ಯ ಹೇಳಲು ಬರುವ ಅಧಿಕಾರವರ್ಗದವರೂ ಸರ್ಕಾರದ ಕೈಕೆಳಗೆ ಕೆಲಸಮಾಡುವವರೂ ಎಲ್ಲರೂ ಗಲಭೆಯ ವಿಷಯವಾಗಿ ಸಂಪೂರ್ಣವಾದ ಮತ್ತು ಸತ್ಯವಾದ ಸಂಗತಿಗಳನ್ನು ಹೇಳಬೇಕೆಂದು ಸರ್ಕಾರದವರು ಅವರಿಗೆ ಅಪ್ಪಣೆ ಮಾಡಿರುವುದಾಗಿ ಸರ್ಕಾರದವರು ನಮಗೆ ತಿಳಿಸಿರುತ್ತಾರೆ. ಈ ರೀತಿಯಾಗಿ ಸಾಕ್ಷ್ಯ ಹೇಳುವುದರಿಂದ ಸಾಕ್ಷಿಗಳು ಸರ್ಕಾರದ ಕ್ರೋಧಕ್ಕೆ ಒಳಗಾಗುವುದಿಲ್ಲವೆಂಬ ಬೇರೆ ಹೇಳಬೇಕಾದುದಿಲ್ಲ.

ಪ್ರಜಾಕ್ಷೇಮದ ಸಲುವಾಗಿ ಹಾಗೆ ಮಾಡಬೇಕೆಂದು ನಮಗೆ ತೋರಿಬಂದಾಗ ಕೆಲವು ಅಧಿಕಾರಿಗಳ ಮತ್ತು ಕೆಲವು ಪಾಸಿಗಿ ಜನರ ಸಾಕ್ಷ್ಯವನ್ನು ರಹಸ್ಯವಾಗಿ ತೆಗೆದುಕೊಳ್ಳಬೇಕಾಗಿ ಬರಬಹುದು. ತಮ್ಮನ್ನೇ ಆಪಾದನೆಗೆ ಗುರಿಪಡಿಸುವ ಸಾಕ್ಷ್ಯವೇನಾದರೂ ರಹಸ್ಯವಾಗಿ ಕೊಡಲ್ಪಟ್ಟರೆ ಆ ಸಾಕ್ಷ್ಯವನ್ನು ಸರ್ಕಾರದವರು ಆ ಸಾಕ್ಷಿಗಳಿಗೆ ವಿರೋಧವಾಗಿ ಉಪಯೋಗಿಸುವುದಿಲ್ಲವೆಂದು ಅಭಯದಾನ ಮಾಡಲು ಸರ್ಕಾರದವರು ಈ ಸಮಿತಿಗೆ ಹೇಳಿದ್ದಾರೆ.

ಯಾವ ದೊಡ್ಡ ಸಂಸ್ಥೆಗಳಾಗಲಿ ಜಾತಿಗಳಾಗಲಿ ಜನಸಮುದಾಯವಾಗಲಿ ವಕೀಲರ ಸಹಾಯವನ್ನು ಪಡೆಯಲಿಚ್ಛಿಸುವುದಾದರೆ ಆ ವಿಷಯದಲ್ಲಿ ಅಹವಾಲುಗಳನ್ನು ಕೇಳಲು ನಾವು ಸಿದ್ಧರಾಗಿದ್ದೇವೆ. ವಕೀಲರು ಸಾಕ್ಷ್ಯವನ್ನು ಗಮನಿಸಿ ಸಾಕ್ಷಿಯ ವಿಚಾರಣೆಯ ಅಂತ್ಯದಲ್ಲಿ ಅವರಿಗೆ ಹಾಕಬೇಕಾದ ಹೊಸ ಪ್ರಶ್ನೆಗಳ ಪಟ್ಟಿಯನ್ನು ಅಥವಾ ಹೆಚ್ಚು ವಿಷಯವನ್ನು ತಿಳಿದುಕೊಳ್ಳಲು ಸೂಚನೆಗಳನ್ನು ಸಮಿತಿಯ ಕಾರ್ಯಶಿಗಳಿಗೆ ಕೊಡಬಹುದು. ಹೆಚ್ಚು ಪ್ರಶ್ನೆಗಳನ್ನು ಕೇಳಬೇಕೇ ಬೇಡವೆ, ಯಾವ ಪ್ರಶ್ನೆಗಳನ್ನು ಕೇಳುವುದು, ಇದನ್ನು ನಿರ್ಧರಿಸುವ ಪೂರ್ಣ ಅಧಿಕಾರವನ್ನು ಸಮಿತಿಯವರು ತಮಗೇ ಇಟ್ಟುಕೊಂಡಿದ್ದಾರೆ. ಸಾಕ್ಷಿಗಳನ್ನು ಸವಾಲುಮಾಡಲು ಅಥವಾ ಪಾಟಿಸವಾಲು ಮಾಡಲು ವಕೀಲರಿಗೆ ಅವಕಾಶವು ಕೊಡಲ್ಪಡುವುದಿಲ್ಲ. ಆದರೆ ಸಮಿತಿಯವರು ಅವರ ಸಲಹೆಯನ್ನು ಕೇಳಬಹುದು.

ಈ ಸಮಿತಿಯನ್ನೇರ್ಪಡಿಸಿದ ಆಜ್ಞೆಯಲ್ಲಿ ನಿಯತವಾಗಿರುವಂತೆ ಗಲಭೆಗಳ ಮೂಲಕಾರಣಗಳನ್ನು ವಿಮರ್ಶಿಸಿ ನಮ್ಮ ನಿರ್ಧಾರಗಳನ್ನೂ ಸೂಚನೆಗಳನ್ನೂ ಬರೆದಿಡಲು ನಾವಿಲ್ಲಿದ್ದೇವೆ. ಈ ವಿಚಾರಣೆಗೆ ವಸ್ತುಗಳಾದ ವಿಷಯಗಳ ಮಹತ್ವವನ್ನು ಎಣಿಕೆಗೆ ತಂದು ಕೊಂಡು ನಾವು ಈ ವಿಚಾರಣೆಯು ಮುಗಿಯುವವರೆಗೂ ಶಾಂತ ವಾತಾವರಣವು ನೆಲೆಸಿರುವುದಕ್ಕಾಗಿ ಮೈಸೂರು ದೇಶದ ಒಳಗಿರುವ ಮತ್ತು ಹೊರಗಿರುವ ವೃತ್ತಪತ್ರಗಳ ಸಂಪೂರ್ಣ ಸಹಕಾರವನ್ನೂ ಸಹಾಯವನ್ನೂ ಹೊಂದಲು ಆತುರವಾಗಿದ್ದೇವೆ. ಈ ಸಂದರ್ಭದಲ್ಲಿ ನಾವು ಇದನ್ನು ಲೋಕಸೇವಾನಿರತರಾದ ಮತ್ತು ದೇಶಾಭಿಮಾನಿಗಳಾದ ವೃತ್ತಪತ್ರಿಕಾ ಕರ್ತರಿಂದ ಧೈರ್ಯವಾಗಿ ನಿರೀಕ್ಷಿಸಬಹುದೆಯೆಂದು ನಂಬುತ್ತೇವೆ.

ಶ್ರೀ ಜಾನ್ ಅಪ್ಪಾಜಿಯವರು
(ಸುಲ್ತಾನ್‌ಪೇಟೆಯ ಮುಖ್ಯೋಪಾಧ್ಯಾಯರು)

"ಹುಡುಗರ ಮುಷ್ಕರಕ್ಕೆ ಗಣೇಶನಲ್ಲದೆ ಮತ್ತೇನೂ ಕಾರಣವಿಲ್ಲ"

"ಇಲಾಖೆಯಲ್ಲಿ ನನಗೆ ೨೦ ವರ್ಷ ಸರ್ವೀಸಾಗಿದೆ. ೧೯೨೮ನೇ ಫೆಬ್ರವರಿ ೧೭ರಲ್ಲಿ ನಾನು ಆ ಶಾಲೆಗೆ ಬಂದೆ. ಒಂದು ತಿಂಗಳು ರಜಾದಮೇಲೆ ಹೋಗಿದ್ದೆ. ಕಂಟ್ರಾಕ್ಟರು ನಂಜುಂಡಪ್ಪನವರು ಕಟ್ಟಡ ರಿಪೇರಿ ಮಾಡುತ್ತಾ ಇದ್ದರು. ಹಿಂದಕ್ಕೆ ಒಮ್ಮೆಲೆ ಆಂಗಳದಲ್ಲಿ ಗೂಡು ಕಟ್ಟಿದ್ದನ್ನು ನೋಡಿದೆ. ಕಟ್ಟಿದ್ದು ನನಗೆ ಗೊತ್ತಾ ಇಲ್ಲ. ನಾನು ಆಪ್ಞೆ ಮಾಡಲಿ ಇಲ್ಲ. ಜೂನ್ ತಿಂಗಳಲ್ಲಿ ಶಾಲಾಧಿಕಾರಿಗಳು ಇದ್ದಕ್ಕಿದ್ದಹಾಗೆ ಒಮ್ಮೆ ಗಣೇಶನನ್ನು ಈ ಗಿರುವ ಕೋಣೆಯಿಂದ ಗೂಡಿನೊಳಗಿನಿಸಲು ಪ್ರಯತ್ನಿಸಿದೆ. ನಾನು ಮತ್ತೆ ಆಜ್ಞೆಮಾಡುವವರೆಗೂ ಏನೂ ಮಾತ ಗೊಡಿನವೇತಿ ಅಂದು ಪಾಯಿಸ್ಸಿ ಹೇಳಿದರು. ನಾನು ಕೂಡಲೇ ಮೆಸ್ತ್ರೀ ಒಬ್ಬನು ಸಾಹಾಧ್ಯಾಯರ ಕೈಲಿ ಹುಡುಗರಿಗೆ ಹೊಡೆಸಿದೆ. ಆ ಆಜ್ಞೆ ಹೇಳಿಸಿದೆ ಜುಲೈ ೨೪ರ ವರೆಗೂ ಏನೂ ಸದ್ದಿಲ್ಲ. ಆದಿನ ೧೧ ಘಂಟೆಗೆ ಹುಡುಗರು ಬಂದು 'ಗಣೇಶನನ್ನು ಗೂಡಿಗೆ ಬಿಡುವವರೆಗೂ ನಾವು ಶಾಲೆಗೆ ಬರುವವುದಿಲ್ಲವೆಂದು ಮುಷ್ಕರ ಹಿಡಿದರು. ಗೂಡು ಕಟ್ಟುವುದಕ್ಕಾಗಿ ಗಣೇಶನನ್ನು ಹುಡುಗರೇ ಒಂದು ಕೋಣೆಯೊಳಕ್ಕೆ ಕದಲಿಸಿದ್ದರು. ಗೂಡು ಮುಗಿದಿತ್ತು. ಅದಕ್ಕೊಂದು ಬಾಗಲಿಡಿಸಲು ಹುಡುಗರು ಕಾದಿದ್ದರು. ಅದು ವರೆಗೆ ಹುಡುಗರಾಗಲಿ, ತಂದೆತಾಯಿಗಳಾಗಲಿ, ಇತರರಾಗಲಿ ಈ ವಿಚಾರ ದೂರು ಹೇಳೇ ಇಲ್ಲ' ಎಂಬದಾಗಿ ಅಧ್ಯಕ್ಷರಿಗೆ ಉತ್ತರ ಕೊಟ್ಟರು.

ಶ್ರೀ ಡಿ. ಕೆ. ರಾಮರಾಯರು ಪಾಟಿಸವಾಲು ಮಾಡಿದಾಗ 'ನನ್ನ ಕೈಕೆಳಗೆ ೨೩ ಮಂದಿ ಉಪಾಧ್ಯಾಯರಿದ್ದಾರೆ. ಶಾಲೆಯಲ್ಲಿ ೨ ಈಸಾಯಿಗಳು, ೧ ಒಕ್ಕಲಿಗ ಉಳಿದವರೆಲ್ಲ ಬ್ರಾಹ್ಮಣರು. ಪ್ರತಿನಿತ್ಯವೂ ಹುಡುಗರು ೧೧ ಘಂಟೆಗೆ ಬಂದು, ಅಲ್ಲಿಂದ ಹೊರಟುಹೋಗಿ ಮತ್ತೆ ಸಾಯಂಕಾಲ ಬಂದು, ಗೂಡಿನ ಸುತ್ತಲೂ ಪ್ರದಕ್ಷಿಣ ನೂಡಿ ಹೊರಟು ಹೋಗುತ್ತಿದ್ದರು. ನಿತ್ಯವೂ ಜಿಲ್ಲಾ ಶಾಲಾಧಿಕಾರಿಗಳು ಬಂದು ಹೋಗುತ್ತಿದ್ದರು. ಆಗಾಗ ನನಗೆ ಸೂಚನೆ ಕೊಡುತ್ತಿದ್ದರು. ಶಾಲೆಯಲ್ಲಿ ಸುಮಾರು ೩೪೫ ಹುಡುಗರಿದ್ದಾರೆ. ೨೪ರಿಂದ ೨೨ರ ವರೆಗೆ ನಿತ್ಯವೂ ಸರಾಸರಿ ೪೦—೫೦ ಮಂದಿ ಶಾಲೆಗೆ ಬರುತ್ತಿದ್ದರು. ೨೮ನೇ ತಾರೀಖು ಯಾರೂ ಬರಲಿಲ್ಲ. ೨೮ನೇ ಬೆಳಿಗ್ಗೆ ಹುಡುಗರು ಶಾಲೆಯ ಒಳಹೊರಗೆ ಕೂತಿದ್ದನ್ನು ಕಂಡೆ. ಇತರ ಶಾಲಾ ಹುಡುಗರೂ ಇದ್ದರು. ಹೊರಗಿನವರಾರನ್ನೂ ನಾನು ನೋಡಲಿಲ್ಲ. ೭—೮ ಮಂದಿ ದೊಡ್ಡವರು ಯಾರೋ ಹುಡುಗರಿಗೆ ತಿಂಡಿ ತಂದು ಕೊಡುತ್ತಿದ್ದರು. ಯಾರೂ ಭಾಷಣ ಮಾಡುತ್ತಿರಲಿಲ್ಲ. ಸಾಹಾಧ್ಯಾಯರಾಗಲಿ ಇವರೊಂದಿಗಿರಲಿಲ್ಲ. ಯಾರು ಹುಡುಗರನ್ನು ಪ್ರೇರೇಪಿಸುತ್ತಿದ್ದುದನ್ನು ನಾನು ನೋಡಲಿಲ್ಲ." ಅಂದರು.

ಶ್ರೀ ನಾಗಪ್ಪನವರು ಪಾಟಿಸವಾಲು

"ಜೂನ್ ೧೫ರಿಂದ ಜುಲೈ ೨೪ರ ವರೆಗಿನ ಗಲಾಟೆ ಜುಲೈ ೨೪ನೇ ದಿನ ಏಕೆ ಆಯಿತೋ ನನಗೆ ಗೊತ್ತಿಲ್ಲ. ತಿಂಡಿ ಕೊಟ್ಟವರಿಗಾಗಲಿ, ಇತರರಿಗಾ

ಪ್ರೋತ್ಸಾಹಿಸಬೇಡಿರೆಂದು ನಾನು ಹೇಳಲಿಲ್ಲ. ಹುಡುಗರು ಬೀದಿಯಲ್ಲಿ ಕೂತು ೨೪ನೇ ತಾ॥ ಆಡ್ಡಿಪಡಿಸುತ್ತಿರಲಿಲ್ಲ. ಆ ದಿನವೇ ನಾನು ಮಾರ್ಕೆಟ್ ಪೋಲೀಸ್‌ಸ್ಟೇಷನ್‌ಗೆ ಹೋಗಿ ಹೇಳಿದೆ. ೨—೩ ಕಾನಸ್ಟೇಬಲುಗಳನ್ನು ಅವರು ಕಳುಹಿಸಿದರು. ಹುಡುಗರ ನೀತಿ, ಬುದ್ಧಿ ಈ ವಿಚಾರವೆಲ್ಲ ನನ್ನಿಂದ ತಿದ್ದಲ್ಪಡಬೇಕಾದ್ದೇ. ಆದರೆ ಆಗ ಹುಡುಗರು ನನ್ನ ಕೈಫಿಯಾರಿ ಹೋಗಿದ್ದರು. ನನ್ನ ಮಾತು ಕೇಳುತ್ತಿರಲಿಲ್ಲ. ಮಾರ್ಕೆಟ್ ಬಳಿ ಅವರು ಸಭೆಮಾಡುತ್ತಿದ್ದ ವಿಚಾರ ನನಗೆ ಗೊತ್ತಿಲ್ಲ. ತಂದೆತಾಯಿಗಳ ಹೆಸರೊಂದೂ ನನಗೆ ಗೊತ್ತಿಲ್ಲ. ಅವರಿಗೆ ನಾನು ಕಾಗದಗಳನ್ನು ಬರೆಯಲಿಲ್ಲ.'' ಎಂದು ಹೇಳಿಬಿಟ್ಟರು.

ಮಿ॥ ಕಲಾಮಿಯವರು ಪಾಟಿಸವಾಲು ಮಾಡಿದರು. ಹೊಸ ವಿಚಾರವೇನೂ ಹೊರಬೀಳಲಿಲ್ಲ. ಶ್ರೀ ಬಸಪ್ಪನವರು ಕೇಳಿದಾಗ 'ಗಣೇಶನ ಜೊತೆಗೆ ೫—೬ ನಾಗರಕಲ್ಲುಗಳೂ ಅಲ್ಲಿವೆ. ಹುಡುಗರು ಗಣೇಶನಮೇಲೆ ಹೂವು ಕುಂಕುಮಹಾಕುತ್ತಿದ್ದರು. ಶಾರದಾ, ಸರಸ್ವತೀಪೂಜೆ ಮಾಡುವಾಗಲೂ ಗಣೇಶನಿಗೆ ಪೂಜೆಮಾಡುತ್ತಿದ್ದರು. ಪರೀಕ್ಷಾ ಕಾಲದಲ್ಲಿ ಗಣೇಶನಮೇಲೆ ಮಸಿಬುಡ್ಡಿಗಳನ್ನೆಲ್ಲಾ ಬರಿದುಮಾಡಿದರೆ ತಮಗೆ ಪ್ಯಾಸಾಗುತ್ತೆಂದು ನಂಬುತ್ತಿದ್ದರು. ಮಹಜರುದಿನವೇ ವಿಗ್ರಹವನ್ನು ಜಾಗರೂಕತೆಯಿಂದ ನಾನು ನೋಡಿದುದು. ಬರಳುಗಳು ಭಿನ್ನವಾಗಿತ್ತು. ಹುಡುಗರ ಮುಷ್ಕರಕ್ಕೆ ಗಣೇಶನಲ್ಲದೆ ಮತ್ತೇನೂ ಕಾರಣ ನನಗೆ ಗೊತ್ತಿಲ್ಲ. ಪ್ರೇರಕರು ನನಗೆ ಗೊತ್ತಿಲ್ಲ.'' ಅಂದರು. ಮತ್ತೆ ಶ್ರೀ ರಾಮರಾಯರು ಪ್ರಶ್ನೆಮಾಡಲು

'' ಶಾಖಾಧಿಕಾರಿಗಳೊಂದಿಗೆ ಪೌರಸಭಾಧಿಕಾರಿಗಳಾಗಲಿ, ಅಧ್ಯಕ್ಷರಾಗಲಿ ಯಾರೂ ಬರಲಿಲ್ಲ. ಅವರೊಬ್ಬರೇ ಬಂದಿದ್ದರು. ಗಣೇಶನ ಚರಿತ್ರೆ ಅವರು ಕೇಳಿದರು. ನನ್ನ ಮುಂದಿನ ಹೆಡ್ಮಾಸ್ಟರುಗಳಿಬ್ಬರಿಗೆ ಬರೆದಿದ್ದೇನೆ. ಒಬ್ಬರು ಉತ್ತರಕೊಟ್ಟರು. ಇನ್ನೊಬ್ಬರು ಕೊಡಲಿಲ್ಲ. ನಾನು ವರದಿ ನನ್ನ ಅಧಿಕಾರಿಗಳಿಗೆ ಕಳಿಸುತ್ತೇನೆ. ಸು. ೧೯೧೯ರಿಂದ ಗಣೇಶ ಅಲ್ಲಿದೆ. ಶಾಲೆಯಲ್ಲಿ ೧೦೦ಕ್ಕೆ ೯೮ ಹಿಂದೂಗಳು.'' ಎಂದು ಉತ್ತರಕೊಟ್ಟರು.

ಕಡೆಗೆ ಶ್ರೀ ನಾಗಪ್ಪನವರು, ಬಸಪ್ಪನವರು ಹಾಕಿದ ಪ್ರಶ್ನೆಗಳಿಗೆ '' ಮಿ॥ ಅಬ್ದಾಸಖಾನರು ಈ ವಿಚಾರಕ್ಕೆ ತಲೆಹಾಕಿದರೋ ಇಲ್ಲವೊ ನನಗೆ ಗೊತ್ತಿಲ್ಲ. ಅವರು ಅಲ್ಲಿ ಬರಲಿಲ್ಲ. ಶರ್ಮ, ಸುಬ್ರಹ್ಮಣ್ಯಂ, ಯಾರೋ ಶಾಸ್ತ್ರಿಗಳು ಸುದ್ದಿಗಾಗಿ ಬಂದಿದ್ದರು. ಹುಡುಗರು ಮಹಾರಾಜಾಕಿ ಜೈ! ಗಣೇಶಾಕಿ ಜೈ ಅಸ್ತು ತ್ತಿದ್ದರೇ ಹೊರತು 'ಅಬ್ದಾಸಖಾನ್ ಸತ್ತ, ದಿವಾನ ಸತ್ತ' ಎಂದು ಕೂಗುತ್ತಿರಲಿಲ್ಲ. ನಾನು ಕೇಳಲಿಲ್ಲ. ೩ನೇ ತಾ॥ ಸಾಯಂಕಾಲ ೫ ಘಂಟೆಗೇ ನಾನು ಶಾಲೆ ಬಿಟ್ಟು ಹೊರಟು ಹೋದೆ'' ಎಂದು ಉತ್ತರಕೊಟ್ಟರು. ಕಡೆಗೆ ಅಧ್ಯಕ್ಷರು

''ನಿಜವೊ ಸುಳ್ಳೊ ಮರೆಮಾಚಬೇಡಿ. ಬೇಕಾದರೆ ನೆನಪುಮಾಡಿಕ್ಕೊಂಡು ಬರೆದು ಕಳುಹಿಸಿ'' ಎಂದು ಹೇಳಿದರು.

ಮಿ॥ ಸಿರಾಜುದ್ದೀನ್ ಸಾಹೇಬರು

(ಬೆಂಗಳೂರು ಜಿಲ್ಲಾ ಪೋಲೀಸು ಸೂಪರಿಂಟೆಂಡೆಂಟರು. ೨ನೇ ಸಾಕ್ಷಿ)

''ನಗರಕ್ಕೆ ನಾನು ಜಬಾಬುದಾರನಲ್ಲ. ಅ॥ ಪೋ॥ ಸೂ॥ ರೇ ಜಬಾಬುದಾರರು''

ಅಧ್ಯಕ್ಷರ ಪ್ರಶ್ನೆಗಳಿಗೆ ಇವರು

'' ಇಲಾಖೆಯಲ್ಲಿ ನನಗೆ ೨೩ ವರ್ಷಗಳ ಸರ್ವೀಸಾಗಿದೆ. ಬೆಂಗಳೂರಿಗೆ ಒಬ್ಬ ಅ॥ ಪೋ॥ ಸೂಪರಿಂಟೆಂಡೆಂಟರಿದ್ದಾರೆ. ನನ್ನ ಕೈಲಿಲ್ಲ. ಜುಲೈ ೨೯ನೇ ತಾ॥ ಜನ್ನಪಟ್ಟಣದಲ್ಲಿ ಜಿಲ್ಲಾಧಿಕಾರಿಗಳು ಈ ವಿಚಾರ ನನಗೆ ಹೇಳಿ ಕೂಡಲೇ ಬೆಂಗಳೂರಿಗೆ ಹೋಗೆಂದರು. ನಾನು ಬಂದೆ. ೩೦ನೇ ತಾ॥ ಮಧ್ಯಾಹ್ನ ೨ ಘಂಟೆಗೆ ದಿವಾನರ ಮನೆಗೆ ಹೋದೆ. ರಾತ್ರಿ ೭॥ ವರೆಗೆ ಅಲ್ಲಿದ್ದೆ. ಆಮೇಲೆ ಪೋಲೀಸು ಶಾಖಾಧಿಕಾರಿಗಳು ಬಂದು ಗಲಾಟೆಯೇನೂ ಇಲ್ಲವೆಂದು ನಾನು ಹೇಳಲು ನನ್ನನ್ನು ಕರದುಕೊಂಡು ಎ. ಎಸ್. ಪಿ ಕಚೇರಿಗೆ ಬಂದರು. ಆಗ ಸುಮಾರು ೮ ಘಂಟೆ ಇರಬಹುದು. ಕೂಡಲೇ ಜನಗಳು ಓಡಿಬಂದು ''ಗುಂಡು ಹಾರಿಸುತ್ತಿದ್ದಾರೆ. ಮಾರಾಮಾರಿಯಾಗುತ್ತಾ ಇದೆ. ಬನ್ನಿ ಬನ್ನಿ'' ಎಂದು ಕೂಗಿದರು. ನಾನೂ ಎ. ಎಸ್. ಪಿ ಇಬ್ಬರೂ ಹೋದೆವು. ಮಾರ್ಕೆಟ್ ಬಳಿ ಬೇರೆಬೇರೆಯಾದೆವು ನಾನು ನಾಲಬಂದವಾಡಿ ಚೌಕಕ್ಕೆ ಹೋದೆ. ಅಲ್ಲಿ ಹಿಡಿದ ಮುಸಲ್ಮಾನರ ಗುಂಪಿತ್ತು. ರಾಣಾಸಿಂಗಪೇಟೆಯಲ್ಲೂ ಗುಂಪಿತ್ತು. ನಾನು ಹೊರಟುಹೋಗಿರೆಂದು ಅವರಿಗೆ ಹೇಳಿದೆ. ನಾನು ಹೋಗುವವೇಳೆಗೆ ಗಲಾಟೆ ಮುಗಿದು ಹೋಗಿತ್ತು. ೧೧—೧೨ರ ವರೆಗೂ ಅಲ್ಲಿದ್ದು ಎ. ಎಸ್. ಪಿ. ಗೆ ಹೇಳಿ ನಾನು ಮನೆಗೆ ಹೊರಟುಹೋದೆ '' ಅಂದರು. ಶ್ರೀ ರಾಮರಾಯರು ದೀರ್ಘಕಾಲ ಪಾಟಿಸವಾಲು ಮಾಡಿದರು. ಆಗ ಇವರು

''ನನಗೆ ಸುಮಾರು ೫೦ ಮಾರಾ ಮಾರಿ ವ್ಯವಹಾರಗಳ ಅನುಭವವಿದೆ. ಅದರಲ್ಲಿ ೧೮೯೮ ಜುಲೈ ನಡೆದ ಗಂಜಾಂ ಮಾರಾ ಮಾರಿ ದೊಡ್ಡದು. ವೀರನಗೆರೆ ಮಾರಾ ಮಾರಿ ನೋಡಿದ್ದೇನೆ. ನನಗೂ ಎ. ಎಸ್. ಪಿಗೂ ಕೆಲಸದಲ್ಲಿ ಹೆಚ್ಚು ವ್ಯತ್ಯಾಸ ಕಾಣೆ. ನಾನು ಅವರ ಮೇಲಿನ ಅಧಿಕಾರಿ. ಕೆಲವು ಅಮೂಲ್ಯ ಕಾಗದಗಳು ನನ್ನ ಮೂಲಕ ಹೋಗುತ್ತವೆ. ವಾರದ ಡೈರಿಗಳು ಬರುತ್ತವೆ. ಆಗಾಗ ಅವರು ನನ್ನ ಆಜ್ಞೆಗಳನ್ನು ನಿರೀಕ್ಷಿಸುವರು. ಸಲಹೆ, ಸಹಾಯಗಳನ್ನು ಕೇಳಿ ಪಡೆಯುತ್ತಾರೆ. ನಗರದಲ್ಲಿ ನನ್ನದೇನೂ ಜಬಾಬದಾರಿಯಿಲ್ಲ. ಸಿ. ಐ. ಡಿ ಗೂ ನನಗೂ ಸಂಬಂಧವಿಲ್ಲ. ಜನ್ನಪಟ್ಟಣದಲ್ಲಿ ಡೆಪ್ಯುಟೇಷನರು ಹೇಳೋವರೆಗೂ ನನಗೆ ವಿಚಾರವೇ ಗೊತ್ತಿಲ್ಲ. ಎ. ಎಸ್. ಪಿ. ನನಗೆ ತಿಳಿಸಲಿಲ್ಲ. ೨೮ನೇ ತಾರೀಖಿನ ದಿನ ಮೂವರನ್ನು ದಸ್ತಗಿರಿ ಮಾಡಲಾಗಲಿಲ್ಲವೆಂದು ಮಾತ್ರ ಎ. ಎಸ್. ಪಿ. ನನಗೆ ಹೇಳಿದರು. ೨೯ನೇ ಬೆಳಿಗ್ಗೆ ಇಬ್ಬರನ್ನು ದಸ್ತಗಿರಿ ಮಾಡಿದಂತೆ ತಿಳಿಸಿದರು. ಬೆಳಿಗ್ಗೆ ೯—೯॥ ಗಂಟೆಗೆ ನಾನೂ ಶಾಲೆಯ ಬಳಿ ಹೋದೆ ಸುಮಾರು ೧೦೦೦ ಹುಡುಗರಿದ್ದರಬಹುದಲ್ಲಿ. ಗುಂಪಿನಲ್ಲಿದ್ದವರಿಗೆ ಅಧಿಕಾರಿಗಳು ಗಣೇಶನನ್ನು ಕೊಡುತ್ತಾರೆ, ಹೊರಟು ಹೋಗಿರೆಂದು ಹೇಳಿದೆ. ರಿಸರ್ವ್ ಪೋಲೀಸಿನವರನ್ನು ಅಲ್ಲಿ ಡಿರೆಂದು ಎ. ಎಸ್. ಪಿ. ಗೆ ಹೇಳಿ ಅಲ್ಲಿಂದ ಐ. ಜಿ. ಮತ್ತು ಡಿ. ಸಿ. ಯನ್ನು ನೋಡಲು ಹೋದೆ. ಆನೆಕಲ್ಲಿಗೆ ಆ ದಿನ ನಾನು ಹೋಗಬೇಕಾಗಿತ್ತು. ಇಲ್ಲಿ ನಾನು ಬೇಕಾದೀತೇನೋ ಎಂದು ನಿಂತೆ. ದಿವಾನರ ಮನೆಯಿಂದ ಟೆಲಿಫೋನು ೨ ಘಂಟೆಗೆ ಬಂತು. ನಾನು ಅಲ್ಲಿಗೆ ಹೋದೆ. ಅಲ್ಲಿ ಸುಮಾರು ೧೦೦೦ ಹುಡುಗರಿದ್ದರು. ೫—೬ ಪೋಲೀಸಿನವರಿದ್ದರು. ೨—೩ ಜೈಲು ಸೇವಕರೂ, ೫—೬ ಸವಾರರೂ ಇದ್ದರು. ಅಲ್ಲಿ ದಿವಾನರೂ, ಐ. ಜಿ, ಡಿ. ಸಿ, ಛೀಫ್ ಸೆಕ್ರಟರಿ, ಮಿ॥ ಮ್ಯಾಥನ್ ಇವರೆಲ್ಲ ಇದ್ದರು. ಹುಡುಗರು ಗಿಡಗಳನ್ನೆಲ್ಲ ಕಿತ್ತು ಹಾಕಿದರು. ಎಲ್ಲೆಲ್ಲೂ ಹಾರಾಡುತ್ತಾ '' ನಾಯಕರನ್ನು ಬಿಟ್ಟು ಬಿಡಿ ಸಾರ್'' ಅನ್ನುತ್ತಿದ್ದರು. ಏಲ್ಲೆಲ್ಲೂ ಕೂಗಾಟ. ಕೆಲವು ಅಧಿಕಾರಿಗಳು ಹುಡುಗರೊಂದಿಗೆ ಮಾತನಾಡುತ್ತಿದ್ದರು. ದಿವಾನರು ಅಶಾರಾ ಕಚೇರಿಗೆ ಹೊರಟು ಹೋದರು. ನಾನು ದಾರಿ ಮಾಡಿದೆ. ಆಗ ಒಬ್ಬಿಬ್ಬರು ಗಾಡಿ ಮುಂದೆ ಮಲಗಿದರು. ಪೋಲೀಸಿನವರು ಅವರನ್ನು ಎಳೆದು ಹಾಕಿದರು. ಆಗ ೧೦—೧೨ ಕಲ್ಲುಗಳು ಗಾಡಿ ಮೇಲೆ ಬಿತ್ತು. ಯಾರು ಹಾಕಿದರೋ ನನಗೆ ಗೊತ್ತಿಲ್ಲ. ದಿವಾನರು ಹೋದ ಮೇಲೂ ಹುಡುಗರು ಕದಲಲಿಲ್ಲ. ಆಮೇಲೆ ೧೫—೨೦ ಸವಾರರು ಬಂದು ಅವರನ್ನೋಡಿಸಿದರು. ಅಂಗಳದಲ್ಲಿ ೧೮ ಸವಾರರೂ ೧೨ ರಿಸರ್ವ್ ಪೋಲೀಸಿನವರೂ ಇದ್ದರೂ. ಕೊಂಚ ಹೊತ್ತಿನಲ್ಲೇ ಹುಡುಗರೆಲ್ಲ ಚದರಿಹೋದರು. ಹುಡುಗರು ರೇಗಿದ್ದರೆಂದು ಹೇಳಲಾರೆ. ಕಲ್ಲುಗಳನ್ನು ಮಾತ್ರ ಹಾಕಿದರು. ದಿವಾನರು ಉತ್ತರ ಕೊಡದೆ ಹೋದ್ದರಿಂದ ಕಲ್ಲು ಹಾಕಿರಬಹುದು. ಸುಮಾರು ೭॥ ಘಂಟೆವರೆಗೆ ಅಲ್ಲೇ ಇದ್ದೆ. ಆ ಸ್ಥಳ ಬಿಡಲು ನನಗೆ ಆಜ್ಞೆ ಇರಲಿಲ್ಲ. ೭—೮ ಮಂದಿ ಸವಾರರು ರಕ್ತ ಸುರಿಸುತ್ತ ಬಂದರು. ಡಾ॥ ಉಸ್ಮಾನರಿಗೆ ಹೇಳಿ ಕಳಿಸಿದೆ. ಆವರಿಗೆ ಜೈಲು ಬಳಿ ಮತ್ತು ಯಲಹಂಕ ಬಾಗಲು ಬಳಿ ಪೆಟ್ಟು ಬಿತ್ತೆಂದು ಕೇಳಿದೆ. ಡಿ. ಸಿ. ಸಂಗಡ ಎ. ಎಸ್. ಪಿ ಕಚೇರಿಗೆ ಹೋದೆ. ಆಗ ಸುಮಾರು ೭॥ ಇರಬಹುದು. ೪—೫ ನಿಮಿಷದಲ್ಲೇ ಜನರು ಓಡಿ ಬಂದು '' ಗುಂಡು ಬೀಳುತ್ತಿದೆ. ಮಾರಾ ಮಾರಿ, ಪೋಲೀಸ್ '' ಎಂದು ಕೂಗಿದರು. ನಾನೂ ಎ. ಎಸ್. ಪಿ. ಇಬ್ಬರೂ ಓಡಿದೆವು. ಆಗ ಐ. ಜಿ. ಯಾಗಲಿ, ಡಿ. ಸಿ. ಯಾಗಲಿ ಏನೂ ಹೇಳಲಿಲ್ಲ. ಮಾರ್ಕೆಟ್ ಬಳಿ ಬೇರೆ ಬೇರೆ ಯಾದೆವು. ಬಹು ಗುಂಪಿತ್ತು. ನಾಲಬಂದವಾಡಿ ಚೌಕಕ್ಕೆ ಹೋದೆ. ಅಲ್ಲಿ ಜೊಡ್ಡ ಮುಸಲ್ಮಾರ ಗುಂಪಿತ್ತು. ಅವರ ಕೈಲಿ ಆಕಳಿಗಳಿದ್ದುವು. ' ದಿವಾನರಿಗೇಟು ಬತ್ತೋ' ಎಂದು ಕೂಗಿದರು. ಇಲ್ಲವೆಂದು ಹೇಳಿ 'ಗಲಾಟೆ ಮಾಡಬೇಡಿ ಹೊರಟು ಹೋಗಿ ಅಂದೆ. ಗುಂಡೋ

ಟೆಲಿಗ್ರಾಂ: ''ಕಾಯಸಿದ್ಧಿ'' ಟೆಲಿಫೋನ್: ನಂ. ೫೭೬೭

ತಮಿಳುನಾಡು ಆಯುರ್ವೇದಿಕ್ ಫಾರ್ಮೆಸಿ, ಲಿಮಿಟೆಡ್

P.O. Box 278. ಮದರಾಸು.

ಮದನಕಾಮೇಶ್ವರಿ ಲೇಹ್ಯಂ :—ವಯಸ್ಸಿನಲ್ಲಿ ಬಲವನ್ನೂ, ಮುದಿತನದಲ್ಲಿ ತಾರುಣ್ಯವನ್ನೂ ಉಂಟುಮಾಡುವುದು. ಇದು ನಪುಂಸಕತ್ವ, ಧಾತುಕ್ಷೀಣತೆ, ವಂಧ್ಯತ್ವ, ಸಂಭೋಗ ಕಾಲದಲ್ಲಿ ಬೇಗ ಇಂದ್ರಿಯಸ್ಖಲಿತವಾಗುವುದು. ವೀರ್ಯವು ನೀರಾಗಿರುವುದು ಇವನ್ನು ಹೋಗಲಾಡಿಸಿ, ಸಂಭೋಗಕಾಲದಲ್ಲಿ ತೃಪ್ತಿ, ಬಹಳ ಉತ್ಸಾಹ, ಕಡೆಗೆ ಕಣ್ಣಿಗೆ ತಂಪು ದೇಹಕ್ಕೆ ಶಾಂತಿ ಇವುಗಳನ್ನುಂಟುಮಾಡುತ್ತೆ. ಬೆಲೆ ೧ ಸೇರಿಗೆ ರೂ. ೫ :

ಮಹಾಕಾಯಾಮೃತ :—(ಸ್ತ್ರೀಯರ ಪ್ರದರರೋಗ) ಕುಸವ್ಯಾಧಿಗಳಿಗೆ ಎತ್ತಿದೌಷಧ. (ರಿಜಿಸ್ಟರ್ಡ್) ಇದು ರಕ್ತಪ್ರದರ, ಶ್ವೇತಪ್ರದರ, ಪಾತಪ್ರದರ, ಪಿತ್ತಜಪ್ರದರ, ಅಧಿಕಸ್ರಾವ, ದ್ರವ, ಜೇನುತುಪ್ಪ, ತುಪ್ಪ ಈ ವರ್ಣದಿಂದ ಮಜ್ಜಿಗೆಯಹಾಗೆ ದಪ್ಪವಾಗಿ, ವಾಸನೆಯಿಂದ ಕೂಡಿರುವುದು. ಮೂಲಬದ್ಧತೆ, ಹೊಟ್ಟೆಯುಬ್ಬರ, ನಡುವಿನಲ್ಲಿ ಛಳುಕು ಮೊದಲಾದ ವ್ಯಾಧಿಗಳನ್ನು ತಕ್ಷಣ ಗುಣಪಡಿಸುತ್ತೆ. ಬೆಲೆ ಡಬ್ಬಿ ೧ಕ್ಕೆ ರೂ. ೩

ಸಾವಿರಾರು ಸಿದ್ಧೌಷಧಿಗಳ ಪೂರ್ತಿ ಕ್ಯಾಟಲಾಗಿಗೆ ಬರೆಯಿರಿ.

ವಿಳಾಸ :—ಸೋಲ್ ಏಜಂಟರು (ಮೈಸೂರು ದೇಶಕ್ಕೆ) **ಸಿಟಿ ಮೆಡಿಕಲ್ ಜನರಲ್ ಏಜೆನ್ಸಿ, (V)**

೯೨, ಚಿಕ್ಕಪೇಟೆ ಬೆಂಗಳೂರು ಸಿಟಿ.

ಪಂತರ ಬೀದಿಯ ಕಡೆ ಹಿಂದುಗಡೆ ಗುಂಪಿತ್ತು. ಈ ಮಧ್ಯೆ ಯಾರೂ ಇರಲಿಲ್ಲ. ನಾನು ಯಾರನ್ನೂ ದಸ್ತಗಿರಿ ಮಾಡಲಿಲ್ಲ. ನನಗೆ ಏನೂ ಮಾಡಲು ಯಾರೂ ಆಜ್ಞೆ ಮಾಡಿರಲಿಲ್ಲ. ಜನಗಳೇನೋ 'ಗುಂಡು ಹಾರಿತು, ಗುಂಡು ಹಾರಿತು' ಅನ್ನುತ್ತಿದ್ದರು. ಮಾರ್ಕೆಟ್ ಒಳಿ ಮಾತ್ರ ಗಾಯವಾದ ಹಿಂದುಮೊಬ್ಬನನ್ನು ನೋಡಿದ್ದೆ. ಅಷ್ಟೆ. ಮತ್ತೆ ಗಾಯಪಟ್ಟವರೂ ಬ್ಯಾರನ್ನಾದರೂ ನೋಡಲಿಲ್ಲ. ನನಗೆ ಕಲ್ಲಿಪ್ಪವರೂ ಬ್ಯಾರೂ ಗೊತ್ತಿಲ್ಲ. ಹೆಸರುಗಳನ್ನು ಒಕೆ ಕೇಳಲಿಲ್ಲ.

ಕೆಲವನ್ನು ಗುರ್ತಿಸ ಬಲ್ಲೆ.

ರಾಮರಾಯರು—ನೀವಲ್ಲಿದ್ದುದೇಕೆ? ದಸ್ತಗಿರಿ ಏಕೆ ಮಾಡಲಿಲ್ಲ. ಏಮೇಲೇಕೆ ವಿಚಾರಣೆ ನಡೆಸಲಿಲ್ಲ. ನಿಮ್ಮ ಕೆಲಸವಲ್ಲವೋ ಅದು.

ಉ—ದಸ್ತಗಿರಿ ಮಾಡಲಿಲ್ಲ. ಅದೆಲ್ಲ ಎ. ಎಸ್. ಪಿ. ಕೆಲಸ. ನನಗೆ ಆಜ್ಞೆ ಇಲ್ಲ. ಯಾರೂ ದೂರು ಹೇಳಲಿಲ್ಲ.

ರಾಮ—ಗುಂಡು ಹಾರಿತೆಂದು ಯಾರೂ ಹೇಳಲಿಲ್ಲವೆ?

ಉ—ಎಲ್ಲರೂ ಕೂಗುತ್ತಿದ್ದರು. ಅಷ್ಟೆ.

ರಾಮ—ಪೋಲೀಸಿನವನು ಯಾರೂ ಗುಂಡುಹಾರಿತೆಂದು ಹೇಳಲಿಲ್ಲ? ಶೇಷಾದ್ರಿ ಹೇಳಲಿಲ್ಲ?

ಉ—ಇಲ್ಲ. ಗುಂಡುಬಿದ್ದ ವದಂತಿಯನ್ನೇನೊ ಡಿ. ಸಿ. ಗ ಹೇಳಿದೆ.

ರಾಮ—ಗುಂಡಿನ ವಿಚಾರ ನೀವೇನೂ ವಿಚಾರಣೆ ನಡೆಸಲೇ ಇಲ್ಲ!

ಉ—ಇಲ್ಲ. ಎ. ಎಸ್. ಪಿ. ಯನ್ನು ನಾನು ನೋಡಲಾಗಲಿಲ್ಲ. ನಾನು ಹೊರುವಷ್ಟೊತ್ತಿಗೆ ಹೊಡೆದಾಟವೆಲ್ಲ ಮುಗಿದಿತ್ತು. ೧೦ ಘಂಟೆ ಮೇಲೆ ಗಲಾಟೆಯೇ ಇರಲಿಲ್ಲ.

ರಾಮ—ತಕ್ಕ ಸಿಬ್ಬಂದಿಯನ್ನು ತರಿಸಿ ಲಾಠೀ ಹಿಡಿದಿದ್ದವರನ್ನೇಕೆ ದಸ್ತಗಿರಿ ಮಾಡಲು ನೀವು ಹೇಳಲಿಲ್ಲ? ನೀವು ಜಿಲ್ಲೆಗೆ ಅಧಿಕಾರಿಗಳಲ್ಲವೋ? ಅದು ನಿಮ್ಮ ಕರ್ತವ್ಯವಲ್ಲವೋ?

ಉ—ದಸ್ತಗಿರಿ ಮಾಡಲಿಲ್ಲ. ನನ್ನೆದುರಿಗೆ ಯಾರೂ ತುಂಟತನಮಾಡಲಿಲ್ಲ. ನಗರದಲ್ಲಿ ನನಗೆ ಜಬಾಬ್ದಾರಿಇಲ್ಲ. ನಮ್ಮಲ್ಲಿ ಆಯುಧಗಳಿಲ್ಲ.

ರಾಮ—ತುಂಟರನ್ನು, ಆಯುಧಪಾಣಿಗಳನ್ನು ದಸ್ತಗಿರಿ ಮಾಡಲಿಲ್ಲವೇ ಎಂದು ನೀವು ಎ. ಎಸ್. ಪಿ. ಯನ್ನು ಕೇಳಲಿಲ್ಲವೋ?

ಉ—ಇಲ್ಲ. ಅಲ್ಲಿ ಸುಮಾರು ೧೦-೧೫ ರಿಸರ್ವ್ ನವರಿದ್ದರು ಶಾಲೆಯ ಬಳಿ ಕೆಲವು ಪೋಲೀಸಿನವರೂ ಭಲ್ಯದವರೂ ಇದ್ದರು. ಶ್ರೀ ಕೃಷ್ಣೇಅರಸಿನವರು ಸವಾರರ ನಾಯಕರಾಗಿದ್ದರು.

ರಾಮ—ಐ. ಜಿ. ಗೆ ಗಾಯವಾದುದೂ ಗೊತ್ತಿಲ್ಲವೊ?

ಉ—ಬೆಳಿಗ್ಗೆ ಗೊತ್ತಾಯಿತು. ಆಗ ನನಗೆ ಆಶ್ಚರ್ಯವಾಯಿತು.

ರಾಮ—ನೀವು ಎಫ್. ಐ. ಆರ್. ಕಳಿಸಿದಿರೊ?

ಉ—ಇಲ್ಲ. ಎ.ಎನ್.ಪಿ. ಸಂಗಡ ಮಾತನಾಡಲು ಆಗಲಿಲ್ಲ.

ಅಧ್ಯಕ್ಷ—ಒಳ್ಳೇ ಪೋಲೀಸಿನವರು! ಒಳ್ಳೇ ಅಧಿಕಾರಿಗಳು ನೀವು! ಮತ್ತೆ ನೀವಲ್ಲಿಗೆ ಹೋದದ್ದೇಕೆ? ತಮಾಷೆನೋಡಲಿಕ್ಕೊ?

ರಾಮ—ಅಂದೇ ತಾ ರಾತ್ರಿ ತಕ್ಕ ಸಿಬ್ಬಂದಿ ನಿಮಗಿರಲಿಲ್ಲ. ಆದ್ದರಿಂದ ಯಾರನ್ನೂ ದಸ್ತಗಿರಿಮಾಡಲಿಲ್ಲ. ಹೌದೋ?

ಉ—ಹೌದು. ೧೫ ಅಥವಾ ೨೦ನೇ ತಾರೀಖು ಸ್ಪೆಷಲ್ ಮ್ಯಾಜಿಸ್ಟ್ರೇಟರ ನೇಮಕರವಾಗಿದೆಯೆಂದು ಕೇಳಿದೆ.

ರಾ—ದಸ್ತಗಿರಿ ಮಾಡಬೇಡವೆಂದು ನಿಮಗೆ ಮೇಲಿಂದ ಯಾರೂ ಹೇಳಲಿಲ್ಲವೊ?

ಉ—ಇಲ್ಲ. ಏನು ಮಾಡಲಿಕ್ಕೂ ನನಗೆ ಅಪ್ಪಣೆಇರಲಿಲ್ಲ.

ಮಾ. ಮೊದಲಿಯಾರ್—ಆಸ್ಪತ್ರೆ ಬಳಿ ಗಾಯಪಟ್ಟವೆನೇಕರು ದಿಕ್ಕಿಲ್ಲದೆ ಗೋಳಾಡುತ್ತಿದ್ದುದು ನೀವು ನೋಡಿದಿರೋ?

ಉ—ಇಲ್ಲ. ಆ ವಿಚಾರ ತನಿಖೆಯನ್ನು ನಾನು ಮಾಡಲಿಲ್ಲ.

ಮೊದ—ಸವಾರರು ಬಂದ ಮೇಲಾದರೂ ದಸ್ತಗಿರಿ ಮಾಡಬಹುದಾಗಿತ್ತಲ್ಲ?

ಅಮಲೆಗಳನ್ನು ಶುಶ್ರೂಷೆಮಾಡಬಹುದಾಗಿತ್ತಲ್ಲ? ಜನರು ಬಡುಕೊಳ್ಳುತ್ತಿದ್ದರಲ್ಲ? ನೀವೇಕೆ ಕಿವಿಗೊಡಲಿಲ್ಲ? ನೀವು ಅಧಿಕಾರಿಗಳಲ್ಲವೆ? ನಿಮಗೆ ಸಂಬಳ ಕೊಡವುದೇತಕ್ಕೆ?

ಉ—ಎ. ಎಸ್. ಪಿ. ಪೂರ್ಣಜಬಾಬುದಾರರು. ಹೆಸರಿಗೆ ಮಾತ್ರ ನಾನು ಮೇಲಧಿಕಾರಿ.

ಮೊದ—ಜನರು ಹೊಡೆದರೂ, ಪುಂಡಾಟ ಮಾಡಿದರೂ, ನೀವು ದಸ್ತಗಿರಿ ಮಾಡುವುದಿಲ್ಲವೋ? ಹೋಗಲಿ ಹೆರುಗಳನ್ನಾದರೂ ಬರಕೋಬೇಡವೆ?

ಉ—ಕಾಗದ ಕಡ್ಡಿ ಇರಲಿಲ್ಲ (ನಗು)

ಮೊದ— ಯಾವ ಅಧಿಕಾರಿಗಳೆಲ್ಲಿದ್ದಾರೆ? ಎಲ್ಲಿ ಏನು ಮಾಡುತ್ತಿದ್ದಾರೆ? ಏನುಗತಿಯಾಗಿದೆ. ಇದು ಒಂದೂ ನಿಮಗೆ ಗೊತ್ತಿಲ್ಲ. ಶ್ರೀ ಸಂಜೀವಪ್ಪನವರು ನಿಮಗೆ ಹೇಳಲಿಲ್ಲವೂ?

ಉ—ಇಲ್ಲ. (ಅವರನ್ನು ತಂದು ನಿಲ್ಲಿಸಿದಮೇಲೆ ಇವರನ್ನು ನೋಡಿದ್ದೇನೆ ಅಂದರಾ)

ಅಧ್ಯಕ್ಷ—ಹಿಂದೂಗಳು ಆಯುಧಪಾಣಿಗಳಾಗಿದ್ದರೊ?

ಉ—ಇಲ್ಲ.

ಮೊದ—ಬಾಣಬಿರುಸು ಮಾಡುವ ಅಬ್ದುಲ್ ಗಫೂರೆಂಬುವನು ಗೊತ್ತೊ?

ಉ—ಇಲ್ಲ.

ಮೊದ—ಪೋಲೀಸಿನವರಿಗೆಲ್ಲ ಅಧಿಕಾರಿಗಳಿಗೆಲ್ಲ ಗೊತ್ತಿರಬೇಡವೊ? ಬಾಬಾ ಗೊತ್ತೊ?

ಉ—ಗೊತ್ತಿಲ್ಲ.

ಅಧ್ಯಕ್ಷ—ನೀವು ಪೆಂಗಳೂರಿಗೆ ಪನ್ನಪಟ್ಟಣದಿಂದ ಬಂದುದೇಕೆ? ಮನೆಯಲ್ಲಿ ಮಲಗಲಿಕ್ಕೊ? ನಗರ ಶಾಂತಿಸ್ಥಾಪನೆಯು ನಿಮ್ಮ ಕೆಲಸವಲ್ಲವೊ? ನೀವು ಮಾಡಿದ್ದೇನು? (ಆಗ ಶ್ರೀ ನಾಗಪ್ಪನವರೂ ಸಹ ಆವೇಶದಿಂದ ಉಗ್ರಸ್ವರದಲ್ಲಿ ಪ್ರಶ್ನೆಗಳನ್ನು ಪ್ರಾರಂಭಿಸಿದರು. ಅಧ್ಯಕ್ಷರು ನಿದಾನವಾಗಿ ಮಾತನಾಡಲೆಂದು ಹೇಳಿದರು) ಶ್ರೀ ನಾಗಪ್ಪನವರು ಪ್ರಾಮಿಸರಿಂದ ಆ ಅಧಿಕಾರಿಗಳು ತಮ್ಮ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸಲಿಲ್ಲವೆಂಬಂಶವನ್ನು ಹೊರಕ್ಕೆಳೆದರು. ಪ್ರಶ್ನೆಹಾಕಿದರೆ 'ಗುಂಡು ಹಾರಿಸಿದ ಸಮಾಚಾರ ಗೊತ್ತಿಲ್ಲ; ಸುಬ್ಬರಾಮ ಶೆಟ್ಟರನ್ನೇ ಬಿಟ್ಟದ್ದು ಗೊತ್ತಿಲ್ಲ' ಅಂದುಬಿಟ್ಟರು. ಜಿಲ್ಲಾಮ್ಜಿಸ್ಟ್ರಿ ಸುಮಾರು ೨೦೦ ಪೋಲೀಸು ಬಲವಿದೆಯೆಂದು ಹೇಳಿದರು.

ಶ್ರೀ ರಾಮರಾಯರ ಪ್ರಶ್ನೆಗೆ 'ನಾನು ಅಬ್ಬಾಸ ಖಾನನನ್ನು ಕಂಡಿದ್ದುಂಟು, ಸುಂಡಿನೇಟು ವಿಚಾರ ಅವರ ಸಂಗಡ ಮಾತನಾಡಿಲ್ಲ. ರಾಮನಾಥಯ್ಯಂಗಾರ್ಯರ ಮಗನೂ ಸಹ ಸನ್ನೊಂದಿಗೆ ಮಾತನಾಡಿಲ್ಲ. ಶೇಷಾದ್ರಿಗೆ ಎಟು ಬಿದ್ದದ್ದು ೨-೩ ದಿನಗಳ ಮೇಲೆ ಗೊತ್ತಾಯಿತು' ಎಂಬ ಪ್ರಶ್ನೆ ಬಂತು.

ಆಗ ಅಧ್ಯಕ್ಷರು "ನಿಮ್ಮೆಲ್ಲರ ಉದಾಸೀನತೆಯಿಂದ ಸರ್ಕಾರವೇ ಪಜೀತಿಗೆ ಸಿಕ್ಕಿಕೊಂಡಿತು, ನಿರ್ಮಕರ್ತವ್ಯ ನೀವು ಮಾಡಲಿಲ್ಲ." ಅಂದರು.

ಶ್ರೀ ಬಿ. ಎಸ್. ಸಂಜೀವಪ್ಪನವರು

(ಸಿಟಿ ಮಾರ್ಕೆಟ್ ಕಂಟ್ರಾಕ್ಟರ್—ಇನೆ ಸಾಕ್ಷಿ)

"ಖಾನನ ಅಂಗಳದಲ್ಲಿಮೂಪಿಳ್ಳೆಗಳನ್ನು ಕಂಡೆ."

ಇವರು ತಮ್ಮ ವಾಜ್ಮೂಲವನ್ನು ಬರೆದು ತಂದು ಓದಿದರು. ಇದನ್ನೇ ೨೮-೮-೩೪ರಲ್ಲಿ ಇವರು ಶ್ರೀ ಮಾಡಯ್ಯನವರ ಮುಂದೆ ಹೇಳಿರುವರು: ಇಲ್ಲಿ ಸಂಕ್ಷೇಪವಾಗಿ ಅದನ್ನು ಕೊಡಲಾಗಿದೆ:—

೧. ೧೫-೬-೩೪ ನನಗೆ ಗಣೇಶನ ಬಂಧನದ ಸುದ್ದಿ ಕಿವಿಗೆ ಬಿತ್ತು. ಸಪ್ಲೈಹಸ್ಪರ್ ತಿಳಿಸಿದರು. ಅಂದೇ ಶಿಕ್ಷಣ ಶಾಖಾಧಿಕಾರಿಗಳು ಶಾಲೆಗೆ ಹೋದದ್ದು. ನನ್ನನ್ನು ಕೆಲವರು ಅಲ್ಲಿಗೆ ಹೋಗಿ ಮಾತನಾಡಲು ಕೇಳಿದರು. ನನಗೆ ಹೋಗಲು ಆಗಲಿಲ್ಲ.

೨. ೨೮-೭-೩೪ ನಗರದ ದೊಡ್ಡಮನುಷ್ಯರೆನೇಕರು ಗಣೇಶನ ಬಂಧನದ ವಿಚಾರ ಮಾತನಾಡುತ್ತಿದ್ದರು. ನಾನು ಕೆಲವರೊಂದಿಗೆ ಈ ವಿಚಾರಮಾಡಿ

ಆಯುರ್ವೇದರತ್ನ ಪಂ॥ ಡಾ॥ ಯಸ್. ಕೃಷ್ಣಮಾಚಾರ್ಲು ಆಲ್ ಇಂಡಿಯಾ ಆಯುರ್ವೇದ ವೈದ್ಯಶಾಲಾ ಮದ್ರಾಸು

ಸಿದ್ಧಕಲ್ಪ ಚಂದ್ರೋದಯದ ಮಹಿಮೆ

ಶ್ರೀ ಕೃಷ್ಣಸ್ವಾಮಯ್ಯಂಗಾರ್ರು, ಪ್ರೆಸಿಡೆಂಟ್ ಯೂನಿಯರ್ಬೋರ್ಡು ಮೆತ್ತು ಸೆಕ್ರೆಟರಿ, ಮದುರಾಂತಕಂ ಬ್ಯಾಂಕ್:—ನಾನು ನಿಮ್ಮ "ಸಿದ್ಧಕಲ್ಪ ಚಂದ್ರೋದಯ" ಉಪಯೋಗಿಸಿದ್ದೇನೆ ಮತ್ತು ಇದು ಉತ್ತಮವಾದ ರಕ್ತಶೋಧಕ ಮತ್ತು ನರಗಳಿಗೆ ಬಲವನ್ನುಂಟುಮಾಡುವ (First class Nervine Tonic & Blood Purifier) ಟಾನಿಕ್ ಆಗಿದೆ ಎಂದು ತಿಳಿಸಲು ತುಂಬಾ ಸಂತೋಷವಾಗುತ್ತದೆ. ನನಗಿದ್ದ ಹಳೇರೋಗದಲ್ಲಿ ಇದು ಬಹಳ ಆಶ್ಚರ್ಯವಾಗುವಂತೆ ಗುಣಮಾಡಿದೆ ಮತ್ತು ಅನೇಕ ಇಂಗ್ಲಿಷ್ ಮತ್ತು ನೇಟಿವ್ ಔಷಧಿಗಳಿಂದ ಏನೂ ಗುಣವಾಗಿಲ್ಲ. ಇದನ್ನು ನಾನು ಸೇವಿಸಿದ ನಂತರ ಆರೋಗ್ಯವಾಗಿರುವವರಿಗೆ ತಕ್ಷಣ ಆರೋಗ್ಯವನ್ನುಂಟುಮಾಡಬಲ್ಲ ಔಷಧಿಯೆಂದು ಶಿಫಾರಸು ಮಾಡುತ್ತೇನೆ.!!

ಇದರಿಂದ, ರಕ್ತಶುದ್ಧಿ, ವೀರ್ಯವೃದ್ಧಿ ಆಗಿ ಸಮಸ್ತ ಅಜೀರ್ಣಸಂಬಂಧ ರೋಗಗಳು, ನಜ್ಜುಜ್ವರ, ವಾಯುನೋವು, ಸಾಂಡು ಕಾಮಾಲೆ ಕ್ಷಯ, ಮೇಹರೋಗ ಇವೇ ಮೊದಲಾದ ದೀರ್ಘಕಾಲದ ವ್ಯಾಧಿಗಳು ತಕ್ಷಣ ಗುಣವಾಗುತ್ತವೆ.

ದೊಡ್ಡ ಬಂಡಲ್‌ಗೆ ರೂ. ೫೦

ನೂರಾರು ಸಿದ್ಧೌಷಧಗಳ ಪೂರ್ತಿ ಕ್ಯಾಟಲಾಗಿಗೆ ಬರೆಯಿರಿ. ಮುಫತ್ತಾಗಿ ಕಳುಹಿಸಲ್ಪಡುವುದು

ವಿಳಾಸ:—ಸೋಲ್ ಏಜಂಟ್ಸ್

ಸಿಟಿ ಮೆಡಿಕಲ್ ಮತ್ತು ಜನರಲ್ ಏಜನ್ಸಿ, (V)೯೨, ಚಿಕ್ಕಪೇಟೆ, ಬೆಂಗ

ದೆ. ಜುಲೈ ೨೮ನೇ ತಾರೀಖಿನ ದಿನ ಊರಲ್ಲೆಲ್ಲ ಇದೇ ಮಾತು. ನಾನು ಎಷ್ಟು ಹೇಳಿದರೂ ಹುಡುಗರು ಮುಷ್ಕರಬಿಡಲಿಲ್ಲ.

೩. ೩೦—೮—೨೮ ೧೧॥ ಘಂಟೆಗೆಯ ಸೂಮಾರಿನಲ್ಲಿ ಊರಿನ ಹುಡುಗರೆಲ್ಲ ಮುಷ್ಕರ ಮಾಡಿದರೆಂಬ ಸುದ್ದಿ ಬಂತು. ಸಾಯಂಕಾಲ ೪ ಘಂಟೆಯ ಮೇಲೆ ಯುನೆ ಬಿಟ್ಟು ಇಂಜನಿಯರಿಂಗ್ ಆಫೀಸಿಗೆ ಹೋಗುತ್ತ ಯುಲಹಂಕ ಬಾಗಲು ಬಳಿ ಗುಂಪನ್ನೂ, ಸವಾರರು ಅವರನ್ನು ಅಟ್ಟುತ್ತಿದ್ದುದನ್ನೂ, ಹುಡುಗರು ಪ್ರಾಣ ಸಂರಕ್ಷಣೆಗಾಗಿ ದಿಕ್ಕಾಪಾಲಾಗಿ ಓಡುತ್ತಿದ್ದನ್ನೂ ಕಂಡೆನು. ಅಲ್ಲಿಂದ ಮುಂದೆ ಕೃಷ್ಣರಾಜೇಂದ್ರ ವೃತ್ತದ ಬಳಿಯೂ ಇದೇ ನೋಟವೇ ಸವಾರರು ಅಠಾರಾ ಕಚೇರಿ ಕಡೆಯಿಂದ ಬರುತ್ತಿದ್ದ ಹುಡುಗರನ್ನು ಅಟ್ಟುತ್ತಿದ್ದರು. ನಾನು ವಿ॥ ಕರ್ವೆಯವರನ್ನು ಕಂಡು ಸುಮಾರು ೫ ಘಂಟೆಗೆ ಹೊರಗೆ ಬಂದೆ. ಶ್ರಿ ಶಂಕರನಾರಾಯಣರಾಯರ ಮೇಲೂ ಸವಾರರ ಕೃಪೆ ಬಿತ್ತೆಂದು ಕೇಳಿದೆ. ಮನೆಗೆ ಹೋದ ದ್ದಾಯಿತು. ಅಲ್ಲಿಂದ ಸುಮಾರು ೬॥ ಘಂಟೆಗೆ ಮಾರ್ಕೆಟ್ಟಿಗೆ ಹೋದೆ. ಅಲ್ಲಿಗೆ ನಾಯಕರ ಮೆರವಣಿಗೆಯ ಗಲಾಟೆ ಬಂತು. ಮಾರ್ಕೆಟ್ ಪಶ್ಚಿಮ ಬಾಗಲಿನಿಂದ ಮೊದಲೇ ನಾನು ಶಾಲೆಯ ಬಳಿಗೆ ಹೋದೆ.

೪. ಆಗ ವಿ॥ ಅಬ್ಬಾಸ್‌ಖಾನರ ಮನೆಯ ಕಾಂಪೌಂಡಿನೊಳಗೆ ೪—೫ ಮಂದಿ ಮಾಪಿಳ್ಳೆಗಳನ್ನು ಕಂಡೆ. ತಳಾಯಿಸುತ್ತಿದ್ದರು. ನಾನು ವಿ॥ ಅಬ್ಬಾಸ್‌ಖಾನರ ಮನೆಯ ಮುಂದೆ, ಶಾಲೆಯ ಗೋಡೆಯ ಬಳಿ ನನ್ನ ಸ್ನೇಹಿತರೊಂದಿಗೆ ಮಾತಾಡುತ್ತ ನಿಂತಿದೆ, ಮೆರವಣಿಗೆ ಬಂತು. ಮಂಗಳಾರತಿಯಾಯಿತು. ಗುಂಪು ಹೊರಕ್ಕೆ ಹೊರಟಿತ್ತು. ಅಬ್ಬಾಸ್‌ಖಾನರ ಮನೆಯಿಂದ ಕಲ್ಲುಗಳು ಬೀಳಲಾರಂಭಿಸಿದವು. ಗಲಾಟೆಯಾಯಿತು. ಮೂಲೆಯ ಮನೆಯ ಮೇಲಿಂದ ನಾಲ್ಕು ಗುಂಡುಗಳು ಹಾರಿದುವು. ಬೆಂಕಿ ಕಂಡೆ. ಮುಕ್ಕಾಲು ಪಾಲು ಜನರು ಓಡಿದರು. ಹುಡುಗರು ಖಾನರ ಮನೆಯ ಕಡೆಗೂ ಮೂಲೆಯ ಮಾಡಿಗೂ ಕಲ್ಲುಗಳೆಸೆದರು. ಖಾನರ ಮನೆಯಿಂದ ಮತ್ತೆ ಕಲ್ಲುಗಳು ಬಂದವು. ಖಾನರ ಅಂಗಳದಲ್ಲಿದ್ದ ಮಾಪಿಳ್ಳೆಗಳು ಮರದ ರೆಂಬೆಗಳನ್ನು ಮುರಿದ ಮತ್ತೆ ಮೂಲೆ ಮನೆಯಿಂದ ೨ ಗುಂಡುಗಳು ಜನರ ಮೇಲೆ ಬಿದ್ದವು. ಆ ಮೇಲೆ ಖಾನರ ಮನೆ ಬಾಗಲು ತೆರೆಯಿತು. ೩—೪ ಮಂದಿ ಕಟ್ಟಿಗೆ ತಿರುಗಿಸುತ್ತ ಹೊರಕ್ಕೆ ಬಂದರು. ಆ ಮೇಲೆ ೨೦—೩೦ ಮಂದಿ 'ದೀನ್ ದೀನ್' ಅನ್ನುತ್ತಾ ಮನೆಯಿಂದ ಹೊರಕ್ಕೆ ಬಂದರು. ಅವರಲ್ಲಿ ಕೆಲವರು ಉತ್ತರಕ್ಕೂ ಕೆಲವರು ದಕ್ಷಿಣಕ್ಕೂ ಹೋದರು. ಮನೆಯ ಮುಂದೆ ೩—೪ ಮಂದಿ ನಿಂತರು. ಒಬ್ಬನು ದೊಣ್ಣೆ ಹಿಡಿದು ನನ್ನ ಕಡೆ ಓಡಿದನು. ಮೋರೀ ಬಳಿ ಇದ್ದೆ 'ಕ್ಯಾಜೇ' ಅಂದೆ ಸುಮ್ಮನಾದನು. ಅವನನ್ನು ಗುರ್ತಿಸ ಬಲ್ಲೆ.

೪. ಉತ್ತರದ ಕಡೆ ಅನೇಕರಿಗೆ ಪೆಟ್ಟು ಬೀಳುತ್ತಿತ್ತು. ಮುಸಲ್ಮಾನರು 'ದೀನ್' ದೀನ್' ಅನ್ನುತ್ತಾ ಶಾಲೆಯ ಅಂಗಳದಿಂದ ಹೊರಕ್ಕೆ ಓಡಿದರು. ಅಂಗಳದಲ್ಲಿ ಕತ್ತಲಾಗಿತ್ತು. ಆ ಮೇಲೆ ಖಾನರ ಮನೆಯ ಮೇಲಿಂದ ಗುಂಡುಗಳು ಹಾರಿದವು. ಬೆಂಕಿ ಕಂಡಿರ ೨ —೩ ಸಲ ಕಂಡೆ. ಶಾಲೆಯ ಕಡೆ ಹಾರಿಸಿದ ಹಾಗಿತ್ತು.

೫. ಗಾಯ ಪಟ್ಟವರು ಬಾದು ಬಂದು ಚೌಕಕ್ಕೆ ಪೂರ್ವ ಭಾಗದಲ್ಲಿ ಬೀಳುತ್ತಿದ್ದರು. ಡಿ ಎಸ್. ಪಿ. ಬಂದರು. ರಿಸರ್ವ ತರುತ್ತೇನೆಂದು ಹೇಳಿ ಹೊರಟು ಹೋದರೂ ಪೆಟ್ಟು ಬಿದ್ದ ಶೇಷಾದ್ರಿಯನ್ನು ಹೊತ್ತು ತಂದರು. ಸುಬ್ಬರಾಮು ಶೆಟ್ಟರಿ ಗೇಟು ಬಿತ್ತು.

೬. ನಾನೂ, ನರಸಿಂಗರಾಯರೂ ಪೊ॥ ಸ್ಟೇಷನಿಗೆ ಹೋಗಿ, ಡಿ. ಸಿ. ಐ. ಜಿ, ಕೃಷ್ಣೇ ಅರಸ್ ಇವರಿಗೆಲ್ಲ ಸಮಾಚಾರ ತಿಳಿಸಿ, ಆಸ್ಪತ್ರೆಗೆ ಹೋದೆವು ಅನೇಕ ಗಾಯ ಪಟ್ಟವರಿದ್ದರು.

೭. ಮತ್ತೆ ಆ ಸ್ಥಳಕ್ಕೆ ಹೋದೆ. ಗಣೇಶನು ಕೆಳಗೆ ಬಿದ್ದು ಮಣ್ಣು ಮುಕ್ಕುತ್ತಿತ್ತು. ಖಾನರ ಮನೆಯ ಮುಂದೆ ಅನೇಕ ಮುಸಲ್ಮಾನರು ಆಯುಧ ಪಾಣಿಗಳಾಗಿದ್ದರು. ಅವರೆಲ್ಲ ಅಲ್ಲಿ ಸೋಡಾ ಕೂಡಿಯುತ್ತಿದ್ದರು. ದಸ್ತಗಿರಿ ಮಾಡಿರೆಂದು ಪೋಲೀಸಿನವರಿಗೆ ಹೇಳಲು ಎಲ್ಲರೂ 'ಮೇಲಿನ ಅಧಿಕಾರಿಗಳಿಗೆ ಹೇಳಿ' ಅನ್ನುತ್ತಿದ್ದರು. ಎ. ಎಸ್. ಪಿ. 'ಹೋಗಿ ಹೋಗಿ' ಅಂದರು ಡಿ. ಎಸ್. ಪಿ. ಗಳು 'ಹೊರಡಿ, ಹೊರಡಿ, ನಮಗೆಲ್ಲ ಗೊತ್ತು' ಅಂದರು. ಡಿ. ಸಿ. ಗಳು 'ಇದು ಸಮಯವಲ್ಲ. ತಾಳಿ, ತಾಳಿ' ಅಂದರು.

೮. ನಾನು ಅನೇಕ ಮುಸಲ್ಮಾನರನ್ನು ಗುರ್ತಿಸಬಲ್ಲೆ. ಅನೇಕರ ಹೆಸರನ್ನು ಕೊಡ ಬಲ್ಲೆ. ರಹಸ್ಯವಾಗಿ ಇನ್ನೂ ಕೆಲವು ವಿಚಾರಗಳನ್ನು ಹೇಳಬಲ್ಲೆ.

(೧೪ನೇ ತಾರೀಖು ಗುರುವಾರ)

ಶ್ರೀ ಮಂಡಯಂ ನರಸಿಂಹಯ್ಯಂಗಾರ್

(ಬೆಂಗಳೂರು ನಗರದ ಆ॥ ಪೋ॥ ಸೂಪರಿಂಟೆಂಡೆಂಟ್)

"ಶೇಷಾದ್ರಿಗೆ ಗಾಯವಾದನಂತರ ನಮ್ಮ ಪೋಲೀಸ್ ವ್ಯವಸ್ಥೆಯು ಮುರಿದುಹೋಯಿತು !!"

"ತಕ್ಕ ಪೋಲೀಸು ಬಲವಿಲ್ಲದ್ದರಿಂದ ನಾವು ಯಾರನ್ನೂ ದಸ್ತಗಿರಿ ಮಾಡಲಾಗಲಿಲ್ಲ."

ಮೊದಲು ಆಯ್ಯಂಗಾರ್ಯರು ನಡೆದ ಸಂಗತಿ ಸಂಕ್ಷೇಪವಾಗಿ ಹೇಳಿದರು :—

ಜುಲೈ ೨೩ನೇ ರಾತ್ರೆ ಶಾಲೆಯ ವಿಚಾರ ನನ್ನ ಕಿವಿಗೆ ಬಿತ್ತು. ೪ಳರಲ್ಲಿ ಹುಡುಗರು ಮುಷ್ಕರ ಹಿಡಿದರು. ೨೫, ೨೬, ೨೭ರಲ್ಲಿ ಹುಡುಗರು ಬೀದಿಗಳಲ್ಲಿ ಮೆರವಣಿಗೆ ಹೊರಟು ಮಾಮೂಲುಪೇಟೆ, ಚಾಮರಾಜಪೇಟೆ, ಬಳೇಪೇಟೆ ಶಾಲಾ ಹುಡುಗರನ್ನು ಹೊರಕ್ಕೆ ಬರುವಂತೆ ಕೂಗುತ್ತಿದ್ದರು. ಶ್ರೀ ಸುಬ್ರಹ್ಮಣ್ಯಂ ಅವರ ಮುಂದಾಳು. ೨೭ನೇ ತಾ॥ ಸಾಯಂಕಾಲ ಸುಬ್ರಹ್ಮಣ್ಯಂ, ಭೀಮರಾವ್ ಮುಂತಾದವರು ಸ್ಕೂಲು ಬಳಿ ಇದ್ದರು. ೨೦—೨೫ ಹುಡುಗರು ಕೂತಿದ್ದರು. ಮೂವರಿಗೂ ಹೊರಡಿರೆಂದು ಹೇಳಿದೆ, ಅವರು ಕೇಳಲಿಲ್ಲ. ಡಿ. ಸಿ. ಯವರು ೧೪೭ನೇ ನಿಯಮದ ಪ್ರಕಾರ ವ್ಯವಹಾರ ನಡೆಸುವಂತೆ ಹೇಳಿದರು. ೨೮ನೇ ದಿನ ಶಾಲೆಯ ಒಳಿಗರು ಡಾಚಾರ್, ಸಂಜೀವಯ್ಯ ಮುಂತಾದವರು ಬಂದು ಮುಷ್ಕರ ನಿಲ್ಲಿಸಿರೆಂದು ಕೇಳಿದರು. ಸುಬ್ರಹ್ಮಣ್ಯಂ ಒಪ್ಪಲಿಲ್ಲ. ೨೯ನೇ ತಾ॥ ಬೆಳಿಗ್ಗೆ ಡಿ. ಎಸ್. ಐ. ಸಂಗಡ ಶಾಲೆಗೆ ಹೋದೆ. ಅಂಗಳದಲ್ಲಿ ಹುಡುಗರಿದ್ದರು. ರಸ್ತೆ ಅಡ್ಡಿಪಡಿಸಲಿಲ್ಲ.

೩೦ನೇ ತಾ॥ ೧೧॥ ಘಂಟೆಗೆ ಕೋಟೆ ಸ್ಕೂಲು ಗಲಾಟೆ ತಿಳಿಯಬಂತು. ಪೋಲೀಸಿನವರೊಂದಿಗೆ ಅಲ್ಲಿಗೆ ಹೋಗಿ ಹುಡುಗರನ್ನು ಚದರಿಸಿದೆ. ಅಲ್ಲಿಂದ ವೆಸ್ಲಿಯನ್‌ಮಿಷನ್, ಲಂಡನ್‌ಮಿಷನ್, ಸೆಂಟ್ರಲ್ ಕಾಲೇಜು, ಸೆಂಟ್ರಲ್‌ಜೈಲ್ ಕಡೆಗೆಲ್ಲ ಹೋಗಿ ಹುಡುಗರನ್ನು ಚೆದರಿಸಿ, ಪೋಲೀಸಿನವರನ್ನು ಇಟ್ಟು ಡಿ. ಸಿ. ಸಂಗಡ ಆಫೀಸಿಗೆ ಬಂದೆ. ನಾನು ಹೋದ ಕಡೆಯಲ್ಲೆಲ್ಲ ಹುಡುಗರನ್ನು ಸುಲಭವಾಗಿ ಚದರಿಸಿದೆ. ದಿವಾನರ ಬರಗಲೆ ಬಳಿ ಮಾತ್ರ ಅದು ಸಾಧ್ಯವಾಗಲಿಲ್ಲ. ಅಲ್ಲಿ ಸು. ೩೦೦—೪೦೦ ಹುಡುಗರಿದ್ದರು. ಡಿ. ಸಿ. ಯವರು ಮಿಲಿಟರಿ ತರಹೇಳಿ ಕಳಿಸಿದ್ದರು. ನಾನು ಕರ್ನಲ್ ಅ್ಯಾಂಡನರನ್ನು ೧ ಘಂಟೆ ಹೊತ್ತಿನಲ್ಲಿ ನೋಡಿ ಸವಾರರನ್ನು ದಿವಾನರ ಮನೆಗೆ ತಂದೆ. ಆ ಹೊತ್ತಿಗೆ ರಿಸರ್ವ್‌ಸವರೂ ಬಂದಿದ್ದರು. ಸವಾರರ

ಸಹಾಯದಿಂದ ಹುಡುಗರನ್ನು ಜದರಿಸಿದೆವು. ಅಲ್ಲೂ ಕಲ್ಲುಗಳು ಬಿದ್ದವು. ಆಗ ಸುಮಾರು ೩—೩೫ ಘಂಟೆ ಇರಬಹುದು. ಶೇಷಾದ್ರಿ ರಸ್ತೆಯಲ್ಲೆಲ್ಲ ಕುದ್ದಕ್ಕೂ ಸವಾರರನ್ನು ನಿಲ್ಲಿಸಿದೆ. ದಾರಿಯ ಜಲ್ಲಿ ಕಲ್ಲನ್ನು ಹುಡುಗರು ಸವಾರರ ಮೇಲೆ ಎಸೆಯುತ್ತಿದ್ದರು. ಅತಾರಾಕಜೇರಿಯ ಒಳಿ ಗಲಾಟೆಯಾಯಿತು. ಅಲ್ಲಿಂದ ಗಾಯಪಟ್ಟವರನ್ನು ಆಸ್ಪತ್ರೆಗೆ ಕಳುಹಿಸಿದ್ದಾಯಿತು. ಯಲಹಂಕದ ಬಾಗಲು ಬಳಿ ಬಲುಗ ಲಾಟೆಯೆಂದು ಅಲ್ಲಿಗೆ ಬಂದೆ ಸವಾರರು ಓಡಾಡುತ್ತಿದ್ದರು. ಆವೇಳೆಗೆ ಮುಖಂಡರ ಮೆರವಣಿಗೆ ಮಾರ್ಕೆಟ್ ಕಡೆ ಹೋಗುತ್ತಿತ . ನಾನು ದೇರೆದಾರಿಯಿಂದ ಅಲ್ಲಿಗೆ ಬಂದೆ. ಆಸ್ಪತ್ರೆ ಬಳಿ ಹೋದರೆಂದು ಕೇಳಿ ಅಲ್ಲಿಗೆ ಹೋದೆ. ರಿಸರ್ವಿನವರ ಸಹಾಯ ಕೇಳಲು ಐ. ಜಿ. ಗೆ ಹುಡುಕಿದೆ. ಅವರು ಸಿಗಲಿಲ್ಲ. ಕಜೇರಿಯಿಂದ ಕೂಗುಬಂತು. ಅಲ್ಲಿಗೆ ಹೋಗಲು ಐ. ಜಿ, ಡಿ. ಸಿ, ಡಿ. ಎಸ್. ಪಿ. ಎಲ್ಲರೂ ಇದ್ದರು. ಮುಂದಿನ ಕೆಲಸ ಯೋಜನೆಮಾಡುತ್ತಿರುವಷ್ಟರಲ್ಲೇ ಗುಂಪು ಗುಂಪಾಗಿ ಜನರೋಡಿಬಂದು "ಗುಂಡು ಹಾರುತ್ತಿದೆ; ಪೂರಾವಾರಿ" ಎಂದು ಜೊಪ್ಪೆ ಹಾಕಿದರು. ನಾನೂ ಡಿ. ಎಸ್. ಪಿ. ಇಬ್ಬರೂ ಮಾರ್ಕೆಟ್‌ವರೆಗೆ ಹೋದೆವ್ರು. ಅಲ್ಲಿ ಜೇರೆಜೇಯಾದೆವ್ರು. ನಾನು ಮುಂದೆಹೋದೆ. ಹಿಂದೂಸ್ಥಾನೀ ಶಾಲೆಯ ಬಳಿ ಶೇಷಾದ್ರಿ ಅಯ್ಯರು ಗಾಯಪಡೆದ ಸಹಾಯದಿಂದ ಬರುತ್ತ ಇದ್ದರು. ನನ್ನನ್ನು ಕಂಡು 'ಅಯ್ಯೋ ಸತ್ತೆ ಸತ್ತೆ' ಎಂದು ಕೂಗಿದರು. ಅವರನ್ನು ಆಸ್ಪತ್ರೆಗೆ ಕಳಿಸಿ ಮುಂದೆ ನಾಲಬಂದವಾಡಿ ಚೌಕಕ್ಕೆ ಹೋದೆ ಅಲ್ಲಿ ಪೋಲಿಸಿನವರು ಯಾರೂ ಇರಲಿಲ್ಲ. ಅಲ್ಲೂ, ರಾಜಾಸಿಂಗನಪೇಟೆಯ ಕಡೆಯಲ್ಲೂ ವಿಪರೀತ ಜನವಿತ್ತು. ಅನೇಕರ ಕೈಲಿ ದೊಣ್ಣೆಗಳಿದ್ದುವು. ಅಲ್ಲೆಲ್ಲ ಹೆಚ್ಚು ಮುಸಲ್ಮಾನರ ಗುಂಪಿತ್ತು.ಡಿ.ಎಸ್.ಪಿ.ಬಂದು ಗುಂಡೋಪಂತರಬೀದಿಕಡೆ ಗುಂಪಿಗೆ ಹೋಗೆಂದರು.ನಾನು ಅತ್ತಕಡೆ ಹೋದೆ. ಅಲ್ಲೆಲ್ಲ ಹೆಚ್ಚು ಹಿಂದುಗಳ ಗುಂಪೇ. ಮಧ್ಯೆ ಜನರಿರಲಿಲ್ಲ. ನಾನು ಹೋಗುವವೇಳೆಗೆ ಗಲಾಟೆಯೆಲ್ಲ ಆಗಿಹೋಗಿತ್ತು. ಹಿಂದುಗಳು 'ದಸ್ತಗಿರಿಮಾಡಿ'ರೆಂದು ಕೂಗುತ್ತಿದ್ದರು. ಅನೇಕರು ದೊಣ್ಣೆಗಳಿಂದ ಹಿಂದುಗಳನ್ನು ಬಡಿಯುತ್ತಿದ್ದರು. ತಕ್ಕ ಪೋಲೀಸು ಬಲವಿಲ್ಲದ್ದರಿಂದ ಯಾರನ್ನೂ ದಸ್ತಗಿರಿ ಮಾಡಲಿಲ್ಲ. ಗುಂಡು ಹಾರಿದ ವಿಚಾರ ನನಗೆ ಗೊತ್ತಿಲ್ಲ. ರಿಸರ್ವಿನವರಿಗೆ ಹುಡಿಕಿದ್ದಾಯಿತು. ಆವೇಳೆ ಸವಾರರು ಬಂದರು. ಸವಾರರು ಬಂದ ಮೇಲೂ ಯಾರನ್ನೂ ದಸ್ತಗಿರಿ ಮಾಡಲಿಲ್ಲ. ಐ. ಜಿ. ಯನ್ನು ನಾನು ನೋಡಲಾಗಲಿಲ್ಲ. ಡಿ. ಸಿ. ಯನ್ನು ಕಂಡಿದ್ದೆ. ಅವನೇನೂ ಹೇಳಲಿಲ್ಲ. ಖಾನರ ಮನೆಗೆ ಹೋದೆ. ಅವರ ಆಫೀಸಿನಲ್ಲಿ ಪೆಟ್ಟುತಿಂದ ಚಿನ್ನಸಾಮಿಯೆಂಬ ಡ್ರೈವರನ್ನು ಕಂಡೆ. ಇನ್ನು ಕೆಲವರು ಮುಸಲ್ಮಾನರಿದ್ದರು. ಖಾನರ ಕಾಂಪೌಂಡಿನಲ್ಲೂ ಕೆಲವರು ಕಾತಿಗಳನ್ನು ಹಿಡಿದಿದ್ದರು. ಮಳೀದಿ ಕಡೆ ಕೊಂಜಗಶಾಟೆಯಾಯಿತು-ಅಲ್ಲೊಬ್ಬ ಮುಸಲ್ಮಾನನಿಗೆ ಪೆಟ್ಟು ಬಿದ್ದಿತ್ತು. ಸವಾರರನ್ನು ಕೃಷ್ಣೇಅರಸಿನವರು ನಡೆಸುತ್ತಿದ್ದರು. ಆರಾತ್ರಿ ಗಣೇಶನನ್ನು ನೋಡಲಿಲ್ಲ. ಮಾರನೆಯ ದಿನ ನೋಡಿದೆ. ಅರಳೇಪೇಟೆಯಲ್ಲಿ ೧೫ ಘಂಟೆ ಸುಮಾರಿಗೆ ಗಲಾಟೆಯಾಯಿತು ಅಲ್ಲಿಗೆ ಹೋದೆ. ದಂಡಿನ ಮುಸಲ್ಮಾನರು ಹಲವರಿದ್ದರು. ಅವರನ್ನು ಹೊರಡಿಸಿದೆ. ಆಮೇಲೆ ಅಲಸೂರು ಪೂರ್ಗವಾಗಿ ದಂಡಿನ ಮುಸಲ್ಮಾನರು ಆಯುಧಪಾಣಿಗಳಾಗಿ ಬರುತ್ತಿರುವಕೆಂದು ಕೇಳಿ ಅಲ್ಲಿಗೆ ಬಂದಿ ಅವರಿಗೆ' ದಿವಾನರಿಗೇಟುಬಿದ್ದಿಲ್ಲ ಮಾರ್ಕೆಟ್ ಗೋಲಿಗೇನೂ ಅಪಾಯವಾಗಿಲ್ಲ"ವೆಂದು ಹೇಳಿ ಹಿಂದಕ್ಕೆ ಕಳಿಸಿದ್ದಾಯಿತು. ಆಮೇಲೇನೂ ಗಲಾಟೆಯಿಲ್ಲ. ಮಾರನೆಯ ದಿಕ್ಕಿಗ್ಗೆ ಮಾರ್ಕೆಟ್ ಬಳಿ, ಡಿ. ಸಿ. ಮತ್ತು ಇನ್ನೇ ಸಚಿವರು ಬಂದರು. ನಾನು "ಪೊಲಿಸೇವರದಿ" ಕಳಿಸಿ ಹಿಂದೂಗಳ ಮೇಲೊಂದು ಮುಸಲ್ಮಾನರ ಮೇಲೊಂದು ವ್ಯವಹಾರಗಳನ್ನು ಹಾಕಿದೆ.

ಆಮೇಲೆ ಸಮಿತಿಯ ಸದಸ್ಯರೊಬ್ಬೊಬ್ಬರಾಗಿ ಅಯ್ಯಂಗಾರ್ಯರನ್ನು ಆ ದಿನವೆಲ್ಲ ಪಾಟೀಸವಾಲು ಮಾಡಿಬಿಟ್ಟರು. ವಿಪುಲವಾಗಿ ಅದನ್ನೆಲ್ಲ ಬರೆಯಲು ಸಾಧ್ಯವಿಲ್ಲ ಆದರೂ ಮುಖ್ಯ ಪ್ರಶ್ನೋತ್ತರಗಳನ್ನಿಲ್ಲಿ ಕೊಟ್ಟಿದೆ.

ಅಧ್ಯಕ್ಷರು—ನಗರಕ್ಕೆಲ್ಲ ನೀವೇ ಜಬಾಬುದಾರರು. ಸಕಾಲದಲ್ಲಿ ತುಂಟರನ್ನೇಕೆ ದಸ್ತಗಿರಿ ಮಾಡಲಿಲ್ಲ? ಗುಂಡು ಹಾರಿತೆಂದು ತಿಳಿಯಬಂದ ಮನೆಗಳನ್ನೇಕೆ ಝಡ್ತಿ ಮಾಡಲಿಲ್ಲ? ಶೇಷಾದ್ರಿಗೆ ಪೆಟ್ಟು ಬಿದ್ದಮೇಲೆ ನಿಮ್ಮ ಪೋಲೀಸು ವ್ಯವಸ್ಥೆಯೆಲ್ಲ ಮುರಿದು ಬಿತ್ತೋ

ಉ—ನಗರಕ್ಕೆಲ್ಲ ನಾನೇ ಜಬಾಬುದಾರ ಆಗಾಗ ಡಿ. ಎಸ್. ಪಿ. ಯಿಂದ ಸಲಹೆ ಸಹಾಯ ಪಡೆಯುತ್ತೇನೆ. ಮೇಲಧಿಕಾರಿಗಳಿಂದಲೂ ಪಡೆಯುತ್ತೇನೆ. ಆಗ ದಸ್ತಗಿರಿಮಾಡಲು ಸಾಧ್ಯವಿರಲಿಲ್ಲ. ಪೋಲೀಸ್ ಬಲ ಬಹಳ ಕಡಿಮೆ. ಶೇಷಾದ್ರಿಗೆ ಏಟುಬಿದ್ದಮೇಲೆ ನನ್ನ ವ್ಯವಸ್ಥೆಯೆಲ್ಲ ಮುರಿಯಿತು. ಹಿಂದುಗಳ ಸಹಾಯ ಪಡೆದು ದಸ್ತಗಿರಿ ಮಾಡಲು ಆಗಲಿಲ್ಲ

ರಾಮರಾವ್—ನಿಮ್ಮ ಪೋಲೀಸ್ ಬಲವೇನು ?

ಉ—ನಗರದಲ್ಲೆಲ್ಲ ೮ ಸ್ಟೇಷನ್‌ಗಳಿವೆ. ಅಲ್ಲಿ ಒಟ್ಟು ೨೩ ಜನ ಸಾರ್ಜಂಟುಗಳೂ ೩೧೨ ಕಾನಸ್ಟೇ

ಪಿಲ್ಲುಗಳಿ[illegible]

ರಾಮ—[illegible]

ಉ—ಸೈನ್ಯ [illegible]

ರಾಮ—ಸುದ್ದಿಪತ್ರಿಕೆ [illegible]

ಉ—[illegible]

ರಾಮ—ನಾನಸ್ಮ—[illegible]

ಉಪಾಕಾಗಿಲ್ಲ. [illegible]

ಇವ್ವಾಕೆ. [illegible]

ಅವರ [illegible]

ಸಮಾಜಸಮಾಜ [illegible]

ಅಸ್ಪತ್ರೆಕ್ಕವಯಿತ್ತ

ರಾಮ—[illegible]

ಸಮಸ್ಥೀಗಾದವಿ [illegible]

ಉ—ಸೈನ್ಯ [illegible]

ರಾಮ—ಸುದ್ದಿಪತ್ರಿಕೆ [illegible]

ಉ—[illegible]

ನಾನಸ್ಮ—[illegible]

ಪ್ರವಾಸಕ್ಕಾರ. [illegible]

ಅಪೇಕ್ಷ [illegible]

ಗರು ರಸ್ತೆ ಅಡ್ಡಪಡಿಸಿದರು. [illegible]

ಹಾರ ನಡೆಸಲಿಲ್ಲ. ನಡೆಸಬೇಡಿರೆಂದು [illegible]

ಹೇಳಿದ್ದರೋ. ನಿಮ್ಮ ಕೆಲಸವಲ್ಲವೋ ಅದು.

ಉ—ಹುಡುಗರ ಮೇಲೇಕೆ ನಡೆಸಬೇಕೆಂದು ಡಿ. ಸಿ. ಯವರು ಹೇಳಿದ್ದರು. ಹುಡುಗರೊಂದಿಗೆ ನನ್ನ ಸಹಾನುಭೂತಿಯಿಲ್ಲ. ನನ್ನ ಕರ್ತವ್ಯ ಸಾಯೋಚಿತವಾಗಿ ಮಾಡಿದೆ.

ಮಾ ಪೊದಲಿಯಾರ್—ಏನುಮಾಡಿದಿರಿ? ಗಾಯಪಟ್ಟವರು ಆಸ್ಪತ್ರೆಯ ಒಳ ಜೊಪ್ಪೆಹಾಕುತ್ತಿದ್ದರು. ಕೇಳಿದನರಾರು? ಹುಡುಗರನ್ನು ಖಾನರ ಮನೆಗೆ ಎಳೆದುಕೊಂಡು ಹೋಗುತ್ತಿದ್ದರೆಂದೂ, ಗುಂಡು

(೧೩ನೇ ಪುಟವನ್ನು ನೋಡಿ)

ಬೇಕಾಗಿದೆ

"ಶ್ರೀವೈಷ್ಣವರಾಗಿಯೂ, ಪತ್ನಿವಿಯೋಗಸ್ಥರಾಗಿಯೂ, ಬೊಂಬಾಯಿನಲ್ಲಿ ಉದ್ಯೋಗದಲ್ಲಿರುವ ಯುವಕರೊಬ್ಬರಿಗೆ ಗೃಹಕೃತ್ಯವನ್ನು ನೋಡಿಕೊಳ್ಳಲು ಶ್ರೀವೈಷ್ಣವಜಾತಿಯ ಮಧ್ಯವಯಸ್ಕಾಯದ ಗುಣವತಿಯಾದ ಕೂರೂಪಿಯಲ್ಲದ ಮತ್ತು ಮಕ್ಕಳಿಲ್ಲದ ಒಬ್ಬ ಯುವತಿಯು ಬೇಕಾಗಿರುತ್ತೆ. ಇಷ್ಟವುಳ್ಳವರು ಈ ಕೆಳಗಿನ ವಿಳಾಸಕ್ಕೆ ಬರೆಯಿರಿ."

ವೈ ಸೂರಿಯರ್,
C/o "ವಿಶ್ವಕರ್ಣಾಟಕ," ಬೆಂಗಳೂರು.

ಇದಕ್ಕಿಂತ ಸುಸಮಯವೆ ?

ಬೆಲೆಯುಳ್ಳ ೧೦ ಬಹುಮಾನಗಳು

ಉಚಿತವಾಗಿ ಕೊಡಲಾಗುತ್ತಿದೆ

ಪೇಟೆಂಟ್ ಲಿವರ್ ರೇಡಿಯಂ

ರಿಸ್ಟ್ ವಾಚಿನೊಂದಿಗೆ

ಪುಕಟ್ಟೆ! ಕೊಡಲಾಗುತ್ತೆ ಪುಕಟ್ಟೆ!!

ಪೇಟೆಂಟ್ ಲಿವರ್ ರೇಡಿಯಂ ಕೈಗಡಿಯಾರವನ್ನು ೨೦ ಬಹುಮಾನವಸ್ತುಗಳೊಂದಿಗೆ ಕೊಡುತ್ತೇವೆ.

ಎರಡು ತಿಂಗಳುಮಾತ್ರ

೨೦ ವಸ್ತುಗಳು:—ಜೇಬುದೀಪ, ಚಾಕು, ಫೌಂಟನ್ ಪೆನ್, ಮಸೀಬುಡ್ಡಿ, ಆಟೋಮ್ಯಾಟಿಕ್ ಪೆನ್ಸಿಲ್, ಪೆನ್ಸಿಲ್ ಜೀವೋದು, ಇಮಿಟೇಷನ್ ಕಂಪಿನ ಉಂಗುರ, ಹತ್ತಕಡಕಗಳು. ರೋಲ್ಡ್‌ಗೋಲ್ಡ್ ಸೇಫ್ಟಿಪಿನ್, ಕನ್ನಡಕ, ತೊಗಲುಪಟ್ಟಿ, ರೋಲ್ಡ್‌ಗೋಲ್ಡ್ ಲಾಕೆಟ್, ಸಿಗರೇಟ್ ಹಚ್ಚೋದು, ಪರ್ಸ್‌ಒಟನ್‌ಸೆಟ್ಟು, ಅಂಗಿಬಟನ್‌ಸೆಟ್, ಕೈವಸ್ತ್ರ, ಸೆಂಟ್‌ಪಾಟಲ್, ಟಮ್ಲರ್, ಇಸ್ಪೇಟುಪ್ಯಾಕು, ಕತ್ತರಿ, ೧೦ ವರುಷ ಗ್ಯಾರೆಂಟಿ.

ಕಾಲ ನಿಮಗೋಸ್ಕರ ಕಾಯುತ್ತದೆಯೇ? ಇಲ್ಲ! ಹಾಗಾದರೆ ಈ ದಿನವೇ ಬರೆದುಹಾಕಿ.

ಬೆಲೆ ರೂ ೧೦. ವಿ. ಪಿ. ವೆಚ್ಚ ರೂ ೧.

ದಿ ಮಾಸ್ಟರ್ ವಾಚ್ ಕಂಪೆನಿ,
ಭೂಲೇಶ್ವರ, (೩೪) ಮುಂಬಯಿ.

ವ್ರಜಕಿಶೋರಬಾಬುಗಳು ಮತ್ತು ರಾಜೇಂದ್ರಬಾಬುಗಳಂತಹ ಜೋಡಿಯು ದೊರಕುವುದೇ ಇಲ್ಲವೆನ್ನಬಹುದು. ಅವರು ನನ್ನಲ್ಲಿ ಅತಿಶಯ ಪ್ರೇಮವಿಟ್ಟಿದುದರಿಂದ ಅವರ ನೆರವಿಲ್ಲದೆ ನಾನು ಒಂದು ಹೆಜ್ಜೆಯನ್ನೂ ಮುಂದಿಡಲಾಗುತ್ತಿರಲಿಲ್ಲ. ಅವರ ಶಿಷ್ಯರು ಅಥವಾ ಜೊತೆಗಾರರಾದ ಶಂಭು ಬಾಬು, ಅನುಗ್ರಹಬಾಬು, ಧರಣೀಬಾಬು, ರಾಮನವಮೀಬಾಬುಗಳೇ ಮುಂತಾದ ವಕೀಲರು ಸದಾ ನಮ್ಮೊಡನೆಯೇ ಇರುತ್ತಿದ್ದರು. ವಿಂಧ್ಯಾಬಾಬುಗಳೂ ಮತ್ತು ಜನಕಧಾರೀ ಬಾಬುಗಳೂ ಆಗಾಗ ಬಂದು ನಮಗೆ ಸಹಾಯಮಾಡುತ್ತಿದ್ದರು. ಇವರೆಲ್ಲರೂ ವಿಹಾರಿಗಳೇ. ರೈತರ ಹೇಳಿಕೆಗಳನ್ನು ಬರೆದುಕೊಳ್ಳುವುದೇ ಇವರ ಮುಖ್ಯ ಕಾರ್ಯವಾಗಿದ್ದಿತು. ಅಧ್ಯಾಪಕ ಕೃಪಲಾನಿಯವರು ನಮ್ಮೊಡನೆ ಸೇರದಿರಲಾದೀತೆ? ಅವರು ಸಿಂಧಿಗಳಾಗಿದ್ದರೂ ಆಜನ್ಮ ವಿಹಾರಿಗಿಂತ ಹೆಚ್ಚಿನ ವಿಹಾರಿಗಳಾಗಿದ್ದರು. ತಾವು ಯಾವ ಪ್ರಾಂತಕ್ಕೇ ಹೋಗಿ ಸೆರಲಿ ಅದನ್ನು ತಮ್ಮ ನಾಡಾಗಿ ಮಾಡಿಕೊಂಡು ಅಲ್ಲಿನ ಜನರೊಡನೆ ಸಂಮಿಳಿತರಾಗಿ ಹೋಗುವ ಶಕ್ತಿಯುಳ್ಳ ಅತಿಸ್ವಲ್ಪಮಂದಿಯನ್ನು ಮಾತ್ರ ನಾನು ನೋಡಿದ್ದೇನೆ. ಇಂತಹರಲ್ಲಿ ಕೃಪಾಲನಿಯನೊಬ್ಬರು. ಅವರು ಬೇರೆ ಪ್ರಾಂತಕ್ಕೆ ಸೇರಿದವರೆಂದು ಯಾರಿಗೆ ತೋರುವುದು ಕೂಡ ಅಶಕ್ಯವಾಗುವಂತೆ ಮಾಡಿದರವರು. ಅವರೇ ನನ್ನ ಪ್ರಧಾನ ದ್ವಾರಪಾಲಕರಾಗಿದ್ದರು. ಆ ಸಮಯಕ್ಕೆ ಮಾತ್ರ ಅವರು ನನ್ನ ದರ್ಶನಾಕಾಂಕ್ಷಿಗಳಾಗಿ ಬರುವ ಮಂದಿಯಿಂದ ನನ್ನನ್ನು ಕಾಯುವುದನ್ನೇ ತಮ್ಮ ಪರಮ ಪುರುಷಾರ್ಥವನ್ನಾಗಿ ಮಾಡಿಕೊಂಡರು. ಈಗ ತಮ್ಮ ವಿನೋದವಾಗ್ಬಾಣಗಳನ್ನು ಪ್ರಯೋಗಿಸುವುದು ಇನ್ನೊಂದು ಸಲ ಅಹಿಂಸಾತ್ಮಕವಾದ ಬೆದರಿಕೆಗಳಿಂದ ಬೆದರಿಸುವುದು ಹೀಗೆ ಮಾಡಿ ಅವರು ಜನರನ್ನು ತಡೆಯುತ್ತಿದ್ದರು. ಸಂಜೆಯ ವೊಬ್ಬು ಮೂಡುತ್ತಲೇ ಅವರು ತಮ್ಮ ಶಿಕ್ಷಕವೃತ್ತಿಯನ್ನು ವಹಿಸಿ ತಮ್ಮೊಡನೆ ಇರುವವರನ್ನು ಐತಿಹಾಸಿಕ ಪಾಠಗಳಿಂದಲೂ ಟೀಕೆಗಳಿಂದಲೂ ಆನಂದಗೊಳಿಸಿ ಅಂಜಿಕೆಯ ಸ್ವಭಾದವರಾರಾದರೂ ಅಲ್ಲಿಗೆ ಬಂದರೆ ಅವರಲ್ಲಿ ಶೌರ್ಯವನ್ನು ಹುಟ್ಟಿಸುತ್ತಿದ್ದರು.

ಮೌಲಾನಾ ಮಜಹರ್-ಉಲ್ ಹಕ್‌ರವರು ನನಗೆ ಅಗತ್ಯ ತೋರಿದಾಗ ಹೇಳಿದರೆ ಬಂದು ಸಹಾಯ ಮಾಡುವ ಜನರ ಪಟ್ಟಿಯಲ್ಲಿ ತಮ್ಮ ಹೆಸರನ್ನು ಕೊಟ್ಟಿದ್ದರು. ಅವರು ತಿಂಗಳಿಗೆ ಒಂದೆರಡು ಬಾರಿ ತಪ್ಪದೆ ಬಂದು ನಮ್ಮನ್ನು ನೋಡಿಕೊಂಡು ಹೋಗುತ್ತಿದ್ದರು. ಆಗ ಅವರು ತಮ್ಮ ಜೀವನವನ್ನು ವೈಭವದಿಂದಲೂ ಠೀವಿಯಿಂದಲೂ ನಡೆಸುತ್ತಿದ್ದರು. ಅದಕ್ಕೂ ಇಂದಿನ ಅವರ ಸರಳಜೀವನಕ್ಕೂ ಭೂಮ್ಯಾಕಾಶಗಳಿರುವಷ್ಟು ಅಂತರವುಂಟು. ಅವರ ಸೊಗಸುಗಾರಿಕೆಯನ್ನು ನೋಡಿದರೆ ಹೊರಗಿನವರಿಗೆ ಬೇರೆ ವಿಧವಾಗಿ ತೋರುತ್ತಿದ್ದರೂ ಅವರು ನಮ್ಮೊಡನೆ ಸೇರುತ್ತಿದ್ದುದರಿಂದ ಅವರೂ ನಮ್ಮಲ್ಲಿ ಒಬ್ಬರೆಂದು ತೋರುತ್ತಿದ್ದಿತು.

ವಿಹಾರದಲ್ಲಿನ ನನ್ನ ಅನುಭವವು ಹೆಚ್ಚುತ್ತಾ ಬಂದಂತೆಲ್ಲಾ ಅಲ್ಲಿಯ ಹಳ್ಳಿಗಳಲ್ಲಿ ಯೋಗ್ಯಶಿಕ್ಷಣ ವ್ಯವಸ್ಥೆಯಾಗದೆ ಚಿರಕಾಲ ನಿಲ್ಲುವ ಕೆಲಸವು ಸಾಧ್ಯವಲ್ಲವೆಂದು ನಾನು ಮನಗಂಡೆನು. ರೈತರ ಅಜ್ಞಾನವು ಕರುಣಾಜನಕವಾಗಿದ್ದಿತು. ಅವರು ತಮ್ಮ ಮಕ್ಕಳನ್ನು ಆಲೆದಾಡುವುದಕ್ಕೆ ಬಿಡುತ್ತಿದ್ದರು; ಇಲ್ಲದಿದ್ದರೆ ಅರ್ಧಾಣಿಗಾಗಿ ಬೆಳಗಿನಿಂದ ಸಂಜೆಯವರೆಗೂ ನೀಲಿಯ ತೋಟಗಳಲ್ಲಿ ಹೆಣಗುವಂತೆ ಮಾಡುತ್ತಿದ್ದರು. ಆಕಾಲದಲ್ಲಿ ಹೆಚ್ಚೆಂದರೆ ದಿನವೊಂದರ ಕೂಲಿಯು ಗಂಡಸಿಗೆ ಎರಡೂವರೆಯಾಣೆ, ಹೆಂಗಸಿಗೆ ಒಂದೂವರೆಯಾಣೆ, ಹುಡುಗನಿಗೆ ಒಂಭತ್ತುಕಾಸು ಈರೀತಿಯಿದ್ದಿತು. ದಿನವೊಂದಕ್ಕೆ ನಾಲ್ಕಾಣೆಯನ್ನು ಸಂಪಾದಿಸುವವನು ಅತ್ಯಂತ ಅದೃಷ್ಟಶಾಲಿಯೆಂಬ ಎಣಿಕೆಯಿದ್ದಿತು.

ನನ್ನ ಜೊತೆಯವರ ಸಲಹೆಯನ್ನು ತೆಗೆದುಕೊಂಡು ನಾನು ಆರು ಹಳ್ಳಿಗಳಲ್ಲಿ ಪ್ರಾಥಮಿಕ ಶಾಲೆಗಳನ್ನು ತೆರೆಯಬೇಕೆಂದು ನಿಶ್ಚಯಿಸಿದೆನು. ಗ್ರಾಮಸ್ಥರು ಶಿಕ್ಷಕರಿಗೆ ಆಹಾರವನ್ನೂ ವಾಸಸ್ಥಾನವನ್ನೂ ಒದಗಿಸಿಕೊಡಬೇಕೆಂದೂ ಇತರ ವೆಚ್ಚಗಳನ್ನು ನಾವು ಹೊಂದಿಸಬೇಕೆಂದೂ ಗ್ರಾಮಸ್ಥರೊಡನೆ ನಮ್ಮ ಷರತ್ತಾಗಿದ್ದಿತು. ಹಳ್ಳಿಯವರ ಕೈಯಲ್ಲಿ ಹಣವಿರುತ್ತಲೇ ಇರಲಿಲ್ಲವೆನ್ನಬಹುದು. ಆದರೆ ಆಹಾರಸಾಮಗ್ರಿಗಳನ್ನೊದಗಿಸುವುದು ಅವರಿಗೆ ಸಾಧ್ಯವಿದ್ದಿತು. ವಸ್ತುತಃ ಅವರು ಕಾಳು ಮುಂತಾದ ಪದಾರ್ಥಗಳನ್ನು ಒದಗಿಸಲು ತಾವು ಸಿದ್ಧರಾಗಿದ್ದೇವೆಂದು ಆಗಲೇ ತಿಳಿಸಿದ್ದರು.

ಶಿಕ್ಷಕರನ್ನು ತರುವುದೆಲ್ಲಿಂದ? ಎಂಬುದು ಒಂದು ಸಮಸ್ಯೆಯಾಗಿದ್ದಿತು. ಅಲ್ಪವೇತನಕ್ಕಾಗಿ ಅಥವಾ ಸಂಬಳವೇ ಇಲ್ಲದೆ ಕೆಲಸಮಾಡುವ ಶಿಕ್ಷಕರು ಅಲ್ಲಿಯೇ ಸಿಕ್ಕುವುದು ಕಷ್ಟವಾಗಿದ್ದಿತು. ಸಾಮಾನ್ಯ ಶಿಕ್ಷಕರು ಯಾವಾಗಲೂ ನನ್ನ ಆಶಯಕ್ಕೆ ವಾಗಿರಲಿಲ್ಲ. ಅದರ ಸಾಹಿತ್ಯಪ್ರವೀಣತೆಗಿಂತ ಚಾರಿತ್ರಸಂಪನ್ನತೆಯು ಬಹು ಮುಖ್ಯವಾಗಿದ್ದಿತು.

ಆದುದರಿಂದ ನಾನು ಈ ಶಿಕ್ಷಣಕಾರ್ಯಕ್ಕಾಗಿ ಸ್ವಯಂಸೇವಕರು ಬೇಕೆಂದು ಸಾರ್ವಜನಿಕವಿನ್ನಹವೊಂದನ್ನು ಪ್ರಕಟಿಸಿದೆನು. ಈ ವಿನ್ನಹವನ್ನು ಮನ್ನಿಸಿ ಒಡನೆಯೇ ಉತ್ತರಗಳು ಬಂದವು. ಶ್ರೀ. ಗಂಗಾಧರರಾವ್ ದೇಶಪಾಂಡೆಯವರು ಬಾಬಾಸಾಹೇಬ್ ಸೋಮಣರನ್ನೂ ಪುಂಡರೀಕರನ್ನೂ ಕಳುಹಿಸಿಕೊಟ್ಟರು. ಮುಂಬಯಿಯಿಂದ ಶ್ರೀಮತಿ ಅವಂತಿಕಾಬಾಯೀ ಗೋಖಲೆಯವರೂ ಪೂನಾದಿಂದ ಶ್ರೀಮತಿ ಆನಂದೀಬಾಯೀ ವೈಶಂಪಾಯನರೂ ಬಂದರು. ಘೋಟೀಲಾಲ್, ಸುರೇಂದ್ರನಾಥ್ ಮತ್ತು ನನ್ನ ಮಗನಾದ ದೇವದಾಸ್ ಇವರನ್ನು ಕಳುಹಿಸಿಕೊಡಲು ಆಶ್ರಮಕ್ಕೆ ಕಾಗದ ಬರೆದೆನು. ಇದೇ ಸಮಯದಲ್ಲಿ ಮಹಾದೇವ ದೇಶಾಯಿ ಮತ್ತು ನರಹರಿ ಪರೀಖ್‌ರ್ ತಮ್ಮ ಹೆಂಡತಿಯರೊಡನೆ ಬಂದು ನಮ್ಮೊಡನೆ ಕಲೆತರು. ಕಸ್ತೂರಿಬಾಯಿಯನ್ನು ಈ ಕೆಲಸಕ್ಕಾಗಿ ಕರೆದುದಾಯಿತು. ಇವರೆಲ್ಲರೂ ಸೇರಿ ಪ್ರಬಲಸೈನ್ಯವೇ ಆಯಿತೆಂದು ಹೇಳಬೇಕು. ಶ್ರೀ. ಅವಂತಿಕಾಬಾಯೀ ಮತ್ತು ಶ್ರೀ. ಆನಂದೀಬಾಯೀ ಇವರು ಸುಶಿಕ್ಷಿತರಾಗಿದ್ದರು. ಆದರೆ ಶ್ರೀ. ದುರ್ಗಾದೇಶಾಯಿ ಮತ್ತು ಶ್ರೀ. ಮಣಿಬೆನ್ ಪರೀಖ್ ಇವರಿಗೆ ಗುಜರಾತಿ ಅಕ್ಷರಜ್ಞಾನವು ಮಾತ್ರ ಇದ್ದಿತು. ಕಸ್ತೂರಿಬಾಯಿಗೆ ಅದೂ ಇರಲಿಲ್ಲ. ಈ ಮಹಿಳೆಯರು ಹುಡುಗರಿಗೆ ಹಿಂದೀಭಾಷೆಯಲ್ಲಿ ಪಾಠಕಲಿಸುವುದೆಂತು?

ಅವರು ಹುಡುಗರಿಗೆ ವ್ಯಾಕರಣವನ್ನೂ ಓದುಬರಹವನ್ನೂ ಲೆಕ್ಕವನ್ನೂ ಕಲಿಸುವುದಕ್ಕಿಂತ ಹೆಚ್ಚಾಗಿ ಸ್ವಚ್ಛತೆಯನ್ನೂ ಒಳ್ಳೆಯ ನಡತೆಯನ್ನೂ ಹೇಳಿಕೊಡುವರೆಂಬುದೇ ನಮ್ಮ ನಿರೀಕ್ಷಣೆಯೆಂದು ಅವರಿಗೆ ವಿವರಿಸಿದೆನು. ಇದಲ್ಲದೆ ಅಕ್ಷರಜ್ಞಾನದ ವಿಷಯದಲ್ಲಿ ಕೂಡ ಗುಜರಾತೀ ಹಿಂದೀ ಮತ್ತು ಮರಾಠೀ ಭಾಷೆಗಳ ಮಧ್ಯೆ ಅವರು ತಿಳಿದುಕೊಂಡಿದ್ದಷ್ಟು ಅಂತರವಿಲ್ಲವೆಂದೂ ಪ್ರಾಥಮಿಕ ವರ್ಗಗಳಲ್ಲಿಯಂತು ಅಕ್ಷರಮಾಲೆಯನ್ನೂ ಲೆಕ್ಕವನ್ನೂ ಕಲಿಸಿಕೊಡುವುದು ಕಷ್ಟವಾದ ವಿಷಯದಲ್ಲವೆಂದೂ ವಿಶದಪಡಿಸಿದೆನು. ಇದರ ಪರಿಣಾಮವಾಗಿ ಈ ಮಹಿಳೆಯರು ನಡೆಸುತ್ತಿದ್ದ ವರ್ಗವು ಅತ್ಯುತ್ಕೃಷ್ಟವಾಗಿ ನಡೆಯುತ್ತಿದ್ದುವು. ಅವರಿಗೆ ತಮ್ಮ ಅನುಭವದಿಂದ ಆತ್ಮವಿಶ್ವಾಸವೂ ಕಾರ್ಯದಲ್ಲಿ ಉತ್ಸಾಹವೂ ಹುಟ್ಟಿದುವು. ಶ್ರೀ. ಅವಂತಿಕಾಬಾಯಿಯವರ ಶಾಲೆಯು ಆದರ್ಶ ವಿದ್ಯಾನಿಲಯವಾಯಿತು. ಅವರು ತಮ್ಮ ಶಾಲೆಗೆ ತಮ್ಮ ಆತ್ಮವನ್ನೇ ಅರ್ಪಿಸಿದರು. ತಮ್ಮ ಅದ್ವಿತೀಯ ಗುಣಗಳನ್ನೆಲ್ಲಾ ಈ ಕಾರ್ಯದಲ್ಲಿ ಉಪಯೋಗಿಸಿದರು. ಈ ಮಹಿಳೆಯರ ಮೂಲಕ ಗ್ರಾಮದ ಹೆಂಗಸರ ಜೀವನವನ್ನು ಮಾರ್ಪಡಿಸುವುದು ಕೂಡ ಸ್ವಲ್ಪಮಟ್ಟಿಗೆ ಸಾಧ್ಯವಾಯಿತು.

ಆದರೆ ಪ್ರಾಥಮಿಕ ವಿದ್ಯಾಭ್ಯಾಸದ ಅನುಕೂಲವನ್ನೊದಗಿಸಿ ಅದಕ್ಕೇ ನಿಲ್ಲಿಸಲು ನನಗೆ ಇಷ್ಟವಿರಲಿಲ್ಲ. ಹಳ್ಳಿಗಳು ಅಶುಚಿಯಾಗಿದ್ದುವು; ಹಾದಿಗಳು ಹೊಲಸಿನಿಂದ ತುಂಬಿದ್ದುವು. ಬಾವಿಗಳ ಸುತ್ತಲೂ ಕೆಸರಿದ್ದು ನಾರುತ್ತಿದ್ದಿತು. ಮನೆಯ ಅಂಗಳಗಳು ಸಹಿಸಲಾರದಷ್ಟು ಕೊಳಕಾಗಿದ್ದುವು. ಶುಚಿಯಾಗಿರುವುದರಲ್ಲಿ ದೊಡ್ಡವರಿಗೆ ಶಿಕ್ಷಣವು ಅಗತ್ಯವಾಗಿದ್ದಿತು. ಅವರೆಲ್ಲರೂ ವಿವಿಧವಾದ ಚರ್ಮದ ಜಾಡ್ಯಗಳಿಂದ (ಕಜ್ಜಿ, ತುರಿ ಮುಂತಾದುವು) ತಪ್ತರಾಗಿದ್ದರು. ಆದುದರಿಂದ ಸಾಧ್ಯವಾದಷ್ಟು ಗ್ರಾಮನೈರ್ಮಲ್ಯದ ಕೆಲಸವನ್ನು ಮಾಡಬೇಕೆಂದೂ ಅವರ ಜೀವನದ ಪ್ರತಿಯೊಂದು ಭಾಗವನ್ನೂ ಪ್ರವೇಶಿಸಬೇಕೆಂದೂ ನಿರ್ಧಾರವಾಯಿತು.

ಈ ಕಾರ್ಯಕ್ಕೆ ವೈದ್ಯರ (ಡಾಕ್ಟರರ) ಸಹಾಯವು ಅವಶ್ಯಕವಾಗಿದ್ದಿತು. ದಿವಂ. ಡಾ. ದೇವರನ್ನು ನಮ್ಮಲ್ಲಿಗೆ ಕಳುಹಿಸಿಕೊಡಬೇಕೆಂದು ನಾನು ಭಾರತ ಸೇವಾಸಂಘದವರನ್ನು ಪ್ರಾರ್ಥಿಸಿದೆನು. ನಾವು ಅಪ್ಪಮಿತ್ರರಾಗಿದ್ದೆವು. ಅವರು ನಮ್ಮ ಬಳಿಗೆ ಬಂದು ಆರು ತಿಂಗಳು ಕೆಲಸ ಮಾಡಲು ಒಡನೆಯೇ ಒಪ್ಪಿದರು. ಶಿಕ್ಷಕರೆಲ್ಲಾ—ಹೆಂಗಸರೂ ಗಂಡಸರೂ ಅವರ ಕೈಕೆಳಗೆ ಕೆಲಸಮಾಡಬೇಕಾಗಿದ್ದಿತು.

ಜನಿವಾನ್ವಾರ್‌ರ ಮೇಲಿನ ಆರೋಪಣೆಗಳನ್ನಾಗಲಿ ರಾಜಕೀಯ ವಿಚಾರಗಳನ್ನಾಗಲಿ ಹಚ್ಚಿಕೊಂಡು ಹೊಗಕೂಡದೆಂದು ಅವರೆಲ್ಲರಿಗೂ ಕಟ್ಟಪ್ಪಣೆಯಾಗಿದ್ದಿತು. ಏನಾದರೂ ತೊಂದರೆಗಳನ್ನು ಹೇಳಬೇಕೆಂದಿರುವವರನ್ನು ನನ್ನ ಬಳಿಗೆ ಕಳುಹಿಸಬೇಕಾಗಿದ್ದಿತು. ಯಾರೂ ತಮ್ಮ ನಿಯತ ಮಾರ್ಗವನ್ನು ಬಿಟ್ಟು ಕದಲಕೂಡದಾಗಿದ್ದಿತು. ನಮ್ಮ ಮಿತ್ರರೆಲ್ಲಾ ಈ ನಿಯಮಗಳನ್ನು ಚಾಚೂ ತಪ್ಪದೆ ನಡೆಸಿದರು. ನಿಯಮವನ್ನು ಮೀರಿದ ಒಂದು ಸಂದರ್ಭವೂ ನನ್ನ ನೆನಪಿಗೆ ಬರುವುದಿಲ್ಲ.

ದೇವಾಲಯಗಳಲ್ಲಿ ನೀಚಕೃತ್ಯಗಳು

ಬಸೆಟ್ಟಿಹಳ್ಳಿ ಪಾರ್ವತೀದೇವಿಗೆ ಬಲಗೈ ಮುರಿಯಿತು

ಲಕ್ಷ್ಮಣಲಿಂಗ, ಚೌಡೇಶ್ವರಿ, ಬಸವಣ್ಣಗಳು ತಲೆಕೆಳಗಾಗಿವೆ

ಹೆಸರಘಟ್ಟದ ಈಡಗವು ಭಂಗವಾಗಿದೆ

ಕೋಲಾರಜಿಲ್ಲೆಯಲ್ಲಿ ! ದೇವಾಲಯಗಳ ಕಳ್ಳರ ಗುಂಪುಗಳು

ಪ್ರಕಟನ ಶಾಖಾಧಿಕಾರಿಗಳ ಉತ್ತರ

ಪಿ. ಒ. ಪಂ. ಆಂಳ್ ಪಿ. ಒ. ೧೬–೯–೩೮

ಸ್ವಾಮಿ,

ತಾವು ೯–೯–೩೮ರಲ್ಲಿ ಸರ್ಕಾರದ ಶ್ರೇಷ್ಠ ಕಾರ್ಯ ನರ್ತಿಗಳಿಗೆ ಬರೆದ ಪತ್ರಕ್ಕೆ ಈ ರೀತಿ ಉತ್ತರವನ್ನು ಕೊಡುತ್ತೇನೆ.

೧. ನೆಲವಂಗಲ, ಚಿಕ್ಕಬಾಣಾವರ, ಹೆಸರಘಟ್ಟ ಗಳಲ್ಲಿ ಈಡಗಗಳ ವಿಚಾರ:

ಚಿಕ್ಕಬಾಣಾವರ, ನೆಲವಂಗಲಗಳ ವಿಚಾರ ವರದಿ ಬಂದಿಲ್ಲ. ಹೆಸರಘಟ್ಟದ ಈಡಗಕ್ಕೇನೋ ಅಪಾ ಯವಾಗಿದೆಯೆಂದು ತಿಳಿಸಿಬಂದಿದೆ. ಜಜಾಪ್ಪಾರರು ಯಾರೋ ಗೊತ್ತಿಲ್ಲ.

೨. ಬಸೆಟ್ಟಿಹಳ್ಳಿ ವಿಚಾರ:

ಳನೇ ತಾ. ರಾತ್ರಿ ಈ ಕೆಲಸ ನಡೆದಹಾಗೆ ವರದಿ. ಾಮೇಶ್ವರಲಿಂಗಕ್ಕೇನೂ ಭಂಗಬಂದಿಲ್ಲ. ಪಾರ್ವತೀ ಗ್ರಹವನ್ನು ಮಟ್ಟಿಗೆ ಗಡಬಾರೆಗಳಿಂದ ಕೆಳಕ್ಕುರುಳಿ ಿದ್ದಾರೆ. ಬೀಳುವಾಗ ಅಮ್ಮನವರ ಬಲಗೈ ಮುರಿ ಿದೆ. ಬಸವಣ್ಣ, ಚೌಡೇಶ್ವರಿ, ಲಕ್ಷ್ಮಣಸ್ವಾಮಿ ಿಂಗ ಮತ್ತು ಕೆಲವು ನಾಗರಕಲ್ಲುಗಳು ಪೀಠಗಳಿಂದ ುರುಳಿಸಲ್ಪಟ್ಟಿವೆ. ಗುಡಿಬಂಡೆಯ ರಾಮಲಿಂಗೇ ್ವರ ದೇವಾಲಯದಲ್ಲಿ ಇಂತಹ ಕೃತ್ಯ ನಡೆಸಿದ ದೇ ಾಲಯದ ಕಳ್ಳರ ಗುಂಪಿನಮೇಲೆಯೇ ಗುಮಾನಿ ಿದೆ. ೨೯೫, ೪೪೦ ಐ. ಪಿ. ಸಿ. ಮೇಲೆ ವ್ಯವ ಾರ ನಡೆಸಲಾಗಿದೆ. ಶ್ರೀರಂಗಪಟ್ಟಣದಲ್ಲೇನೂ ಲಾಟಿಯಿಲ್ಲ. ಈ ವಿಚಾರ ಪ್ರೆಸ್‌ನೋಟನ್ನು ಕಳು ಿಸಲಾಗಿದೆ.

ಆರ್. ರಂಗರಾವ್,
ಪ್ರಕಟನ ಶಾಖಾಧಿಕಾರಿ.

ಹೇಮಗಿರಿ ವೃತ್ತಾಂತ

ಕುಣಿಗಲ್ ತಾಲ್ಲೂಕು ಹುಲಿಯೂರುದುರ್ಗದ ಸ ಾಪದಲ್ಲಿ ಶ್ರೀಹೇಮಗಿರಿ ಬೆಟ್ಟದಲ್ಲಿ ಬೆಂಗಳೂರಿಂದ ಹುಲಿಯೂರುದುರ್ಗಕ್ಕೆ ಬಂದಿದ್ದ ಕೆಲವು ದುರಾ ್ಮರು ಮಾಡಿದ ವಿಷಯವನ್ನು ಹಿಂದೆಯೇ ತಿಳಿಸಿ ್ದನೆ. ೨೫–೮–೨೮ನೇ ತಾರೀಖುಲಾಗಾಯ್ತು ದಿವಸಗಳು ತಾಲ್ಲೂಕು ಅಮಲ್ದಾರರು ಹುಲಿಯೂ ುದುರ್ಗದಲ್ಲಿ ಮೊಕ್ಕಾಂ ಮಾಡಿ ಸಾಮ ದಾನ ೇದೋಪಾಯಗಳನ್ನೆಲ್ಲಾ ಉಪಯೋಗಿಸಿ ರುಜು ಾತು ಮುಚ್ಚಳಿಕೆ ಮಾಡಿದ್ದಲ್ಲದೆ—ಹೆ॥ ಡೆಪ್ಯೂ ಕಮೀಷನರ್ ಸಾಹೇಬರು ಬಂದಕಾಲದಲ್ಲಿಯೂ ಮಗೆ ಬೇಕಾದ ಗುಂಪನ್ನು ಕಟ್ಟಿಕೊಂಡು ಹೋ ದರು. ಅಲಿಕೆ ಮಾಡಿಕೊಳ್ಳಬೇಕೆಂದು ಬಂದವರನ್ನು ಒಂಗ್ಲೆ ಬಳಿ ಇರಿ—ಅಲ್ಲಿ ಇರಿ—ಇಲ್ಲಿ ಇರಿ—ಎಂದು ಉಡಾಫೆಮಾಡಿ ಅವರುಗಳಿಗೆ ದಾರಿ ತಪ್ಪಿಸಿರುತ್ತಾರೆ. ಈ ವಿಷಯದಲ್ಲಿಯೂ ಪಿರ್ಯಾದು ನಡೆದಿರುತ್ತೆ.

ಅಲ್ಲದೆ ೫–೯–೩೮ರಲ್ಲಿ ತಾಲ್ಲೂಕಿನಲ್ಲಿದ್ದ ಮು ಖಂಡರಾದ ಮುಸಲ್ಮಾನರನ್ನು ಮತ್ತು ಬೆಂಗಳೂ ರಿಂದ ಕೆಲವರನ್ನು ಸಹ ಒಮಾಡಿಕೊಂಡು ಸಭೆಸೇ ರಿದ್ದರು. ಇತರ ಜನಗಳಿಗೆ ಅಲ್ಲಿ ಪ್ರವೇಶಕ್ಕೆ ಅವ ಕಾಶವಿಲ್ಲದಂತೆ ಅಮಲ್ದಾರರು ಮತ್ತು ಪೋಲೀಸ್ ಇನ್‌ಸ್ಪೆಕ್ಟರು ಸಹ ಏರ್ಪಡಿಸಿದ್ದಾರೆ.
ತಾ ೯–೯–೩೮ರಲ್ಲಿ ಕುಂಕೂರಿಂದ ಒಂದು ಜೊತೆ ಬಸವಣ್ಣ ವಿಗ್ರಹಗಳನ್ನು ಕಳುಹಿಸಿದ್ದಲ್ಲದೆ ಸಂಪ್ರೋ ಕ್ಷಣೆ ನಿರ್ಣಾಗಿ (೧೬೦-೦-೦) ಒಂದುನೂರು ಇಪ್ಪತ್ತು ರೂಪಾಯಿಗಳು ಸಹ ಮುಂಜೂರಾಗಿ ಹುಕುಂ ಬಂದಿರುತ್ತೆ. ಈ ರೀತಿ ಆದಲ್ಲಿ ಅಪರಾಧಿ ಗಳೇನೋ ಭಯವಿಲ್ಲದೆ ತಿರುಗ ಬಹುದಾಗಿದೆ. ಸರ್ಕಾರದ ಭಯವಿಲ್ಲದೆ ಇದ್ದಲ್ಲಿ ಬಡ ಪ್ರಜೆಗಳಿಗೆ ಬಹಳ ತೊಂದರೆ ಆಗುವ ಸಂಭವ ಸಹ ಇರುತೆ.

"—ಭಕ್ತ"

ಪ್ರಸಿದ್ಧ ಪತ್ರಿಕೆ

ಇತ್ತೀಚಿಗೆ ಬೊಂಬಾಯಿನ ಪ್ರಸಿದ್ಧ ವಾರ್ತಾ ಪತ್ರಿಕೆಯಾದ "ದಿ ಟೈಂಮ್ಸ್ ಆಫ್ ಇಂಡಿಯಾ" ಪತ್ರಿಕೆಯಲ್ಲಿ ಬೆಂಗಳೂರಿನ ಅವರ ಸುದ್ದಿಗಾರರು ಮೈಸೂರಿನ ವಿಚಾರವಾಗಿ ಈಗಿನ ಗಲಭೆಯ ವಿಷಯ ದಲ್ಲಿ ಆಧಾರವಿಲ್ಲದ ಮತ್ತು ಅಶಾಂತಿಯುತವಾದ ಸುದ್ದಿಗಳನ್ನು ಹರಡುತ್ತಿರುವದು ಸರ್ಕಾರದವರ ಗಮನಕ್ಕೆ ಬಂದು ವಿಷಾದವನ್ನುಂಟುಮಾಡಿದೆ. ಕಳೆದ ೧೦ನೇ ತಾರೀಖಿನ ಪತ್ರಿಕೆಯಲ್ಲಿ ಇಲ್ಲಿನ ಅವರ ವಿಶೇಷ ಸುದ್ದಿಗಾರರು ಶ್ರೀರಂಗಪಟ್ಟಣದಲ್ಲಿ ಮುಸಲ್ಮಾನ ಬದ್ಮಾಷಿಗಳು ಕೆಲವರು ಶ್ರೀ ರಂಗನಾಥಸ್ವಾಮಿ ದೇವಾಲಯಕ್ಕೆ ನುಗ್ಗಿ ಅಲ್ಲಿನ ಅರ್ಚಕರನ್ನೂ ಇನ್ನೂ ಅಲ್ಲಿ ನೆರೆದಿದ್ದ ಭಕ್ತಾದಿಗಳನ್ನೂ ಘಾಯಪಡಿಸಿರುವ ರೆಂದೂ ಮೈಸೂರು ಜಿಲ್ಲಾಧಿಕಾರಿಗಳಿಗೂ ಏಟು ಬಿದ್ದಿದೆಯೆಂದೂ ಬೆಂಗಳೂರಿಂದ ರಿಜರ್ವ್ ಪೋಲೀ ಸು ಪಡೆ ಹೋಗಿದೆಯೆಂದೂ ಪ್ರಚಾರಮಾಡಿರುವರು. ಇದು ಶುದ್ಧ ಸುಳ್ಳು. ಅಲ್ಲಿ ಗಲಭೆಯೇನೂ ನಡೆಯು ಲಿಲ್ಲ. ಘಾಯವಾರಿಗೂ ಆಗಲಿಲ್ಲ; ಪೋಲೀಸು ಪಡೆ ಯಾವದೂ ಕಳುಹಿಸಲ್ಪಡಲಿಲ್ಲ. ಅಲ್ಲಿನ ಸ್ಥಿತಿ ಯತಾಸ್ಥಿತಿಯಾಗಿದೆ.

ಆರ್. ರಂಗರಾವ್,
೧೧–೯–೩೮. ಪ್ರಕಟನಶಾಖಾಧಿಕಾರಿ.

ಮುಂತಾದಕಡೆ ನಡೆದ ಕೃತ್ಯಗಳಿಗೆ ಸದ್ಗೃಹಸ್ಥರಾದ ಮುಸಲ್ಮಾನರು ಜವಾಬ್ದಾರರೆಂದು ಹೇಳಲು ನಾನು ಹಿಂದೆಗೆಯುವುದಿಲ್ಲ. (ಎಲ್ಲ ವಿಚಾರಗಳಲ್ಲೂ ಸರ್ವರೂ ಭಾಗಿಗಳೆಂದು ತರ್ಕವಲ್ಲ) ಹಾಗೆಯೇ ಕರ್ತಾರಪುರ್ ಮತ್ತು ಆರಾದಲ್ಲಿ ನಡೆದ ಕೆಟ್ಟಕೆಲಸ ಗಳಿಗೆ ಸದ್ಗೃಹಸ್ಥರಾದ ಹಿಂದೂಗಳೂ ಸಹ ಬಾಧ್ಯ ರೆಂದು ಸಂಕೋಚವಿಲ್ಲದೆ ಹೇಳಬಲ್ಲೆನು. ಪಲವಾಲ ದಲ್ಲಿ ಕಚ್ಚಾ ಮಸೀದಿಗೆ ಒಪಾಗಿ ಪಕ್ಕಾ ಮಸೀದಿ ಯನ್ನು ಕಟ್ಟಲು ಪ್ರಯತ್ನಮಾಡಿದಕ್ಕೆ ಅಡ್ಡಿಪಡಿಸಿ ದದು ನಿಜವಾದರೆ ಅದಕ್ಕೆ ಕಾರಣಕರ್ತರು ಯಾರು? ಬದಮಾಷಿಗಳಲ್ಲ; ಸದ್ಗೃಹಸ್ಥರಾದ ಹಿಂದೂಗಳು. ಗೌರವಸ್ಥರನ್ನು ಈ ಅಪವಾದದಿಂದ ದೂರಮಾಡುವ ದುರಭ್ಯಾಸವನ್ನು ನಾವು ಖಂಡಿತವಾಗಿ ಮಟ್ಟಹಾಕ ಬೇಕು.

ಆದುದರಿಂದ ಹಿಂದೂಗಳು ಆತ್ಮಸಂರಕ್ಷಣೆಗಾಗಿ ಏನೂ ಬದಮಾಷಿಗಳನ್ನು ಎತ್ತಿ ಕಟ್ಟಿದ್ದೇ ಆದರೆ ಅವರು ಮಹಾಪರಾಧ ಮಾಡಿದಂತಾಗುತ್ತದೆ. ಹೀಗೆ ಮಾಡಿದರೆ ಅವರು 'ಕಾವಲಿಯಿಂದ ಒಲೆಗೆ ಬಿದ್ದಂತೆ' ಆಗುತ್ತದೆ. ವಣಿಜನೂ ಏಪ್ರನೂ ಅಹಿಂಸಾಮಾರ್ಗ ದಿಂದಾಗದಿದ್ದರೆ ಹಿಂಸಾಮಾರ್ಗದಿಂದಲಾದರೂ ಆತ್ಮ ಸಂರಕ್ಷಣೆ ಮಾಡಿಕೊಳ್ಳಲು ಕಲಿಯಬೇಕು. ಇಲ್ಲವಾದರೆ ಕನ್ನ ಹೆಂಗಸರು ಕಕ್ಕಳನ್ನೂ ಮನೆಮಾರು ಗಳನ್ನೂ ಬದಮಾಷಿಗಳಿಗೊಪ್ಪಿಸಬೇಕು. ಅವರು ಹಿಂಸಿಗಳಾದರೇನು? ಮುಸಲ್ಮಾನರಾದರೇನು? ಅವರದೇ ಒಂದು ಜಾತಿ. ಆತ್ಮಜರ ಸಂರಕ್ಷಣೆ ಯಿಂದ (ಅವರಿಗೇನೂ ಪ್ರಾಣಭಯವಿಲ್ಲ) ಕೂಡಿ ಹಿಂದೂ ಮೆರವಣಿಗೆಯೊಂದು (ಮೇಳತಾಳಗಳೊಂ ದಿಗೆ) ಮನ್ನೆತಾನೆ ಒಂದು ಮಸೀದಿಯ ಮುಂದೆ, ಏನೂ ಅಪಾಯವಿಲ್ಲದೆ ವಿಜೃಂಭಣೆಯಿಂದ ಸಾಗಿ ತೆಂದು ವಿಾಸೆ ಹುರಿತಿರುವುತ್ತ ಹೇಳಿದರು. ಪವಿತ್ರ ಕಾರ್ಯಕ್ಕೆ ಇಂತಹ ಮಾರ್ಗವನ್ನು ಅನುಸರಿಸುವುದು ಶುದ್ಧ ಪ್ರಾಪಂಚಿಕವೆಂದು ಕಾಣುತ್ತದೆ. ಅಂತ್ಯಜ ಸೋದರರನ್ನು ಇಂತಹ ಕಾರ್ಯಗಳಿಗೆ ಉಪಯೋಗಿಸಿ ಕೊಳ್ಳುವುದರಿಂದ ಹಿಂದೂಧರ್ಮಕ್ಕೂ ಸೇವೆಮಾಡಿ ದಂತಾಗಲಿಲ್ಲ, ಅಂತ್ಯಜರಿಗೂ ಕೂಡ ಪ್ರಯೋಜನ ವಾಗುವುದಿಲ್ಲ. ಇಂತಹ ಸಂದೇಹ ಸಂರಕ್ಷಣೆಯಿಂದ ಕೆಲವು ಮೆರವಣಿಗೆಗಳು ಕೆಲವು ಮಸೀದಿಗಳ ಮುಂದೆ ಸುಸೂತ್ರವಾಗಿ ಹೋಗಬಹುದು. ಆದರೆ ಇದು ಬೆಳೆಯುತ್ತಿರುವ ಪರಸ್ಪರ ದ್ವೇಷವನ್ನು ಹೆಚ್ಚಿಸು ತ್ತದೆ; ಅಷ್ಟೇ ಅಲ್ಲ. ಹಿಂದೂಧರ್ಮವನ್ನು ಅನೀತಿ ಯುತವಾಗಿ ಮಾಡುತ್ತದೆ. ಎದುರಿಸಿದಾಗಲೂ ಮೇಳತಾಳಗಳನ್ನು ಮಾಡಬಯಸಿದರೆ ಮಧ್ಯಮ ತರ ಗತಿಯ ಜನರು ಒದೆ ತಿನ್ನಲಿಕ್ಕೆ ಸಿದ್ಧರಾಗಬೇಕು. ಇಲ್ಲವಾದರೆ ಗೌರವ ಮಾರ್ಗದಿಂದ ಮುಸಲ್ಮಾನರ ಸ್ನೇಹವನ್ನು ಸಂಪಾದಿಸಬೇಕು. ಹಿಂದೆ ಮಾಡಿದ ಪಾಪಕ್ಕಾಗಿ ನಿಮ್ಮ ಕುಲದವರ ಮೇಲೆ ಈಗಲೂ ಹೊರಿಸಿರುವ ಹೇಸಿಕೆಯ ಭಾರಕ್ಕಾಗಿಯೂ ಹಿಂದೂ ಗಳು ತಪಸ್ಸು ಮಾಡಬೇಕು; ಅವರಿಗೆ ನಾವು ಸಾಲ ತೀರಿಸಬೇಕಾಗಿರುವಾಗ ಅವರಿಂದ ನಾವು ಪ್ರತಿಫಲವೆ ಣಿಸುವುದು ಯಾವ ನ್ಯಾಯ? ನಿಮ್ಮ ಹೇಡಿತನವನ್ನು ಮುಚ್ಚಲಿಕ್ಕೆ ಅವರನ್ನು ಉಪಯೋಗಿಸಿದರೆ ನಾವು ಎಂದೆಂದಿಗೂ ಪೂರೈಸಲಾರದಂತಹ ಸುಳ್ಳು ಆಕೆಗಳನ್ನು ನಾವು ಅವರ ಹೃದಯವ್ಯ ಬಿಚ್ಚಿಸುತ್ತೇವೆ; ಇದೆಲ್ಲ ನಮ್ಮ ತಲೆಯ ಮೇಲೆ ತಿರುಗಿದ ಹೊತ್ತುಬಂದಾಗ ಅದು ನಾವು ಅವರನ್ನು ಕಾಣುತ್ತಿರುವ ಮಾನವ ದೂರವಾದ ದೃಷ್ಟಿಗೆ ಉಚಿತವಾದ ವೃಷ್ಟಿಯೇ ಸರಿ. ಹಿಂದೂಗಳಿಗೆ ನನ್ನ ಮಾತಿನಲ್ಲೇನಾದರೂ ಕೊಂಚ ಗೌರವವಿದ್ದರೆ ಮುಸಲ್ಮಾನರಿಂದ ಮೊದಲಿನ ಬೀಳುವು ದೆಂದು ಇವರು ಭಾವಿಸಿದಾಗ ಹಿಂದೂಗಳು ಅಂತ್ಯ ಜರನ್ನು ತಮ್ಮ ಗುರಾಣಿಗಳನ್ನಾಗಿ ಮಾಡಿಕೊಳ್ಳದೆ ಇರಲಿ.

ತುರುವೇಕೆರೆ ಸಬ್ ತಾಲ್ಲೂಕನ್ನು ಕೆಲವಾರು, ಕೋರಟಗೆರೆ ಸಬ್‌ತಾಲ್ಲೂಕನ್ನು ಪೂರ್ಣ ತಾಲ್ಲೂಕ ನ್ನಾಗಿ ೧೯೩೮ನೇ ಜನವರಿಯಿಂದ ಮಾಡಲಾಗಿದೆ. ಈ ಬದಲಾವಣೆಗಳಿಂದ ವರ್ಷಕ್ಕೆ ೧,೪೦೦ ರೂಪಾಯಿ ಹೆಚ್ಚು ವೆಚ್ಚವಾಗುತ್ತದೆ.

ಬ ದ ಮಾ ಷಿ ಗ ಳು

ಗಾಂಧೀಜಿಯವರು ೧೯೩೪ನೇ ಮೇ ೨೬ರಲ್ಲಿ ಹಿಂದೂಮಹಮ್ಮದೀಯ ಸಮಸ್ಯೆ ಯನ್ನು ಕುರಿತು ಒಂದು ಅಪೂರ್ವ ಲೇಖನವನ್ನು 'ಯಂಗ್ ಇಂಡಿಯಾ'ದಲ್ಲಿ ಬರೆದರು. ಕಾಲೋಚಿತವಾಗಿ ನಾವು ಆದರಿಂದ ಕೆಲವು ಭಾಗಗಳನ್ನು ಎತ್ತಿ ಬರೆಯುತ್ತಿದ್ದೇವೆ. ಕಳೆದ ಎರಡು ವಾರಗಳಿಂದ 'ಜಗಳಗಂಟಿಯೂ ಹೇಡಿಯೂ,' 'ನಪುಂಸಕತ್ವಕ್ಕೆ ಅಂಗಸಾಧ ನೆಯು ಮದ್ದಲ್ಲ' ಎಂಬೆರಡು ಭಾಗಗಳನ್ನು ಪ್ರಕಟಿಸಿದ್ದಾಯಿತು.

ದಮಾಷಿಗಳನ್ನು ದೈಯುವುದು ತಪ್ಪು. ನಾವು ವಾತಾವರಣವನ್ನು ಕಲ್ಪಿಸದೆಹೋದರೆ ಅವರೆಂ ಗೂ ತಂಟೆಮಾಡುವುದೇ ಇಲ್ಲ. ೧೯೨೧ರಲ್ಲಿ ್ಸ ಆಫ್‌ವೇಲ್ಸ್‌ರವರು ಮುಂಬಯಿಗೆ ಬಂದಿದ್ದ ರಷ್ಟೆ. ಆ ದಿನ ಮುಂಬಯಿಯೊಳಗೆ ನಡೆದುದನ್ನೆಲ್ಲ ನಾನು ಕಣ್ಣಾರೆ ಕಂಡೆ. ನಾವು ಬೀಜ ಬಿತ್ತಿದೆವು; ಬದಮಾಷಿಗಳು ಬೆಳೆ ತೆಗೆದರು. ಆವರ ಬೆನ್ನುಹಿಂದೆ ನಮ್ಮವರಿದ್ದರು. ಮುಲ್ತಾನ್, ಸಹರನ್‌ಪುರ

ಪ ತ್ರ ವ್ಯ ವ ಹಾ ರ ಗ ಳು

ಅಧಿಕಾರಿಗಳಿಗೆ ಆರು ಪ್ರಶ್ನೆಗಳು

"ಕೋಲಾರಮ್ಮನ ಭಕ್ತ"

೧. ಕೋಲಾರ ಜಿಲ್ಲೆಯಲ್ಲಿ ಆಗಸ್ಟು ೧ರಿಂದ ಇಂದಿನವರೆಗೆ ಎಷ್ಟು ದೇವಾಲಯಗಳಲ್ಲಿ ಗಲಾಟೆಗಳಾಗಿವೆ?

೨. ಈ ದೂರುಗಳನ್ನೆಲ್ಲ ಪೋಲೀಸಿನವರು ತಮ್ಮ ಕಡತಕ್ಕೇರಿಸಿಕ್ಕೊಂಡು ಉಚಿತ ಕಂಡ ತನಿಖೆಯನ್ನು ಮಾಡಿ ಬದಮಾಷಿಗಳನ್ನಾಗಲೀ ಕೇಪುಮಾರಿಗಳನ್ನಾಗಲೀ ದಸ್ತಗಿರಿ ಮಾಡಿರುವರೆ? ಅವರು ಎಷ್ಟು ವ್ಯವಹಾರಗಳಲ್ಲಿ ಜಯಪ್ರದರಾಗಿರುವರು?

೩. ಪ್ರತಿ ಸ್ಥಳದಲ್ಲೂ ಅವಾಂತರ ನಡೆದ ದಿನ ಮತ್ತು ಕಾಲವೇನು? ಸ್ಥಳೀಯಾಧಿಕಾರಿಗಳು ಆ ಸ್ಥಳ ಪರೀಕ್ಷೆಮಾಡಿದ್ದೆಂದು? ಜಿಲ್ಲೆಯ ಇತರ ಉಪಾಧಿಕಾರಿಗಳು ಹೋಗಿ ಪರೀಕ್ಷೆಮಾಡಿ, ವರದಿಮಾಡಿದ್ದೆಂದು? ಜಿಲ್ಲಾಧಿಕಾರಿಗಳೇ ಸ್ವತಃ ಹೋಗಿ ನೋಡಿದ್ದೆಂದು? ಇವರೆಲ್ಲರ ವರದಿಗಳೂ ಸರ್ಕಾರದವರ ಕೈಗೆ ಬಂದವೆಯೆ? ಅವುಗಳೊಂದೊಂದಕ್ಕೂ ಯಾವ ಬಗೆಯ ವಿರೋಧಾಭಾಸವೂ ಕಾಣಬರುವುದಿಲ್ಲವೆ? ಹಾಗೆ ಕಂಡುಬಂದಿದ್ದರೆ ಮೇಲಿನವರು ಆ ವಿಚಾರದಲ್ಲಿ ಏನುಮಾಡಿರುವರು? ಹಾಗೆಯೇ ಉದಾಶೀನ ಮಾಡಿಬಿಟ್ಟರೆ ಆದೇವತಾಭಕ್ತರಲ್ಲಿ ಅಶಾಂತಿಯುಂಟಾಗುವುದೆಂಬುದನ್ನು ಸರ್ಕಾರದವರು ಬಲ್ಲರೆ? ಆ ಜಿಲ್ಲೆಯಲ್ಲಿಗೆಜಿಟ್ ಕುಲಕ್ಕೆ ಸೇರಿದ ಅಧಿಕಾರಿಗಳಲ್ಲಿ ಬ್ರಾಹ್ಮಣರೆಷ್ಟು ಮಂದಿ? ಮುಸಲ್ಮಾನರೆಷ್ಟು ಮಂದಿ? ಇತರ ಪಂಗಡದವರೆಷ್ಟು ಮಂದಿ? ಅವರು ಕೂತಿರುವ ಅಧಿಕಾರಸ್ಥಾನಗಳು ಯಾವುವು?

೪. ೧೯೨೮ನೇ ಜನವರಿ ೧ರಿಂದ ಜುಲೈ ೩೧ರವರೆಗೆ ಆ ಜಿಲ್ಲೆಯಲ್ಲಿ ಯಾವಯಾವ ದೇವಾಲಯಗಳಲ್ಲಿ, ಯಾವಾಗ, ಎಷ್ಟು ಮಟ್ಟಿಗೆ ಕಳ್ಳತನಗಳಾಗಿವೆ. ಎಷ್ಟು ಸ್ಥಾನಗಳಲ್ಲಿ ವಿಗ್ರಹಗಳು ಪೀಠದಿಂದ ಕೀಳಲ್ಪಟ್ಟಿವೆ? ಎಷ್ಟು ಸ್ಥಳಗಳಲ್ಲಿ ಹೇಸಿಕೆಗಳಾಗಿವೆ? ಈ ಪ್ರಯುಕ್ತ ಸಂಪ್ರೋಕ್ಷಣೆಗಾಗಿ ಮುಜರಾಯಿ ಶಾಖೆಯಿಂದ ಯಾವಯಾವ ದೇವಾಲಯಗಳಿಗೆ ಎಷ್ಟೆಷ್ಟು ಹಣವೆಚ್ಚವಾಗಿದೆ?

೫. ಆಗಸ್ಟು, ಸೆಪ್ಟಂಬರ್ ತಿಂಗಳುಗಳಲ್ಲೇ ಕೋಲಾರ ಜಿಲ್ಲೆಯಲ್ಲಿ ಒಂದು ದೇವಾಲಯವಾದ ಮೇಲೊಂದು ದೇವಾಲಯದಲ್ಲಿ ಇಂತಹ ವಿಗ್ರಹೋಚ್ಚಾಟನ, ಹೇಸಿಕೆ, ಕಳ್ಳತನಗಳಾಗಲು ಕಾರಣಗಳೇನು? ಆ ಜಿಲ್ಲೆಯಲ್ಲಿ ಹಾಗಾಗಲು ಪ್ರೋತ್ಸಾಹಕರವಾದ ಅಂತಹ ವಿಶೇಷ ಪರಿಸ್ಥಿತಿಯಾದರೂ ಏನು?

ಸಂಕೋಚವಿಲ್ಲದೆ ಅಧಿಕಾರಿಗಳು ಈ ಪ್ರಶ್ನೆಗಳಿಗೆ ನ್ಯಾಯವಾದ ಉತ್ತರಗಳನ್ನು ಕೊಟ್ಟರೆ ಜಿಲ್ಲೆಯ ಜನರಲ್ಲಿ ಹುಟ್ಟಿ ಹರಡುತ್ತಿರುವ ಅಶಾಂತಿ ಮತ್ತು ಭೀತಿಸಂಶಯಗಳು ದೂರವಾಗುತ್ತವೆ. ಇಲ್ಲವಾದರೆ ಅವು ಬೇರುಬಿಟ್ಟು ಪ್ರಜಾನೆಮ್ಮದಿಗೆ ಅಡ್ಡಿಯಾಗುವುದರಲ್ಲಿ ಸಂಶಯವಿಲ್ಲ.

ತೀರ್ಥಹಳ್ಳಿ ವರ್ತಮಾನಗಳು

ಈಚೆಗೆ ಎರಡು ವಾರಗಳಿಂದಲೂ ಮಳೆ ಇಲ್ಲ. ಭತ್ತದ ಪೈರಿಗೆ ತೊಂದರೆಯಾಗಿದೆ. ಮಳೆಯು ಅಗತ್ಯವಾಗಿದೆ. ಈಗ ಎರಡು ತಿಂಗಳ ಹಿಂದೆ ನಡೆದ ಎರಡು ಕಳವೂ ಪತ್ತೆಯಾಗಿಲ್ಲ. ಸರ್ಕಾರದವರು ಏರ್ಪಡಿಸಿದ ಎಶ್ವೇಶ್ವರಯ್ಯ ವಿಚಾರಣೆ ಕಮಿಟಿಯು ಈ ಪ್ರಾಂತ್ಯದ ಜನಗಳ ಮನಸ್ಸಿಗೆ ತೃಪ್ತಿಕರವಾಗಿಲ್ಲ. ಶಿವಮೊಗ್ಗಾ ಆಗುಂಬೆ ರಸ್ತೆಯು ಬಹಳಕೆಟ್ಟುಹೋಗಿದೆ. ಇಲ್ಲಿರುವ ಕೃಷ್ಣರಾಜೇಂದ್ರ ರೀಡಿಂಗ್‌ರೂಮು ಪ್ರೆಸಿಡೆಂಟರು, ಸೆಕ್ರೆಟರಿಯವರು ಮುತವರ್ಜಿವಹಿಸಿ ವಾಚಕರಿಗೆ ಅನುಕೂಲಮಾಡಿಕೊಟ್ಟಿರುತ್ತಾರೆ. ಬೆಳಿಗ್ಗೆ ಸಾಯಂಕಾಲ ಎರಡು ಹೊತ್ತೂ ಬಾಗಲು ತೆಗಿಯುವುದರಿಂದ ಓದುವವರಿಗೆ ಅನುಕೂಲವಾಗಿದೆ. ಎಲ್ಲರೂ ಸಹಾಯಮಾಡಿ ಇದರ ಪುಸ್ತಕ ಭಂಡಾರವನ್ನು ದೊಡ್ಡದುಮಾಡಬೇಕು. ಹೆಂಗಸರ ಮತ್ತು ಹೆರಿಗೆ ಆಸ್ಪತ್ರೆಯ ಕಟ್ಟಡವು ಪೂರೈಸಿದ್ದರೂ ಅದನ್ನು ಜನಗಳ ಉಪಯೋಗಕ್ಕೆ ಏರ್ಪಾಡುಮಾಡದೇ ಇರುವುದರ ಕಾರಣವೇನೋ ತಿಳಿಯಲಿಲ್ಲ. ಇದರ ಅನುಕೂಲವನ್ನು ಅಧಿಕಾರಿಗಳು ಬೇಗನೆ ಮಾಡಿಕೊಡುವರಾಗಿ ನಂಬಿಕೆ.

—ಪುರನಿವಾಸಿ

ಕನ್ನಡ ಗದ್ಯಾತ್ಮಕ

ಅತ್ಯಪೂರ್ವ ಗ್ರಂಥಗಳು

1. ಶ್ರೀ ದಾಸಬೋಧ (ಸಮರ್ಥ ರಾಮದಾಸ ಕೃತಪುಸ್ತಕದ ಭಾಷಾಂತರ 1ರಿಂದ 6 ಭಾಗಗಳು ಪ್ರತಿಯೊಂದು ಭಾಗಕ್ಕೆ ರೂ.) 5-14-0, 2. ಶ್ರೀ ಮದ್ಭಾಗವತ 12 ಸ್ಕಂದ ಸಂಪೂರ್ಣ 6-0-0, 3. ಶ್ರೀ ಆನಂದ ರಾಮಾಯಣ 1-8-0, 4. ಶ್ರೀ ನಪನಾಥ ಭಕ್ತಿಸಾರ 2-8-0, 5. ಸೂರ್ಯಗ್ರಹಣ(ಐತಿಹಾಸಿಕಕಾದಂಬರಿ)1-0-0, 6. ಭಗವಂತನಪಾಸ (ಡಿಟೆಕ್ಟಿವ್ ಕಾದಂಬರಿ) 1 0 0, 7. ಚಿನುನಾಚಿಲಿಪ್ಪ! (ಪೇಶ್ವಾಯಿಕಾದಂಬರಿ) 1-2-0, 8. ನರವಾರಕಾತೀಮ (ಟೀಪು ಸುಲ್ತಾನನಿಗೆ ಸಂಬಂಧಿಸಿದ ಕಾದಂಬರಿ) 1-4-0.

ವಿಳಾಸ:—ಮ್ಯಾನೇಜರ್, ಸದ್ಬೋಧಚಂದ್ರಿಕೆ, ಮೊಕ್ಕಾಂ ಆನಂದವನ ಜಿಲ್ಲಾ—ಧಾರವಾಡ.

ಕಾಸಿಗೆ ತಕ್ಕ ಕಜ್ಜಾಯ

ನಾವು ಸರ್ವಗ್ರಾಹ್ಯವಾದ ಅತ್ಯುತ್ತಮವಾದ ಯಾವವಿಧವಾದ ಬೆರಕೆಯೂ ಇಲ್ಲದಿರುವ ಶುದ್ಧವಾದ ಸಾಬೂನುಗಳನ್ನೇ ತಯಾರು ಮಾಡುತ್ತೇವೆ. ಸುಲಭ ಬೆಲೆಯುಳ್ಳ ಸಾಬೂನುಗಳು ಅಂಗಡಿಗಳಲ್ಲಿ ಮಾರಾಟಕ್ಕೆ ಬರುತ್ತವೆ. ಅವುಗಳು ಒಳ್ಳೆ ಸಾಬೂನುಗಳಲ್ಲ. ಅಂಥಾ ಸಾಬೂನುಗಳು ಬಟ್ಟೆಗಳನ್ನು ಧ್ವಂಸಮಾಡುತ್ತವೆ. ಮತ್ತು ಮೈಗೆ ಹಚ್ಚಿಕೊಂಡರೆ ತುಂಬಾ ಕೆಡಕು ಮಾಡುತ್ತವೆ. ಸುಲಭ ಖರೀದಿಯೊಂದನ್ನೇ ನೋಡಿದರೆ ಪೂರ್ವದ ಗಾದೆಯಂತೆ "ಕಾಸಿಗೆ ತಕ್ಕ ಕಜ್ಜಾಯ" ಬರುತ್ತೆ.

ನಮ್ಮ ದೇಶದಲ್ಲಿರುವ ಎಲ್ಲಾ ಅಂಗಡಿಗಳಲ್ಲೂ ನಮ್ಮ ಸಾಬೂನುಗಳು ದೊರೆಯುತ್ತವೆ.

ಪರಿಮಳ ಭರಿತಗಳಾದ ಮೈಗೆ ಉಜ್ಜಿಕೊಳ್ಳಬಹುದಾದ ಸಾಬೂನುಗಳು ಸ್ಯಾಂಡಲ್ (ಶ್ರೀಗಂಧ), ಜೆಸ್‌ಮಿಕ್ (ಜಾಜಿ), ಗುಲಾಬ್ ಮತ್ತು ಲಾವೆಂಡರ್ ಎಂಬವುಗಳು. "ಮೈಸೂರು ಸೋಪ್" ಎಂಬ ಹಸರುಳ್ಳ ಬಟ್ಟೆ ಸಾಬೂನು ಬಹಳ ಗುಣವುಳ್ಳದ್ದು.

ಸ್ವದೇಶೀ ಪದಾರ್ಥಗಳನ್ನು ಕೊಂಡರೆ ನಮ್ಮ ಹಣವು ನಮ್ಮ ದೇಶದಲ್ಲೇ ಚಲಾವಣೆಯಲ್ಲಿದ್ದು ನಮ್ಮ ದೇಶದ ಸಂಪದಭ್ಯುದಯಕ್ಕೆ ಕಾರಣವಾಗುತ್ತೆ. ಪರದೇಶದ ಮಾಲನ್ನು ಕೊಂಡರೆ ಹಣವು ನಮ್ಮ ಕೈಬಿಟ್ಟು ಪರದೇಶಕ್ಕೆ ಹೋಗುತ್ತೆ. ಸ್ವದೇಶದ ಮಾಲನ್ನೇ ಎಲ್ಲರೂ ಕೊಳ್ಳಬೇಕು.

(ಕಡೇ ಪುಟದಿಂದ)

ಗಳು ಹಾರಿಸಿದರೆಂದೂ, ಹಿಂಬಾಗಿಲಿನಿಂದ ಅವರು ಓಡಿಹೋಗುತ್ತಿದ್ದರೂ ದಿಕ್ಕೇ ಇಲ್ಲವಲ್ಲ. ಅವರ ವಿಚಾರಣೆಗಳನ್ನೇಕೆ ಹುಡುಕಲಿಲ್ಲ. ನೀವು ಮಾಡಿದ್ದೇನು. ನೀವು ಸಂಬಳ ತಿನ್ನುವುದೇತಕ್ಕೆ.

ಅಧ್ಯಕ್ಷ— ಪ್ರಶ್ನೆಗಳನ್ನು ಹಾಕಿ. ಆದೆಲ್ಲ ವರದಿಯಲ್ಲಿ ಹೇಳುವಿರಂತೆ

ಕಲಾಮಿ—ಅಧಿಕಾರಿಗಳು ಇರುವಕಡೆ ಪೋಲೀಸು ಸಿಬ್ಬಂದಿಯನ್ನು ಹಾಕಿದಿರಿ. ಅಜ್ಜಾಸಖಾನರ ಪ್ರಾಣ ಹೋಗುತ್ತಿದ್ದರೂ ಕೇಳಲಿಲ್ಲ. ಮುಸಲ್ಮಾನ ಮೊಹಲ್ಲಾಗಳಿಗೆ ಪ್ರಾಣಸಂರಕ್ಷಣೆ ಬೇಡವೊ. ಇದು ಪಕ್ಷಪಾತವಲ್ಲವೂ.

ಉ—ನಗರದ ಎಲ್ಲಕಡೆಗೂ ಪೋಲೀಸಿನವರನ್ನು ಕಳಿಸಿದ್ದೆ. ಬೇಕಾದರೆ ಒಂದು ಪಟ್ಟಿಯನ್ನು ಹಾಜರುಮಾಡುತ್ತೇನೆ.

ಕಲಾಮಿ—ಹುಡುಗರಿಷ್ಟುಕಡೆ ಗಲಾಟೆ ಮಾಡಿದರೂ ಒಬ್ಬರನ್ನಾದರೂ ದಸ್ತಗಿರಿಮಾಡಲಿಲ್ಲ.

ಮೂ. ಮೊದಲಿ—ಖಾನರ ಮನೆಯಲ್ಲೇ ಗಾಯಪಟ್ಟ ಹಿಂದುವನ್ನು ಕಂಡಿರಲ್ಲ. ಏಕೆ ಯಾರನ್ನೂ ದಸ್ತಗಿಮಾಡಲಿಲ್ಲ. ಇನ್‌ವೆಸ್ಟಿಗೇಷನ್ ಏಕೆ ಮಾಡಲಿಲ್ಲ.

ಉ—ಡಿ. ಸಿ. ಗಳು ವಿಚಾರಣೆ ಮ್ಯಾಜಿಸ್ಟ್ರೇಟರನ್ನೇಮಕವಾಗಿದೆಯೆಂದು ಹೇಳಿದರು. ಆ ಕೆಲಸ ಅವರಿಗೆ ಬಿಟ್ಟುಬಿಟ್ಟೆ.

ನಾಗಪ್ಪ—ಶೇಷಾದ್ರಿಗಳು ನಿಮಗೆ ಗುಂಡಿನ ಹೊಡೆತದ ಸುದ್ದಿ ತಿಳಿಸಿದರೂ ಏಕೆ ವಿಚಾರಣೆ ನಡೆಸಲಿಲ್ಲ. ಖಾನರಿಗೆ ಗನ್ ಲೈಸೆನ್ಸ್ ಇದೆಯೋ, ಆಜೀಜ ಖಾನರಿಗಿದೆಯೋ.

ಉ—ಆಜೀಜಖಾನರಿಗಿದೆ.

ನಾಗಪ್ಪ—ಅವನ್ನೇಕೆ ದಸ್ತಗಿರಿಮಾಡಲಿಲ್ಲ.

ಕ—ಸಿ. ವಿ. ಡಿ. ಗಳಿದ್ದಾರೆ ಫೋನುಗಳಿವೆ. ರಿಸರ್ವ್‌ನವರಿದ್ದಾರೆ.

ಪೊಡ—ಒಳ್ಳೆ ಸಾಲದಾಗಿದ್ದರೆ ದಂಡಿನಲ್ಲೇ ಸ್ಕೇನ್ನವಿದೆ. ಏಕೆ ತರಿಸಲಿಲ್ಲ ?

ನಾಗಪ್ಪ—ಖಾನರಮನೆಗೆ ಹುಡುಗರನ್ನು ಎಳಕೊಂಡು ಹೋದರೆಂದು ಕೇಳಿದಿರಲ್ಲ. ಏತಕ್ಕೆ ಮನೆ ಹುಡುಕಲಿಲ್ಲ.?

ಉ—ಹುಡುಕಲಿಲ್ಲ.

ಅಧ್ಯಕ್ಷ—ನಗರವನ್ನು ದೇವರೇ ನೋಡಿಕೊಬೇಕು!! ನಿಮ್ಮ ಕೆಳಗಿನವರೂ ಹೀಗೇ ಕರ್ತವ್ಯ ನಿರ್ವಹಿಸಿದರೊ?

ಪೊ—ಗಾಯಪಟ್ಟ ಹಿಂದೂವನ್ನು ಖಾನರ ಮನೆಯಲ್ಲಿ ಕಂಡಿರಲ್ಲ. ಆಗ ಡಿ. ಎಸ್. ಪಿ. ಅಲ್ಲಿದ್ದರೊ?

ಉ—ಇದ್ದರು.

ಬಸಪ್ಪ—ಶೇಷಾದ್ರಿಗಳು ಹೇಳಿದ ಮೇಲೂ ಸರ್ಕಾರಕ್ಕೆ ಗುಂಡು ಹಾರಿದ ವಿಚಾರ ತಿಳಿಸಲಿಲ್ಲವೊ ?

ಉ – ಇಲ್ಲ. ಮೇಲಿನ ಅಧಿಕಾರಿಗಳ ಮನೋವೃತ್ತಿ ಏನೋ ನನಗೆ ಗೊತ್ತಿಲ್ಲ. ಅಧಿಕಾರಿಗಳು ಅಲ್ಲಿಗೆ ಬಂದು, ಕೊಂಚ ಸಹಾಯ ತರಿಸಿ ಹೊರಟು ಹೋದರು.

ನಾಗಪ್ಪ—ಇದುವರೆಗೂ ಎಷ್ಟು ಕೇಸುಗಳು ದಾಖಲಾಗಿವೆ.

ಉ—ಜುಲೈ ೩೦ರಿಂದ ಸೆಪ್ಟಂಬರ್ ೧೦ರ ವರೆಗೆ ೪೧ ಕೇಸುಗಳು. ೨ ಪೂರೈಸಿದೆವು. ಕೆಲವು ವಿಚಾರಣೆಯಲ್ಲಿವೆ.

(ಉಳಿದ ವಿಚಾರಗಳನ್ನು ರಹಸ್ಯವಾಗಿ ತಿಳಿಸುವಂತೆ ಹೇಳಿದರು.)

೧೫ನೇ ತಾರೀಖು ಮಧ್ಯಾಹ್ನ

ಶ್ರೀ ಶೇಷಾದ್ರಿ ಅಯ್ಯರ್

(ಪೋಲೀಸ್ ಸಬ್ ಇನ್‌ಸ್ಪೆಕ್ಟರ್)

"ಮೂರನೆಯ ದಿನವೇ ಅಧಿಕಾರಿಗಳಿಗೆ ಗುಂಡು ಹಾರಿಸಿದ್ದನ್ನು ನಾನು ಕಂಡೆನೆಂದು ಹೇಳಿದೆ."

ಜುಲೈ ೨೩ನೇ ದಿನದಿಂದಲೇ ನಾನು ಸ್ಕೂಲಿನಲ್ಲಿ ಹೋದದ್ದು. ಹುಡುಗರು ಸು. ೨೦—೨೫ ಮಂದಿ ಗೇಟು ಬಳಿ ಕೂತಿದ್ದರು. ರಸ್ತೆಯಲ್ಲಿ ಆಡ್ಡಿ ಪಡಿಸುತ್ತಿರಲಿಲ್ಲ. ೨೮ನೇ ತಾರೀಖಿನ ಬೆಳಿಗ್ಗೆಯೂ ಹಾಗೆಯೇ ರಸ್ತೆಯ ಒಂದು ಪಕ್ಕದಲ್ಲಿ ಗಾಡಿಗಳು ಹೋಗಲಿಕ್ಕೆ ದಾರಿಯಿತ್ತು. ಆಗಾಗ ನಾವು ದಾರಿ ಬಿಡಿಸುತ್ತಿದ್ದೆವು. ನಾನು ಅಲ್ಲಿ ಮತ್ತೆ ಇತರರು ಯಾರನ್ನೂ ನೋಡಲಿಲ್ಲ. ಬೀದಿಯಲ್ಲಿ ತಮಾಷೆಗಾಗಿ ಸೇರುತ್ತಿದ್ದ ಗುಂಪಿನಲ್ಲಿ ಹುಡುಗರು, ದೊಡ್ಡವರು ಎಲ್ಲರೂ ಇದ್ದರು. ಶ್ರೀ ಸುಬ್ರಹ್ಮಣ್ಯಂ, ಭೀಮರಾವ್, ತಿವಾರಿಗಳು ಹುಡುಗರ ಮುಂದಾಳುಗಳು. ಶಿಸ್ತು, ಶಾಂತಿಸಂರಕ್ಷಣೆಗಾಗಿ ನನ್ನ ಅಧಿಕಾರಿಗಳು ನನ್ನನ್ನು ಅಲ್ಲಿಗೆ ಕಳುಹಿಸುತ್ತಿದ್ದರು. ೨೯ನೇ ತಾ|| ಬೆಳಿಗ್ಗೆ ಸ್ಕೂಲು ಕಾಂಪೌಂಡಿನಲ್ಲೆಲ್ಲ ಜನರು ಸೇರಿದ್ದರು. ಶ್ರೀ ಟಿ. ಟಿ. ಶರ್ಮ ಅವರು (ಅವರನ್ನು ಗುರುತಿಸಿದರು) ಭಾಷಣ ಮಾಡಿದರು. ಭಾಷಣದಲ್ಲಿ ಜೂನ್ ೧೫ನೇ ತಾ|| ದಿನ ಶಿಕ್ಷಣ ಶಾಖಾಧಿಕಾರಿಗಳು ಅಜ್ಜಿ ಮಾಡಿದರು. ನಾನು ಸರ್ಕಾರಕ್ಕೆ ಕಾಗದ ಬರೆದೆ. ಉತ್ತರನೇ ಇಲ್ಲ ಮುಂತಾಗಿ ಹೇಳುತ್ತಿದ್ದಾಗ ಮಿ|| ಪ್ಯಾಷನ್ ಸಾಹೇಬರು ಬಂದರು, ಶ್ರೀ ಶಂಕರನಾರಾಯಣರಾಯರೂ, ಬೇಲೂರು ಶ್ರೀನಿವಾಸಯ್ಯಂಗಾರ್ಯರೂ ಬಂದರು. ಶ್ರೀ ಶಂಕರನಾರಾಯಣರಾಯರು 'ನಮ್ಮ ಮಾತು ನಿಲ್ಲಿಸಿ' ಅಂದರು. ಅವರು 'ನಾನು ಕಥೆ ಆರಂಭಿಸಿದ್ದೇದೆ. ಅದು ಮುಗಿಯಲಿ' ಅಂದರು. ಆಮೇಲೆ ಅವರೆಲ್ಲ ಅಲ್ಲಿಂದ ಹೊರಟರು. ೩ ಮುಖಂಡರ ದಸ್ತಗಿರಿ ಆದಮೇಲೆ ಶ್ರೀ ಸರ್ವಾಭಟ್ಟರನ್ನು ಸತ್ಯಾಗ್ರಹ ನಾಯಕರನ್ನಾಗಿ ನಾಮಕರಣಮಾಡಿದರು. ಮತ್ತೆ ಸಾಯಂಕಾಲ ೬ ಘಂಟೆ ಸುಮಾರಿಗೆ ನಾನು ಶಾಲೆಗೆ ಹೋದೆ. ಈ ಮಧ್ಯೆ ಸಾ. ೪ ಘಂಟೆಹೊತ್ತಿಗೆ ಹೊರಗೆ ನಡೆದ ಗಲಾಟೆ, ಆಸ್ಪತ್ರೆಗೆ ಗಾಯಪಟ್ಟವರು ಬಂದದ್ದು ಇದೆಲ್ಲ ಗೊತ್ತಾಯಿತು. ಆಸ್ಪತ್ರೆಗೆ ಹೋಗಿ ಗಾಯಪಟ್ಟವರನ್ನು ನೋಡಿದೆ. ಶಾಲೆಗೆ ಹೋಗಿ ಶಂಕರಪ್ಪನವರನ್ನು ಸು. ೭ ಘಂಟೆಹೊತ್ತಿಗೆ ಬಿಡುಗಡೆಮಾಡಿದೆ. ಒಟ್ಟು ಸಾರ್ಜಂಟೂ ೪ ಮಂದಿ ಪೋಲೀಸಿನವರೂ ಇಷ್ಟೇ ನನ್ನ ಸಿಬ್ಬಂದಿ. ಅವರೆಲ್ಲ ಬೇರೆಬೇರೆ ಬೀಟ್‌ಗಳಲ್ಲಿ ನೋಡುತ್ತಿದ್ದರು. ಆಗ ತಾನೆ ಜನರು "ನಾಯಕರಿಗೆ ಬಿಡುಗಡೆಯಾಯಿತು, ಮೆರವಣಿಗೆ ಬರುತ್ತಿದೆ" ಎಂದು ಕೂಗಿದರು. ೫—೧೦ ನಿಮಿಷಗಳಲ್ಲೇ ಜನರ ಪ್ರವಾಹವು ಬಂದು ನಾಯಕರನ್ನು ಹೆಗಲಮೇಲೆ ಹೊತ್ತು ತಂದರು. ಮೊದಲು ಶ್ರೀ ಸುಬ್ರಹ್ಮಣ್ಯಂ, ಬಂದರು. ಆಮೇಲೆ ತಿವಾರಿ. ಜನರ ಗುಂಪು ಅಸಾಧ್ಯವಾಗಿತ್ತು. ಶಾಲೆಯ ಕಾಂಪೌಂಡು ಗೋಡೆಗಳ ಮೇಲೆಲ್ಲ ನೂರಾರುಮಂದಿ ಕೂತಿದ್ದರು. ಕಾರುಗಳಲ್ಲಿ ಯಾರು ಬಂದರೋ ನಾನು ನೋಡಲಿಲ್ಲ. ಮಂಗಳಾರತಿಗಾರಂಭವಾಯಿತು. ಏಕಪ್ರಕಾರವಾಗಿ ನಡೆಯುತ್ತಿತ್ತು. ನಾನಾಗ ಗೂಡಿನ ಹಿಂದೆ ನಿಂತು ನೋಡುತ್ತಿದ್ದೆ. ಆಗ ಸರ್ವಾಭಟ್ಟರು ಅಂಗಳದ ಉತ್ತರಭಾಗದಲ್ಲಿ ನಿಂತು ಹುಡುಗರನ್ನು "ನೀವು ನಿಜವಾಗಿ ಸತ್ಯಾಗ್ರಹಿಗಳೇ. ಅಹಿಂಸಾಮಾರ್ಗವನ್ನು ಮೀರಿದಿರಂತಲ್ಲ. ಇದು ತಪ್ಪು" ಮುಂತಾಗಿ ಮಾತಾಡುತ್ತಿದ್ದ ೨. ನಾನು ಅಲ್ಲೂ ಹೋದೆ. ತಿದ್ದಕ್ಕಿದ್ದಹಾಗೆ ಗುಂಪಿನಲ್ಲಿ "ಕಲ್ಲುಗಳು ಜೋಡುಗಳು ಬೀಳುತ್ತಿವೆ" ಎಂಬ ಕೂಗೆದ್ದಿತು. ಗಜಿಬಿಜಿಯಾಯಿತು. ಜನರೆಲ್ಲ ಚದರಲಾರಂಭಿಸಿದರು. ನಾನೂ ಜಾಗಿಲು ಬಳಿಗೆ ಓಡಿಬಂದೆ. ಶಾಲೆಯ ಕಡೆಯಿಂದ ಖಾನರಮನೆ ಕಡೆಗೂ, ಖಾನರಮನೆಯ ಕಡೆಯಿಂದ ಶಾಲೆಯಕಡೆಗೂ ಕಲ್ಲುಗಳು ಹಾರಾಡಿದುವು. ನಾನು ಸ್ವತಃ ೨—೩ ಕಲ್ಲುಗಳನ್ನು ನೋಡಿದೆ.

ಪ್ರ—ತಾವು ಗುಂಡು ಹಾರಿದ್ದನ್ನು ನೋಡಿದಿರೊ.

ಉ— ನೋಡಿದೆ ಸ್ವಾಮಿ ನಾಲಬಂದವಾಡಿ ಮೂಲೆಮನೆಯ ಮಹಡಿಯಿಂದ ೪—೫ ಗುಂಡುಗಳು, ಒಂದರಹಿಂದೆ ಒಂದು ಬಂದವು.

ಪ್ರ—ಅದು ಬೆಳ್ಳಳ್ಳಿ ಪಟಾಸಿರಬಹುದಲ್ಲವೆ.

ಉ—ಹೇಗಾದೀತು ಸ್ವಾಮಿ! ನಾನು ಕಣ್ಣಾರ ನೋಡಿದ್ದೇನೆ, ಮೇಲಿಂದ ನೇರಾಗಿ ಬಂದವು, ಬೆಂಕಿ ಹಾರಿದ್ದು ನೋಡಿದೆ.

ಪ್ರ—ಆಮೇಲೆ ಏನಾಯಿತು!

ಉ—ಆಮೇಲೆ ಮುಸಲ್ಮಾನರು ಲಾಠೀಗಳನ್ನು ಹಿಡಿದು ಹಿಂಡುಗಳನ್ನು ಸಿಕ್ಕಾಪಟ್ಟೆ ಹೊಡೆಯುತ್ತ ಬಂದರು. ನಾನು ನುಗ್ಗಿದೆ. ಅಬ್ದುಸಖಾನರ ಮನೆಯ ಅಂಗಳದಲ್ಲಿ ೫—೬ ಮುಸಲ್ಮಾನರಿದ್ದರು. ಕೆಲವರ ಕೈಲಿ ದೊಣ್ಣೆಗಳಿದ್ದುವು. ಹಿಂದುಗಳೊಬ್ಬರ ಕೈಲೂ ದೊಣ್ಣೆಗಳಿರಲಿಲ್ಲ. ಜಗಲೇ ಅನೇಕರಿಗೆ ಗಾಯಗಳಾಗಿದ್ದವು. ನನಗೆ ದಿಕ್ಕು ತೋರದೆ ಖಾನರ ಸಹಾಯಕ್ಕಾಗಿ ಅವರ ಮನೆಗೆ ಹೋದೆನು. ಆಫೀಸಿನಲ್ಲೂ ೫—೬ ಮಂದಿ ಇದ್ದರು. ೨—೩ ಲಾಠಿಗಳನ್ನು ಹಿಡಿದಿದ್ದರು. ಒಬ್ಬ ಹುಡುಗನು ಪೇಪರು ಹಿಡಿದು ನಿಂತಿದ್ದನು. ಖಾನರೆಲ್ಲಿಂದು ಕೇಳಿದೆ. ಉತ್ತರ ಕೊಡಲು ೧೦ ನಿಮಿಷವಾಯಿತು. ಹುಡುಗನು ಆಮೇಲೆ ಖಾನರು ಮೇಲಿದ್ದಾರೆಂದು ಹೇಳಿದನು. ನಾನು ಮೆಟ್ಟಲು ಹತ್ತಿ ಅರ್ಧದಾರಿ ಹೋದೆ—ಖಾನರೇ ಇಳಿದರು. 'ಹೊರಗೆ ಮುಸಲ್ಮಾನರು ಸಿಕ್ಕಾಪಟ್ಟೆ ಹಿಂದುಗಳನ್ನು ಹೊಡೆಯುತ್ತಿದ್ದಾರೆ. ನೀವು ಬಂದು ಅವರಿಗೆ ಹೇಳಿ' ಅಂದೆ 'ನನ್ನ ಮನೇ ಮೇಲೂ ಕಲ್ಲುಗಳು ಬೀಳುತ್ತಿವೆ ನೋಡಿ. ಬೇಕಾದರೆ ಫೋನ್ ಮಾಡಿ' ಅಂದರು. ನಾನು ಫೋನ್, ಮಾಡಿದೆ. ಆದು ಯಾರೊಮಹಾರಾಯ ನನ್ನ ಪ್ರವರ ಕೇಳಲಾರಂಭಿಸಿದ. ನಾನು 'ನಿನ್ನತಲಹರಟೆಹಾಗಿರಲಿ ಇಲ್ಲಿ ತಲೆಗಳು ಬೀಳುತ್ತಿವೆ. ಪ್ರಾಣ ಹೋಗುತ್ತಿದೆ' ಎಂದು ಕೂಗಿದೆ. ಕಡೆಗೆ ಮಾರ್ಕೆಟ್ ಕಡೆಯಿಂದ ಪೋಲೀಸಿನವರ್ಮಿಲಿಟರಿ ಬಂತು. ನಾನು ನಿಶ್ಚಿಂತನಾಗಿ, ಪ್ರಾಣಭಯವಿಲ್ಲದೆ ಹೊರಕ್ಕೆ ಬಂದೆ.

ಪ್ರ—ಆಗ ಏನು ನೋಡಿದಿರಿ?

ಉ—ನಾನೇನು ಹೇಳಲಿ ಸ್ವಾಮಿ. ಮುಸಲ್ಮಾನರು ಜೊತ್ತಾಗಿ ಖಾನರನ್ನು ಹಿಡಿದು ಹಿಂದೂಗಳನ್ನು ಹೊಡೆದು ಚೆಲ್ಲಾಪಿಲ್ಲಿಮಾಡುತ್ತಿದ್ದರು. ನಾನು ರಸ್ತೆಗೆ ಬಂದೆ ಖಾನರ ಮನೆಯಿಂದ ೪೦—೫೦ ಮುಸಲ್ಮಾನರು ನನ್ನನ್ನೆ ಹೊಡೆದರು. ಕೆಲವರ ಕೈಲಿ ದೊಣ್ಣೆಗಳಿದ್ದುವು. ಒಬ್ಬನು ಒರಟು ಭಾಗವಾಗಿ ಬಂದು ಭಾರಿ ಬಿತ್ತರಕ್ಕೆ ಇನ್ನೊಂದು ಭಾಗವು ದಕ್ಷಿಣಾಭಿಮುಖವಾಗಿ ಹೊರಟಿತು. ಕೆಲವರು ಖಾನರ ಮನೆಯಮಂದೆ ಕಲ್ಲನ್ನು ತಿರುವುತ್ತ ಬಂದು ರಾಂಡು ಮಾಡಿದರು. ಆಮೇಲೆ ಮೂಲೆಮೂಲೆಗಳಿಂದಲಿ ಮುಸಲ್ಮಾನರು ಬಂದರು. ಸಿಕ್ಕಾಪಟ್ಟೆ ಹಿಂದುಗಳನ್ನು ಹೊಡೆದರು.

ಪ್ರ—ಖಾನರ ಮನೆಯಂದೇನಾದರೂ ಗುಂಡುಗಳಾದವೆ?

ಉ—ಇಲ್ಲ ಸ್ವಾಮಿ. ನಾನೇನೂ ನೋಡಲಿಲ್ಲ.

ಪ್ರ—ಆಮೇಲೆ ಏನಾಯಿತು?

ಉ—ನನಗೆ ಸಾಕಾದ ಜನಬಲವಿಲ್ಲದ್ದರಿಂದ ನಾನು ಶಾಲೆಯ ಕಡೆ ಹೋದೆ. ಆಷ್ಟೊತ್ತಿಗೆ ಶಾಲೆಯ ಅಂಗಳದಲ್ಲಿ ಸುಮಾರು ೫೦—೬೦ ಮಂದಿ ಇದ್ದಿರಬಹುದು ಮೊದಲು ಇಬ್ಬರು ಮುಸಲ್ಮಾನರು ಅಲ್ಲಿಗೆ ಬಂದರು. ಇಬ್ಬರು ಖಾನರ ಹೊಟ್ಟಾಪಾಕ್ತ. ಕರೀಬೂಸು ಕಾರಿಯನ್ನೇರಿಸಿದ್ದರು. ಇನ್ನೊಬ್ಬನೂ ಸೇರಿ ಗನ್‌ಪೌಡರನ್ನು ಬೆಂಕಿಮದ್ದು ಮಾಡಿದರು. 'ಕತ್ತೆಗಳಾ ಟಾರ್ ಹಮಾರಾ ಮೊಹಲ್ಲಾಮೆ' ಅಂದ ಒಬ್ಬ. 'ಫೋಲಾಸ್ ಕಾಪಡಾ ಮಸ್ಜಿದ್‌ಮೆ ಜಾಕೂ ಜೊಡೂ ಮಾರೋ' ಅಂದ ಇನ್ನೊಬ್ಬ. ದೀಪಕ್ಕೊಂದೆ ಬೆಂಕಿಪಟ್ಟಣ. ದೀಪದಮನೆ ಅಡಾಮ ಸಳಕ್ಕೆಂದು ಹೊತ್ತಿ ಸೊದ್ದ. ನನಗೆ ನಾಲ್ಕೈದೇ ಜನರಿದ್ದರೆ ನಾನು ರಸ್ತೆಗೆ ಓಡಿಬಂದೆ. ಅಲ್ಲಿ ಒಬ್ಬ ಮುಸಲ್ಮಾನನು ಒಬ್ಬ ಹಿಂದುವನ್ನು ಜೋಡಿಸಿನಿಂದ ಹೊಡೆಯುತ್ತಿದ್ದ. ದೊಣ್ಣೆ ಏಟುಗಳಾತೂ ಬೀಳುತ್ತಲೆ ಇದ್ದುವು. ಆಗ ಇಬ್ಬಿಬ್ಬರು ಪೋಲೀಸಿನವರು ನನ್ನನ್ನು ಹಿಡಿದಿದ್ದರು. ನನಗೆ ನಾಕಾಗಿ ಹೋಗಿತ್ತು. ಅಲ್ಲಿಂದ ನನ್ನನ್ನು ನಡೆಸಿಕ್ಕೊಂಡು ಮಾರ್ಕೆಟ್ ಕಡೆಗೆಹೊರಟರು. ಪ್ರಸಂಗವಶಾತ್ ಬಿ ವಿ. ಎನ್. ಮನ್ನು, ಕಂಡ ಕೂಡಲೆ 'ಸ್ವಾಮಿ ನಾನು ಸತ್ತೆ ಎಂದು ಕೂಗಿದೆ. ನನ್ನನ್ನು ಆಸ್ಪತ್ರೆಗೆ ಕಳಿಸಿದರು. ಅಲ್ಲಿ ಸುಮಾರು ೧—೩ ಘಂಟೆ ನನಗೆ ಸ್ಮೃತಿಯಿತ್ತು. ಅಲ್ಲಿ ಇನ್‌ಸ್ಪೆಕ್ಟರ್ ಕೃಷ್ಣಯ್ಯಂಗಾರ್ಯರೂ ಪೇಟೆಯಿಂದು ಬಿದ್ದಿದ್ದರು. ಹೆಣೆಯು ಬೆಳಿಗ್ಗೆಯೇ ಅವರಿಗುಂಡಿನೇಟು ಕಂಡೆನೆಂದು ಹೇಳಿಬಿಟ್ಟೆ. ಅಲ್ಲಿಂದ ಮನೆಗೆ ಹೋದೆ. ೧೯ನೇ ತಾರೀಖು ಕೆಲಸಕ್ಕೆ ಹಾರಾಡೆ, ನಡೆದ ಸಂಗತಿಗಳ ವರದಿಯೊಂದನ್ನು ನನ್ನ ಅಧಿಕಾರಿಗಳಿಗೆ ಕೊಟ್ಟಿದ್ದೇನೆ.

ಪ್ರ—ಗುಂಡಿನ ವಿಚಾರವು ಅವರಲ್ಲಿ ಹೇಳಿದ್ದಿರೊ

ಉ—ಎಲ್ಲಾ ಹೇಳಿದ್ದೇನೆ ಸ್ವಾಮಿ. ಇನ್ನೂ.

ಅಧ್ಯಕ್ಷ—ಒಳ್ಳೆಯದು ರಹಸ್ಯವಿಚಾರಗಳನ್ನೆ ಆಮೇಲೆ ತಿಳಿಸಿ

ಉ— ಒಳ್ಳೆಯದು ಸ್ವಾಮಿ—

(ಆಮೇಲೆ ರಹಸ್ಯವಾಗಿ ಸಮಿತಿಯವರಿಗೆ ಇವರು ಕೆಲವು ಸಂಗತಿಗಳನ್ನು ತಿಳಿಸಿದರು.)

ಆರ್ಯ ವೈದ್ಯಶಾಲಾ

ನಂ. ೬೫, ಬಳೇಪೇಟೆ, ಬೆಂಗಳೂರು ಸಿಟಿ.

ಶಸ್ತ್ರಚಿಕಿತ್ಸೆ ಇಲ್ಲದೆ ಅನಾಯಾಸವಾಗಿ ಮೂಲ್ಯವಾಧಿಗೆ ಪರಿಹಾರ—"**ಸಾದಿಷ್ಟ ವಿರೇಚನ ಚೂರ್ಣ**" ಮೂಲವ್ಯಾಧಿಗೆ ಸಿದ್ಧೌಷಧಿಯು. ಮಲಭದ್ಧ ಆಸನ ಇಳೀಬೀಳುವುದು, ಆಸನದ ಬಿರುಕು ರಕ್ತ ಮೂಲ ಕೀವುಮೂಲ ಮತ್ತು ಆಸನದ ನವೆಯನ್ನು ಹೊಗಲಾಡಿಸುವುದು. ಸುಖವಾಗಿ ಮಲವಿಸರ್ಜನೆ ಮಾಡಿಸುವುದು. ಹಸವೆಯನ್ನೂ ಬಾಯಿಗೆ ರುಚಿಯನ್ನೂ ಕೊಡುವುದು. ಬೆಲೆ ಆಣೆ ೦-೮-೦

ಅಶ್ವಗಂಧಾದಿ ಚೂರ್ಣ—ಧಾತುನಷ್ಟಕ್ಕೆ ನರಗಳ ನಿಶ್ಶಕ್ತಿಗೆ ಸಿದ್ಧೌಷಧ. ಧಾತುಗಳನ್ನು ವೃದ್ಧಿಪಡಿಸಿ ಕಾಂತಿ, ಬಲ, ಮತ್ತು ತೇಜಸ್ಸನ್ನು ಕೊಡುವುದು. ಬೆಲೆ ೦-೮-೦

ಚ್ಯವನಪಾಶ—ಕೆಮ್ಮು, ಉಬ್ಬಸ, ಕ್ಷಯ ಹೃದಯರೋಗಗಳನ್ನು ಪರಿಹರಿಸುವುದು. ಬಲ, ಕಾಂತಿ, ಪುಷ್ಟಿ, ತುಷ್ಟಿ, ವರ್ಣ, ಸ್ಮೃತಿ ಮೇಧೆ, ಮನಃಪ್ರಸನ್ನತೆಗಳನ್ನು ಕೊಡುವುದು. ಬೆಲೆ ೩—೦—೦, ೧—೦—೦.

ಬಾಲಾರ್ಕ ಮಧು

Balarka Madhu.

ಇದನ್ನು ಕೊಡೋಣವ್ವರಿಂದ ಮಕ್ಕಳು ರೋಗರಹಿತರಾಗಿ ಆರೋಗ್ಯವನ್ನು ಪಡೆಯುವರು. ಅಸ್ತಿಜ್ವರ, ಅತಿಸಾರ (ಕೋವೆರೋಗ) ಇವೇ ಮೊದಲಾದ ರೋಗಗಳ ಗುಣವಾಗಿ ಆಹಾರವು ಜೀರ್ಣಿಸಿ ಶರೀರದಲ್ಲಿ ಪೌಷ್ಟಿಕ ರಸಗಳುಂಟಾಗಿ ಎಲುಬುಗಳ ಮಧ್ಯೆ ಮಾಂಸ ಬೆಳೆದು ಕ್ಷೀಣಿಸಿದ ಶರೀರವು ಪುಷ್ಟಿಯಾಗುವುದು. ಮಧುರವಾಗಿದೆ ಮಕ್ಕಳು ಉತ್ಸಾಹದಿಂದ ಸೇವಿಸುತ್ತಾರೆ.

ಶೀಸೆ ೧ಕ್ಕೆ ೦—೧೬—೦ ಪೋ. ಖ. ಬೇರೆ

ಎಂ. ವಿ ಪ್ರಾಸಾದಿಕ ಔಷಧಾಲಯ,
ಶಿವಮೊಗ್ಗಾ

ಮೊದಲು
ಪ್ರಾಣ ಉಳಿಸಿಕೊಳ್ಳಿ!

"ಗಾಳಿ ಪಿಸ್ತೂಲು"

ಕಳ್ಳಕಾಕರ ಭಯವಿಲ್ಲ;
ಕೂರಮೃಗಗಳ ಭಯವಿಲ್ಲ.

ಲೈಸೆನ್ಸು ಬೇಕಾಗಿಲ್ಲ

೪೧೪ — ೪೦ ರವೆಯುಳ್ಳದ್ದು
. ಪಿ. ವೆಚ್ಚ ೦—೬—೮
(ಹೆಚ್ಚಾಗಿ ಬೇಕಾದರೆ) ರೂ ೧

elty Stores (102)
swar, Bombay.

ರೋಗಗಳನ್ನನುಭವಿಸುವವರಿಗೆ ಸಂಜೀವನವಾದ

ಅಮೃತಾಂಜನ

ವು ಕೆಳಗೆನಮೂದಿರುವ ವ್ಯಾಧಿಗಳನ್ನೆಲ್ಲಾ ನಿರ್ಮೂಲ ಮಾಡುವದ
ತಲೇನೋವು, ಕೆಮ್ಮು, ವಾಯುನೇವು, ಹಲ್ಲುಬೇನೆ
ಕೀಲುನೋವು, ಊದುವಿಕೆ, ಕೀಲಸುಡಿಲ, ಸೀತವಗ್ಗೈರು
ಒಂದುಸಲ ಉಪಯೋಗಿಸಿದರಲ್ಲವೆ ಗುಣ ಗೊತ್ತಾಗುವದು
ಬೆಲೆ ಡಬ್ಬಿ ೧ ಕ್ಕೆ ೧೦ ಆಣೆಗಳು
ಎಲ್ಲಾ ವ್ಯಾಪರಗಾರಲ್ಲಿಯೂ ಸಿಗುವದು

ಬೊಂಬಾಯಿ ಅಮೃತಾಂಜನಡಿಪೋ ಮದರಾಸು

ಶ್ರೀ ದಾಸಸೇವಾಕಾರ್ಯಕ್ಕೆ ಸಹಕರಿಸಿ ಪುಣ್ಯಭಾಗಿಗಳಾಗಿ, ಸುಸಮಯ !

('ಕೀರ್ತನ ತರಂಗಿಣಿ'ಯ ದ್ವಿತೀಯ ವರ್ಷಾರಂಭವಾಗಿದೆ.)
'ಶ್ರೀ ಹರಿದಾಸ ಸೇವಾಸಮಿತಿ'ಯವರಿಂದ ಬಹಳ ಶುದ್ಧ ರೀತಿಯಲ್ಲಿ
ಪರಿಶೋಧಿಸಲ್ಪಟ್ಟ ಮಾಸಸಂಚಿಕಾ ರೂಪದಲ್ಲಿ ಪ್ರಕಟವಾಗುತ್ತಲಿರುವ

ಶ್ರೀ ಕರ್ಣಾಟಕ ಹರಿದಾಸಕೀರ್ತನ ತರಂಗಿಣಿ

ತಾವು ನೋಡಿರುವಿರಾ? ಇಲ್ಲವಾದರೆ, ಇಂದೇಚಂದಾದಾರರಾಗಿರಿ! ಇದರಲ್ಲಿ ಜಗದ್ವಂದ್ಯರಾದ ಶ್ರೀ ಪುರಂದರದಾಸರು ಕನಕದಾಸರೇಮೊದಲಾದ ಹರಿದಾಸರುಗಳು ಲೋಕೋಪಕಾರಾರ್ಥವಾಗಿ ನುಡಿದ ದಿವ್ಯ ಭಗವನ್ನಾಮಕೀರ್ತನೆಗಳು ಪ್ರತಿತಿಂಗಳಲ್ಲಿಯೂ ಕ್ರೌನ್‌ಅಷ್ಟಪತ್ರದ ನಾಲ್ವತ್ತು ಪುಟಗಳ ಪುಸ್ತಕರೂಪದಲ್ಲಿ ಪ್ರಕಟವಾಗುತ್ತಲಿದೆ. ಆಸ್ತಿಕ ಮಹಾಶಯರು ಸಂಗ್ರಹಿಸಲು ಸುಸಮಯ. ಸರ್ವರಿಂದಲೂ ಸಂಗ್ರಹಿಸಲ್ಪಡಲು ಅನುಕೂಲಿಸುವಂತೆ ಚಂದಾ ದರವನ್ನು ಬಹಳ ಕಡಿಮೆಯಾಗಿಟ್ಟಿದೆ.

ವಾರ್ಷಿಕ ಚಂದಾ. (ಅಂಚೆ ಹಾಸಲು ಉಚಿತ).

ಸಾಮಾನ್ಯ ಪ್ರತಿ ರೂ. ೧—೮—೦ ಉತ್ತಮ ಪ್ರತಿ ರೂ. ೨—೪—೦

ಪ್ರಥಮ ಸಂಪುಟದ ಬೈಂಡಾದ ಪ್ರತಿಗಳು

	ಸಾದಾ ಬೈಂಡು	ದಪ್ಪರಟ್ಟಿನ ಬೈಂಡು	ಕಿತ್ತಾನಾರು.
ಸಾಮಾನ್ಯ ಪ್ರತಿ.	೧—೮—೦	೧—೧೨—೦	೨—೪—೦
ಉತ್ತಮ ,,	೨—೪—೦	೨—೮—೦	೩—೦—೦

ಅಂಚೇ ಹಾಸಲು ಪ್ರತ್ಯೇಕ

ವಿಳಾಸ:—ಸುಬೋಧ ಪ್ರಕಟನಾಲಯ—ನ್ಯೂ ಮಾರ್ಕೆಟ್, ಬೆಂಗಳೂರುನಗರ

ಕಾರ್ಯಜಯಪ್ರದ ಮಲಯಾಳಯಂತ್ರ

ಧರಿಸಿದರೆ ಸಂತಾನಹೀನರು ಮಕ್ಕಳನ್ನು ಪಡೆಯುತ್ತಾರೆ, ಕೈ ಹಿಡಿದ ಕೆಲಸವು ಸಿದ್ಧಿಸುತ್ತದೆ. ವ್ಯಾಪಾರದಲ್ಲಿ ಲಾಭ ಉಂಟಾಗುತ್ತದೆ. ಇಷ್ಟೇ ಅಲ್ಲದೆ ಭಯ, ಭೀತಿ, ಕೆಟ್ಟಸ್ವಪ್ನ, ಮೈಲಿ ನೆರಳು ಎಲ್ಲ ಪರಿಹಾರವಾಗುತ್ತದೆ.

ಸ್ಥಳದವರಿಗೆ ೨ ರೂ. ಪರಸ್ಥಳದವರಿಗೆ ವಿ. ಪಿ. ೩ ರೂ.

ಪಂಡಿತ ಟಿ. ರಾಮಾಶಾಸ್ತ್ರೀ ವಿಶ್ವಕರ್ಣಾಟಕ ಬೆಂಗಳೂರು ಸಿಟಿ

ಉಚಿತ ಉಚಿತ!!

ಈ ಅಮೂಲ್ಯವಾದ ಸಮಯ ಕೊಂಚ ಕಾಲವೆ!

ಚಿನ್ನದ ಕೈ ಗಡಿಯಾರಗಳ ಬಹುಮಾನ



ಈ ಹತ್ತು ಮಾದರಿಗಳಲ್ಲಿ ಯಾವುದು ಬೇಕಾದರೂ
ರೇಶ್ಮೆ ಅಥವಾ ತೊಗಲು ಪಟ್ಟಿಯೊಂದಿಗೆ ರೂ. ೫—೧೫—೦
೪ ವರ್ಷಗಳ ಗ್ಯಾರಂಟಿ. ವಿ. ಪಿ. ವೆಚ್ಚ ಅ. ೦—೬—೦
೩ ಗಡಿಯಾರ ತರಿಸಿಕ್ಕೊಂಡರೆ ರೂ. ೧೫; (ಅಂಚೆ ವೆಚ್ಚ ಬೇರೆ)
೬ ಗಡಿಯಾರ ತರಿಸಿಕ್ಕೊಂಡರೆ ರೂ ೩೮. (,,)
ಆರ್ಡರಿನೊಂದಿಗೆ ೧ರಿಂದ ೧೦ರ ವರೆಗೆ ಯಾವದಾದರೂ
ಒಂದು ಅಂಕೆಯನ್ನು ಬರೆದರೆ ಗಡಿಯಾರದೊಂಬಿಗೆ ಆ ಅಂಕೆಗೆ
ಇಟ್ಟಿರುವ ಬಹುಮಾನವನ್ನು ಕಳುಹಿಸುವೆವು. ಪ್ರತಿಯೊಂದು
ಅಂಕೆಗೂ ಒಂದೊಂದು ಬಹುಮಾನವಿದ್ದೇ ಇದೆ.
ಪತ್ರವ್ಯವಹಾರವೆಲ್ಲ ಇಂಗ್ಲೀಷಿನಲ್ಲೇ

THE DILAWAR WATCH COY (34)
Bhuleswar, Bombay.

ಮುಂಬಯಿಯಂಥ ಗಡಬಿಡಿಯ ವ್ಯಾಪಾರಿ ಪಟ್ಟಣದಲ್ಲಿ ಮೋಸಗಾರಿಕೆಯು ಬಹಳ! ಆದ್ದರಿಂದ

ಸುಪ್ರಸಿದ್ಧ ಜವಳೀ ವ್ಯಾಪಾರಿಗಳು

ಆಠವಲೆ ಶಾಹಡೆ ಮತ್ತು ಕಂಪನಿ

ಸಿನಿಮಾ ಮೆಜೆಸ್ಟಿಕ್ ಎದುರಿಗೆ—ಗಿರಗಾಂವು—ಮುಂಬಯಿ

ಇವರಲ್ಲಿ ಒಳ್ಳೆ. ಅಂದರೆ ಸ್ತ್ರೀಯರಿಗೆ, ಪುರುಷರಿಗೆ ಮತ್ತು ಮಕ್ಕಳಿಗೋಸ್ಕರ ಬೇಕಾದ ಬೆಲೆಯುಳ್ಳ ಹಾಗೂ ಅಗ್ಗವಾದ ನೂಲಿನ, ರೇಶಿಮೆಯ, ಜರಿಯೆ, ಮುಂತಾದ ಎಲ್ಲಾತರದ ಜವಳಿಸರಕುಗಳು ಒಂದೆಡೆಯಲ್ಲಿಯೇ ಪಾತ್ರಿದಾಯಕವಾಗಿ ಯೋಗ್ಯಬೆಲೆಗೆ ದೊರೆಯುವುವು.

ಪರಸ್ಥಳದ ಗಿರಾಕಿಗಳು ಬೇಡಿಕೆಯಕೂಡ ¼ ಹಣವನ್ನು ಮುಂಗಡವಾಗಿ ಕಳುಹಿಸಬೇಕು.

ಸಿದ್ಧಕಲ್ಪಮಕರಧ್ವಜ

ಸಿದ್ಧಕಲ್ಪಮಕರಧ್ವಜ

ಸಿದ್ಧಕಲ್ಪ ಮಕರಧ್ವಜ

ಮಾನವ ಶರೀರದ ಸಮಸ್ತ ವ್ಯಾಧಿಗೂ ಒಂದೇ ಔಷಧ.

ಎಂಥ ಪಿಂಗಳೊಳಗಾಗಿ ಎಂತಹ ಹಳೆಯ ವ್ಯಾಧಿಯಾದರೂ ನಿವಾರಣೆಯಾಗಿ

ತಯಾರಿಸುವವರು :

ಮದರಾಸ್ ಆಯುರ್ವೇದಿ ಫಾರ್ಮಸಿ
(ಲಿಮಿಟೆಡ್)
ಮದರಾಸು.

ಮೈಸೂರು ಸರ್ಕಾರದ ವಿಷಯವು

ಬೆಂಗಳೂರ್ ಕಂಟೋನ್ಮೆಂಟ್
ಬೇಕಿ ಮಾರಾಟಕ್ಕೆ ಇದೆ

ಅಮೂಲ್ಯವಾದ
ಸಕಲಕಲಾ ವಲ್ಲಭ ದರ್ಬಾರಿನಲ್ಲಿ
ರಜತ ಪದಕವನ್ನು ಪಡೆದ
ಸ್ಟ್ಯಾಂಡರ್ಡ್ ಕಾಫಿಪುಡಿ

ಎಲೆಕ್ಟ್ರಿಕ್ ಮಷೀನ್‌ನಲ್ಲಿ ಪುಡಿಮಾಡಿ
ಶುದ್ಧವಾದ ಅತಿ ಮನೋಹರವಾದ ಪರಿಮಳವು
ಇದ್ದು, ಪರಿಶುದ್ಧವಾಗಿರುವುದು.

ಹೆಚ್. ಭೀಮರಾವ್,
ದಿ ಸ್ಟ್ಯಾಂಡರ್ಡ್ ಕಾಫಿ ಕಂಪನಿ,
ಚಿಕ್ಕಪೇಟೆ, — — ಬೆಂಗಳೂರು ಸಿಟಿ.

ದಿ ರಿಲೈಯನ್ಸ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್, ಮದ್ರಾಸು.

ಸಮಾಜದ ಸಂಪತ್ತಿನ ಕುಂದುಗಳ ನಿವಾರಣೆಗೆ ಸುಲಭಸಾಧನವಾದ ಲೈಫ್ ಇನ್ಷೂರೆನ್ಸ್ ಪಾಲಿಸಿಯ ಅರ್ಥಸಾಧನೆಯ ವಿಷಯದಲ್ಲಿ ಮಾರ್ಗವಾಗಿ ಈ ಕಂಪನಿಯ ಪ್ರಾಂತೀಯ ಮ್ಯಾನೇಜರ್ ಮಿ. ಎಸ್. ಸಿ. ಸಿಂಗ್ ಅವರು ಪ್ರೀಮಿಯಂ ದರವು ಕಮ್ಮಿ, ಆಡಳಿತದ ಖರ್ಚು ಬಹು ಮಿತ, ಕ್ಲೈಮ್‌ಗಳು ಬಂದಾಗ ಬೋನಸ್‌ಗಳನ್ನು ಹೆಚ್ಚಿಸಿರುವ ಪದ್ಧತಿಗಳು. ವಿಮೇದಾರರು ತಮ್ಮ ಪರವಾಗಿ ಕಾರ್ಯನಿರ್ವಾಹಕಮಂಡಲಿಗೆ ಸದಸ್ಯರನ್ನು ಆರಿಸಿ ಕಳಿಸಿಕೊಡುವ ಪದ್ಧತಿ ಮಾಡಲು ಒಬ್ಬ ಆಡಿದರನ್ನೂ ಚುನಾಯಿಸುವ ಹಕ್ಕಿರುತ್ತದೆ

ದಿ ರಿಲೈಯನ್ಸ್ ಅಷ್ಯೂರೆನ್ಸ್ ಕಂಪೆನಿಯ ಮ್ಯಾನೇಜಿಂಗ್ ಏಜೆಂಟರಿಗೆ :—

ಗತಿಸಿದ ನಮ್ಮ ಯಜಮಾನರು ನಡಹಳ್ಳಿ ಈರೇಗೌಡರ ಮಕ್ಕಳಾ ಒಪ್ಪಗೌಡರು ನಿಮ್ಮ ಕಂಪೆನಿಯಲ್ಲಿ ಮಾಡಿದ ಪಾಲಸಿ ನಂ. ಲಕ್ಷರ ಬಾಬ್ತು ರೂ. ೧೦೦೦೦ ಕ್ಕೆ ಮೈಸೂರ್ ಬ್ರಾಂಚ್ ಡಕ್ಕ ನಂ. A ಲಿಳಿಗೆ ಸಂದಾಯವಾಗಿತ್ತು. ಈ ಪಾಲಸಿ ಮೇಲ್ಲ ಪ್ರೀಮಿಯಂ ರೂ. ೧೧೮೦-೦-೦ಗೆ ಮೊತ್ತ ಸಂದಾಯವಾಗಿತ್ತು. ನಮಗೆ ಬೇಕಾಗುವ ಎಷ್ಟೂ ಫಾರಂಗಳನ್ನು ಹಾರ್ಪಾಡಿಸಿಕೊಡಬೇಕೆ ಮೇಲ್ಕಂಡ ಹಣ ರೂ. ೧೧೮೦-೦-೦ನ್ನು ನಾವು ಕಳಿಸಿಕೊಡುವೆವು. ನಿಮ್ಮ ಕಂಪೆನಿಗೆ ನಾವು ಬಹಳ ಋಣಿಯಾಗಿರುವೆವು

ಸಲ್ಲೋಪರ. ಸಹಿ ರಾಮಮ್ಮ.

ತಿರುಪತಿ ಬಲಿಜ ಅಂಡ್ ಕೊಮಟಿ ಮ್ಯಾಟ್ರಿಮೋನಿಯಲ್ ಬ್ಯೂರೋ, ಬೆಂಗಳೂರು ಸಿಟಿ

ಕೇಸರಿಯವರ

ಲೋಕವಿಖ್ಯಾತವಾದ ಲೋಧ್ರದ ಮರಿಮೆ

ಸ್ತ್ರೀಯರ ಗರ್ಭಾಶಯ ರೋಗಗಳಿಗೆ ವಜ್ರಾಯುಧವು! ಋತುಶೂಲೆ, ಕುಸುಮರೋಗ, ಮೂರ್ಛೆರೋಗ, ಅಸ್ರಸ್ರಾವ, ಬಂಜೆತನ, ಸೋಮರೋಗ, ಜರ್ಮ್‌ವ್ಯಾಧಿಗಳು, ಅಜೀರ್ಣ, ಕೀಲುನೋವು, ಬಲಹೀನತೆ, ತಲೆನೋವು, ಮಲಬದ್ಧತೆ, ಪಿತ್ತಜ್ವರ, ಶೋಭೆ, ಹೊಟ್ಟೆಯಲ್ಲಿ ಉರಿ, ಆಯಾಸ, ವಾಂತಿ ತಲೆ ತಿರುಗುವುದು, ದೃಷ್ಟಿ ಮಾಂದ್ಯ ಮೊದಲಾದವುಗಳೆಲ್ಲವೂ "ಲೋಧ್ರ" ದ ಸೇವನೆಯಿಂದ ನಿಸ್ಸಂದೇಹವಾಗಿ ಗುಣವಾಗುವುವು!! ಸಾವಿರಾರು ಯೋಗ್ಯತಾಪತ್ರಿಕೆಗಳೂ ಸುವರ್ಣಪದಕಗಳೂ ದೊರೆತಿವೆ. ಕೆಲವು ಅಭಿಪ್ರಾಯಗಳು :—

(೧) ಶ್ರೀ. ಯಂ. ಸುಬ್ಬರಾವ್, ರಿಜಸ್ಟ್ರೇಷನ್ ಹೆಡ್‌ಕ್ಲಾರ್ಕ್, ಕಾರ್ಕಾನಹಳ್ಳಿ :—ನನ್ನ ಪತ್ನಿಯು ಬಹಿಷ್ಠೆಯಾದ ಕಾಲದಲ್ಲಿ ಮಹಾ ಭಯಂಕರವಾದ ಹೊಟ್ಟೆಶೂಲೆಯಿಂದ ೪—೬ ದಿನಗಳು ಜ್ಞಾನವಿಲ್ಲದೆ ಬಹಳ ತೊಂದರೆಯನ್ನನುಭವಿಸುತ್ತಿದ್ದಳು. ಇದಕ್ಕಾಗಿ ತೆಗೆದುಕೊಂಡ ಅನೇಕ ಘನವಂತಿರುಗಳ ಔಷಧಿಗಳು ಪ್ರಯೋಜನಕಾರಿಯಾಗಲಿಲ್ಲ. ೧೩ ವರುಷಗಳಿಂದ ಈ ಬಾಧೆಯು "ಲೋಧ್ರ" ದ ೨ ಬಾಟ್ಲುಗಳನ್ನು ಉಪಯೋಗಿಸಿದ ಸ್ವಲ್ಪ ದಿನಗಳಲ್ಲೇ ಗರ್ಭಾಶಯರೋಗಗಳೆಲ್ಲವೂ ಗುಣವಾದುವಲ್ಲದೆ ಗರ್ಭಿಣಿಯಾಗಿ ಸುಪ್ರಸವವಾಗಿ ಆರೋಗ್ಯವಾಗಿರುವ ವಿಷಯವನ್ನು ತಿಳಿಸಲು ಹರ್ಷಿಸುತ್ತೇನೆ. ಗರ್ಭಿಣಿಯಾಗುವ ನಂಬಿಕೆಯೇ ಇರಲಿಲ್ಲ. ಇಂಥಾ ದಿವ್ಯೌಷಧವನ್ನು ಗರ್ಭಾಶಯರೋಗವನ್ನನುಭವಿಸುವವರು ಸೇವಿಸಿದರೆ ಸಂತಾನವಾಗುವುದು ಹೊಂದ ಒಹುದೆಂದು ಧೈರ್ಯವಾಗಿ ಹೇಳುತ್ತೇನೆ.

(೨) ಶ್ರೀ ಯಂ. ನರಸಿಂಹಮೂರ್ತಿ, ಮೈಸೂರು ಮಿಶ್ಸ್, ಬೆಂಗಳೂರು :—ತೀವ್ರವಾದ ಹೊಟ್ಟೆನೋವಿನಿಂದ ಬಹಳ ಬಾಟ್ಲಿ ಲೋಧ್ರದಿಂದ ನಿವಾರಣೆಯಾಯ್ತು. ನನ್ನ ಹೆಂಡತಿಯು ಸುಮಾರು ಇಪ್ಪತ್ತು ವರ್ಷಗಳಿಂದಲೂ ಬಹಳ ಕಾಯಿಲೆಯಿಂದ ನೋವನ್ನು ಪಡುತ್ತಾ ಇದ್ದಳು. ಅಲ್ಲದೆ ಈವರಿವಿಗೂ ನಿವಾರಣೆಯಾಗದೆ ಇದ್ದದ್ದು ಈಗ್ಗೆ ಎರಡು ವರ್ಷಗಳ ಕೆಳಗೆ ನನ್ನ ಸ್ನೇಹಿತರೊಬ್ಬರು ಈ ಔಷಧವನ್ನು ಉಪಯೋಗಿಸುವಂತೆಯೇ ಹೇಳಿದರು. ಆದರೂ ನನಗೆ ನಂಬಿಕೆಯಿಲ್ಲದೆ ಕೊಟ್ಟೆನು. ಎಂದು ಬಾಟ್ಲಿ ಲೋಧ್ರದಿಂದ ಸ್ವಲ್ಪ ಹೊಟ್ಟೆನೋವು ನಿಂತು. ಪುನಃ ಇನ್ನೊಂದು ಬಾಟ್ಲಿಯಿಂದ ಪೂರ್ಣ ಗುಣಹೊಂದಿ ಈಗ ಗರ್ಭಿಣಿಯಾಗಿ ಎಂದು ಕನ್ಯಾರತ್ನವನ್ನು ಹೆತ್ತಳು. ನನ್ನ ಅನುಭವದಲ್ಲಿ ಇದಕ್ಕಿಂತ ಉತ್ತಮವಾದ ಔಷಧಿ ಸ್ತ್ರೀಯರಿಗೆ ಇಲ್ಲವೆಂದು ಮನಃಪೂರ್ವಕವಾಗಿ ಹೇಳುತ್ತೇನೆ. ಸ್ತ್ರೀಯರಿಗೆ ಇದು ಅಮೃತಪ್ರಾಯವಾಗಿದೆ.

ಬೆಲೆ: ೧೨ ಔನ್ಸಿನ ದೊಡ್ಡ ಶೀಸೆ ೧ಕ್ಕೆ ರೂ. ೩—೦—೦; ಒಂದೊಂದು ಚಿಕ್ಕ ಶೀಸೆ ೧ಕ್ಕೆ ೧—೦—೦; ಪಾರ್ಸೆಲ್ ಖರ್ಚು ಪ್ರತ್ಯೇಕ.
ನೂರಾರು ದಿವ್ಯೌಷಧಗಳುಳ್ಳ ನಮ್ಮ ಕ್ಯಾಟಲಾಗ್ ಉಚಿತವಾಗಿ ಕಳಿಸಲ್ಪಡುವುದು.

ಈ ಔಷಧಗಳು ಎಲ್ಲಾ ಔಷಧಾಲಯಗಳಲ್ಲಿಯೂ ದೊರೆಯುತ್ತವೆ.

ವಿಳಾಸ:— ಕೇಸರೀ ಕುಟೀರಂ-ಆಯುರ್ವೇದ ಔಷಧಶಾಲಾ, ಎಗ್ಮೋರ್

ಬೆಂಗಳೂರು ಬ್ರಾಂಚ್ :— ೧೯, ಬಳೇಪೇಟೆ, ಬೆಂಗಳೂರು

ಬೆಂಗಳೂರು ಸಿಟಿ ಚಾಮರಾಜಪೇಟೆ ಶ್ರೀ ಲಕ್ಷ್ಮೀನರಸಿಂಹ ಮುದ್ರಣಾಲಯದಲ್ಲಿ ಸಂಪಾದಕರವರಿಗಾ

13691

ವಿಶ್ವಕರ್ಣಾಟಕ

ಪ್ರತಿ ಭಾನುವಾರವೂ ಬೆಂಗಳೂರು ನಗರದಲ್ಲಿ ಹೊರಡುವ ರಾಷ್ಟ್ರೀಯ ವಾರ ಪತ್ರಿಕೆ

ಬಿಡಿ ಪತ್ರಿಕೆ ೦—೧—೦ ಸಂಪಾದಕ—ತಿರುಮಲೆ ಶಾಸ್ತ್ರಾಚಾರ್ಯಶರ್ಮ ವಾರ್ಷಿಕಚಂದಾ ರೂ. ೩—೦—೦

ವರ್ಷ ೬ ಬೆಂಗಳೂರು ನಗರ—ಸೆಪ್ಟಂಬರ್ ೨೩ನೇ ಭಾನುವಾರ ೧೯೨೮ [೫೦

ವಿಶ್ವೇಶ್ವರಯ್ಯ ಸಮಿತಿಯ ಕಾರ್ಯಕಲಾಪ

ಪಂಗಡಗಳ ಬಲಾಬಲ

ಖಾನರಮನೆ ಮಹಡಿಯಿಂದ ಗುಂಡುಗಳು ಬಂದವು!

ಹೆಡ್ ಆಫೀಸ್ :— ಮದರಾಸ್

ಆಂಧ್ರ ಆಯುರ್ವೇದ ಫಾರ್ಮಸಿ (ಲಿಮಿಟೆಡ್)

ಬ್ರಾಂಚ್ ಆಫೀಸ್ :— ಬೆಂಗಳೂರು ಸಿಟಿ

ಚ್ಯವನಪ್ರಾಶ್ಯರಸಾಯನ

ಇದು ಸರ್ವೋತ್ಕೃಷ್ಟವಾದ ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧವಾಗಿರುವುದರಿಂದ ಇದರ ಸೇವನೆಯು ಕೆಮ್ಮು, ಉಬ್ಬಸ, ಧಾತುಕ್ಷಯ, ಒಳಜ್ವರ, ಹೃದಯ ಮತ್ತು ಶ್ವಾಸಕೋಶದ ವಿಕಾರ, ಸ್ವಪ್ನೇಂದ್ರಿಯ ಮೊದಲಾದ ಅನೇಕ ರೋಗಗಳನ್ನು ಗುಣಪಡಿಸುವುದಲ್ಲದೆ, ಸ್ತ್ರೀ ಬಾಲರಾದಿಯಾಗಿ ಎಲ್ಲರಿಗೂ ಉತ್ತಮಶಕ್ತಿವರ್ಧಕ(ಟಾನಿಕ್)ಔಷಧವಾಗಿಯೂ ಇದೆ. ಕ್ರಯ ೧೦ ತೊಳೆಗೆ ರೂ. ೧, ೪೦ ತೊ. ರೂ. ೩.

ಸಿದ್ಧ ಮಕರಧ್ವಜ

ಇದು ಸುವರ್ಣ, ಕಸ್ತೂರಿ ಮೊದಲಾದ ಅಮೂಲ್ಯ ವಸ್ತುಗಳಿಂದ ಸಿದ್ಧಮಾಡಲ್ಪಟ್ಟ ರಸಾಯನ ಮತ್ತು ವಾಜೀಕರಣಶಕ್ತಿಯುಳ್ಳ ಔಷಧಗಳಲ್ಲಿ ಅತ್ಯುತ್ತಮವಾದದ್ದರಿಂದ ಸಮಸ್ತ ರೋಗಗಳನ್ನೂ ನಾಶ ಮಾಡಿ, ಪುಂಸ್ತ್ವಶಕ್ತಿ, ಜ್ಞಾಪಕಶಕ್ತಿ, ಕಾಂತಿ, ವೀರ್ಯ ಬಲಪ್ರದವಾಗಿರುತ್ತದೆ. ಕ್ರಯ ಬಾಟ್ಲಿಗೆ ರೂ. ೫.

ಚಂದನಾದಿ ವಟಿ

ಈ ಮಾತ್ರೆಯು (ಗನೋರಿಯಾ) ಮೂಯಮೇಹ, ಉರಿಮೂತ್ರ, ಮೂತ್ರಕೋಶ ಮತ್ತು ಮೂತ್ರ ದ್ವಾರದ ವ್ರಣ, ಕೀವು ಬರುವುದು ಮೊದಲಾದ ವಿಕಾರಗಳನ್ನು ಗುಣಪಡಿಸುವುದರಲ್ಲಿ ಅನುಭವಸಿದ್ಧವಾದ ಔಷಧವಾಗಿದೆ. ಕ್ರಯ ೧ ಬಾಟ್ಲಿಗೆ ರೂ. ೧.

ವಿ. ಸೂ—ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲಾ ಔಷಧಗಳೂ ಸುಲಭ ಕ್ರಯಕ್ಕೆ ಸಿಕ್ಕುವುದಲ್ಲದೆ, ರೋಗಿಗಳು ರೋಗದ ಲಕ್ಷಣವನ್ನು ವಿಶದವಾಗಿ ತಿಳಿಯಪಡಿಸಿದರೆ ತಕ್ಕ ಚಿಕಿತ್ಸಾ ಕ್ರಮವನ್ನು ಸೂಚಿಸಿ, ಬೇಕಾದ ಔಷಧಗಳನ್ನು ಕಳುಹಿಸಿಕೊಡುತ್ತೇವೆ. ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿರಿ.

ಆಯುರ್ವೇದ ಭೂಷಣ ವಿಶಾರದ, **ಡಾ. ಕೆ. ನಾರಾಯಣರಾವ್**, ಎ.ಎಂ., ಎ.ಸಿ.,

ಆಂಧ್ರ ಆಯುರ್ವೇದ ಫಾರ್ಮಸಿ, ೬೬, ಚಿಕ್ಕಪೇಟೆ, ಬೆಂಗಳೂರು ಸಿಟಿ

ಟಿಲಿಗ್ರಾಂ :—"ಮಿಷನೆರಿ," ಬೆಂಗಳೂರು. ಗ್ಯಾರಂಟಿ ಮಾಲು !!

ಮ ದು ರೆ ಕ ಬ್ಬಿ ನ ಗಾ ಣ

ಸ್ಥಾಪಿತವಾದದ್ದು 1900. ಬೆಲೆ ಸುಲಭ !!!



ಮೈಸೂರು ಸರ್ಕಾರದ ವ್ಯವಸಾಯದ ಇಲಾಖೆಯಿಂದಲೂ, ವ್ಯವಸಾಯದ ಸೊಸೈಟಿಗಳಿಂದಲೂ, ಅನುಭವಶಾಲಿಗಳಾದ ರೈತರುಗಳಿಂದಲೂ ಅತ್ಯುತ್ತಮವಾದುದೆಂದು ಹೆಸರು ಪಡೆದಿರುವ ಮತ್ತು 1926ನೇ ಇಸವಿಯಲ್ಲಿ ಬೆಂಗಳೂರಿನಲ್ಲಿ ನಡೆದ

ಇಂಡಸ್ಟ್ರಿಯಲ್ ಮತ್ತು ಅಗ್ರಿಕಲರಲ್ ಎಗ್ಸಿಬಿಷನ್ನಲ್ಲಿ

ಭಂಗಾರದ ಮೆಡಲನ್ನು ಪಡೆದಿರುವ **ಮದುರೆ ಕಬ್ಬಿನ ಗಾಣ**ವನ್ನು ಉಪಯೋಗಿಸಿ.

ಇದರ ಶ್ಲಾಘನೀಯವಾದ ಗುಣಗಳು :— ಸಾಧಾರಣವಾದ ಎತ್ತುಗಳು ಸುಲಭವಾಗಿ ಎಳೆಯಬಲ್ಲವು ; ಹೆಚ್ಚು ಹಾಲನ್ನು ಹಿಂಡುತ್ತದೆ ; ಎಣ್ಣೆ ಹಾಕುವುದಕ್ಕೆ ಅನುಕೂಲವಾದ ಏರ್ಪಾಟು ಮಾಡಿದೆ ; ಇದರ ಚಿಲ್ಲರೆ ಭಾಗಗಳು ನಮ್ಮಲ್ಲಿ ಯಾವಾಗಲೂ ದೊರೆಯುತ್ತವೆ.

ನಮ್ಮಲ್ಲಿ ಕಬ್ಬಿನ ಗಾಣಗಳೂ, ಮೋಟಾರುಕಾರಿನ ಭಾಗಗಳೂ, ಕಟ್‌ಗಿಯರುಗಳೂ, ಗಿಯರ್‌ಬಾಕ್ಸ್‌ಗಳೂ, ಎರಕದ ತಿರುಗಣೆ ಮೆಟ್ಟುಗಳೂ, ಗೇಟುಗಳೂ, ರೈಲಿಂಗ್ಸುಗಳೂ ಮತ್ತು ಅನೇಕತರಹ ಮಿಷನರಿ ಸಾಮಾನುಗಳೂ ತಯಾರಿಸಲ್ಪಡುತ್ತವೆ.

ಹೆಚ್ಚು ಸಂಗತಿಗಳಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ :—

ಪಿ. ಎಂ. ಮದುರೆ ಮೊದಲಿಯಾರ್ ಅಂಡ್ ಸನ್ಸ್,

ಕಬ್ಬಿಣದ ಕಾರ್ಖಾನೆ, ಹೊಸತರಗುಪೇಟೆ, ಬೆಂಗಳೂರು ಸಿಟಿ

"ನನಗೆ ಮಕ್ಕಳಿವೆ, ಮೊಮ್ಮಕ್ಕಳಿವೆ ಆದರೆ ಒಂದು ಚರಕವು ನನ್ನ ಜೀವನವನ್ನು ನಡೆಸುವಷ್ಟು ಆವರೊಬ್ಬರೂ ನಡೆಸಲಾರರು" ಎಂದು ಆಂಧ್ರ ದೇಶದ ಕಣ್ಣಿಲ್ಲದ ಮುದುಕಿಯೊಬ್ಬಳು ನಾಡುತ್ತಿರುವಳು

ಖಾದಿ ಬಡವರ ನಿಧಿ

ಉಡುಪನ್ನು ಕೊಳ್ಳಲು ಎಲ್ಲರಲ್ಲಿಯೂ ಹಣವಿದೆ. ಪರದೇಶದ ಮತ್ತು ಮಿಲ್ಲು ಬಟ್ಟೆಗಳ ಮೋಹದ ಪೆಡಂಭೂತ ದೇಶಾದ್ಯಂತ ನಮ್ಮ ಮಾತೃಭೂಮಿಯಲ್ಲಿ ಕೋಟಿಗುತ್ತಿರುವ ದೀನ ಕೆಲಸಗಾರರನ್ನು ವಂಚಿಸಿ, ಪ್ರತಿವರ್ಷವೂ ಅಪಾರವಾದ ಕೋಟಿ ರೂಪಾಯಿಗಳನ್ನು ವಿದೇಶೀಯರ ಬೊಕ್ಕಸಗಳ ಪರ್ತಿಗಾಗಿ ಹೆಚ್ಚುವುದೆ ?

ಇಲ್ಲವೆ

ಸ್ವದೇಶದ ಸ್ವಾತಂತ್ರ್ಯದ ಮೇಲೆ ಸಂಪೂರ್ಣ ದೃಷ್ಟಿಯಿಟ್ಟು
ಖಾದಿಯನ್ನೇ ಕೊಳ್ಳುವುದರ ಮೂಲಕ ಬಡವರ
ಉದ್ಧಾರವನ್ನು ಕೈಕೊಳ್ಳುವುದೇ?

ಭರತವರ್ಷದ ದಾರಿದ್ರ್ಯವನ್ನು ಮನಗಂಡಿರುವವರಿಗೆ ಖಾದಿಯೇ ಸರ್ವೋತ್ಕೃಷ್ಟವಾದ ಹೊದಿಕೆ.

ಅಂಥವರಿಗೆ ಖಾದಿ ಬಟ್ಟೆಯೇ ಶ್ರೇಷ್ಠ. ಖಾದಿಯೇ ಅಗ್ಗ.

ಹಬ್ಬ ಹುಣ್ಣಿಮೆಗಳಲ್ಲಿಯೂ ಮದುವೆ ಮುಂಜಿಗಳಲ್ಲಿಯೂ ಖಾದಿಯನ್ನೇ ಉಪಯೋಗಿಸುವ.

ನೋಡಿ! ಒಂದು ರೂಪಾಯಿಗಳನ್ನು ಕೊಟ್ಟು ಖಾದಿಯನ್ನು ಕೊಂಡರೆ ಏನಾಗುವುದು! ನೋಡಿ!

ಮೈಸೂರು ಸರ್ಕಾರದವರಿಂದ

ಬದನವಾಳ

ನೂಲುವ ಪ್ರಾಂತದಲ್ಲಿ

ತಯಾರಾದ ಖಾದಿ ಒಟ್ಟೆಗಳು.

ಟವಲುಗಳು, ಹಚ್ಚಡಗಳು, ಅಂಗವಸ್ತ್ರಗಳು, ಷರಟು ಬಟ್ಟೆಗಳು, ಕೋಟುಬಟ್ಟೆ ಎಲ್ಲವೂ ಬಿಕರಿಗೆ ಸಿದ್ಧವಾಗಿವೆ.

ದರಗಳು :

36" ಅಗಲ ಷರಟು ಬಟ್ಟೆ, 4 ಷರಟುಗಳಿಗೆ ಆಗುವಷ್ಟು 10 ಗಜ ವನ್ನುಳ್ಳ ಒಂದು ಥಾನಿನ ಬೆಲೆ ರೂ. 5

28×2½ ಮೊಳ ಉದ್ದ ಟವಲುಗಳು ಒಂದಕ್ಕೆ ಆ. 9

28×3¼ ಮೊ. ಟ. ಒಂದಕ್ಕೆ ಆ. 12

36×5 ಮೊಳ ಅಂಗವಸ್ತ್ರ (ಸರಳ ಸ್ವಲ್ಪವೇ ಇದೆ) 1ಕ್ಕೆ ರೂ. 1-4-0

— ತಿರುಗಿ ನೋಡಿರಿ —



ವಿದ್ಯಾರ್ಥಿಗಳ ಪಂಚೆಗಳು :

50'X4 ಮೊಳ, 1ಕ್ಕೆ ರೂ. 1-6-0

45' 4 ,, ,, ,, 1-4-0

2
8'×2½,, ಟವಲು ,, ,, 0-8-6

ಅಂದವಾದ ಅಚ್ಚಿನ ಅಂಚಿನವು :

50'×4 ಮೊಳ 1ಕ್ಕೆ ರೂ. 1-7-0

45'×4 ,, ,, ,, 1-5-0

30'×3 ,, ಟವಲು ,, 0-10-6

ಗಟ್ಟಿ ಜಂಖಾನೆಗಳೂ, ಗಟ್ಟಿ ಬಣ್ಣದ ಸೀರೆಗಳೂ, ರಾಜವಾಕ್ಯದ ಮತ್ತು ಅಂಚಿನ ಶಿಳ್ಳಾಪು ಪಂಚೆಗಳೂ, ಪೇಟಾಗಳೂ, ವಲ್ಲಿಗಳೂ, ಕರವಸ್ತ್ರಗಳೂ ಇವೆ.

ಪತ್ರಗಳ ಆರ್ಡರುಗಳಿಗೆ ಶೇಕಡ ೨೫. ಮುಂಗಡವಿಲ್ಲದೆ ವಿ. ಪಿ. ರವಾನಿಸಲಾಗದು. ಆಕರ್ಷಣೆಗಳನ್ನು ಕಳುಹಿಸಿದಲ್ಲಿ ಕೋಟು ಷರಟುಗಳನ್ನು ಹೊಲಿಸಿಯೇ ಕಳುಹಿಸುವೆವು. ಒಂದು ಜಾತಿ ಬಟ್ಟೆಗೆ ಕಡಿಮೆ ಇಲ್ಲದೆ ಕೊಳ್ಳುವ ವ್ಯಾಪಾರಸ್ಥರಿಗೆ ರೂಪಾಯಿಗೆ ಅರ್ಧಾಣೆ ರಿಯಾಯಿತಿ. ಬಟ್ಟೆಗಳ ಮಾದರಿ ಪುಸ್ತಕಕ್ಕೆ ಅರ್ಧಾಣೆ ತಲೆಚೀಟಿ ಕಳುಹಿಸಬೇಕು.

ಈಗತಾನೆ ಹೊಸ ಸರಕು ಬಂದಿಳಿದಿದೆ.

ಖಾದಿ ವಸ್ತ್ರಾಲಯ, ಕೋಟೆ, ಬೆಂಗಳೂರು ಸಿಟಿ

ವಿಕ್ಟರಕರ್ಣಾಟಕ

ದಾವಣಗೆರೆಯಲ್ಲಿ
ಹಿಂದೂ ಮಹಮ್ಮದೀಯ ಮಾರಾಮಾರಿ
ಗಣಪತಿ ಮತ್ತು ಮಹಾರಾಜರ ಪಟವನ್ನೊಳಗೊಂಡ
ಪಲ್ಲಕ್ಕಿಯು ಸುಟ್ಟು, ಬೂದಿಯಾಯಿತು!

ಶುಕ್ರವಾರ ರಾತ್ರಿ ದಾವಣಗರಯಲ್ಲಿ ಶ್ರೀ ಗಣೇಶನ ಪಲ್ಲಕ್ಕಿ ಉತ್ಸವವು ಬಿರುಗಳಿ ವಾದ್ಯಗಳೊಂದಿಗೆ ಹೊರಟಿತು. ಮಸೀದಿಯ ಬಳಿ ಮುಸಲ್ಮಾನರು ಮೆರವಣಿಗೆಯ ಮೇಲೆ ಬಿದ್ದು, ದೊಣ್ಣೆ, ಜೋಡು ಕಲ್ಲುಗಳಿಂದ ಹಿಂದುಗಳನ್ನು ಹೊಡೆದರು. ಸುಮಾರು ೪೦ ಮಂದಿ ಹಿಂದುಗಳಿಗೆ ಗಾಯವಾಗಿದೆ. ಇಬ್ಬರು ಹಿಂದೂ ಹುಡುಗರ ಪತ್ತೆಯೇ ಇಲ್ಲ. ಪಲ್ಲಕ್ಕಿಯಲ್ಲಿ ಶ್ರೀ ಗಣೇಶಮೂರ್ತಿಯೂ, ಶ್ರೀಮನ್ಮಹಾರಾಜರ ಚಿತ್ರಪಟವೂ ಇತ್ತು. ಮುಸಲ್ಮಾನರು ಪಲ್ಲಕ್ಕಿಯನ್ನು ಹಿಡಿದು, ಸುಟ್ಟು ಬೂದಿಮಾಡಿದರು. ಪೋಲೀಸು ರಕ್ಷಣೆಯು ಅಷ್ಟು ಸಮರ್ಪಕವಾಗಿರಲಿಲ್ಲ.

(ಶ್ರೀ ಎಂ. ವೀರಪ್ಪನವರು ಈ ಸುದ್ದಿಯನ್ನು ನಮಗೆ ಶಂತಿಯ ಮೂಲಕ ತಿಳಿಸಿರುವರು)

ಸಂಪಾದಕೀಯ ಸೂಚನೆಗಳು

ಜಭಕ್ತಿಪ್ರದರ್ಶನ

ಪ್ರಜಾಸುಖೇ ಸುಖಂ ರಾಜ್ಞಃ ಪ್ರಜಾನಾಂಚ ಹಿತೇ ಹಿತಂ
ನಾತ್ಮಪ್ರಿಯಂ ಹಿತಂ ರಾಜ್ಞಃ ಪ್ರಜಾನಾಂತು ಹಿತಂ ಪ್ರಿಯಂ''

(ರಾಜನ ಸುಖ ಸರ್ವಸ್ವವೂ ಅತನ ಪ್ರಜಾಸುಖದಲ್ಲಿ ಅಡಗಿದೆ. ಪ್ರಜೆಗಳ ಸುಖಾನುಕೂಲಗಳೇ ರಾಜನಸುಖಾನುಕೂಲಗಳು. ರಾಜನಿಗೆ ಪ್ರತ್ಯೇಕವೂ ಸ್ವತಂತ್ರವೂ ಆದ ಸುಖ ಲೇಶವೂ ಇಲ್ಲ.)

ಈ ಶ್ಲೋಕವೊಂದನ್ನು ಹಿರಿಯರೊಬ್ಬರು ನಮಗೆ (ಪೀಠಿಕಾಪೂರ್ವಕವಾಗಿ) ಕಳುಹಿಸಿ

ಮಂಗಳೂರಲ್ಲಿ ನಡೆದ ಅಚಾತುರ್ಯಗಳಿಂದ ನಾಡಿನಲ್ಲಿ ಅಶಾಂತಿಯೋಡಿತು; ಜನರಲ್ಲಿ ಭಯ ಮೂಡಿತು; ಪ್ರಭುತ್ವಯಂತ್ರಸಡಲಿತು; ನೆರಳಿನಂತೆ ಬೆನ್ನು ಹಿಂದೆ ಸುಳಿದಾಡುತ್ತಿದ್ದ ಕೋಮುವಾರು ಪ್ರೇತವು ಪ್ರತಿಭಟಿಸಿನಿಂತು ಜನರ ಹೆಗಲನ್ನೇರಿತು. ಶೋಕ ಸಖವು ಕಾಡುಪಾಲಾಯಿತು. ಇನ್ನು ರಾಜರೆಂತಹ ಸುಖವನ್ನು ಅನುಭವಿಸುತ್ತಿರಬೇಕು? ಈ ವಿಷಕಾಲವಿನ್ನೂ ಎಲ್ಲಿಯವರೆಗೋ ದೇವರೇ ಬಲ್ಲ.''

ಎಂಬದಾಗಿ ಬರೆದಿರುವರು. ಇವರ ಮಾತಿನಲ್ಲಿ ಕೇಳಬರುವ ನಿರಾಶಾಧ್ವನಿಗೆ ಆವರ ವಯಸ್ಸೇ ಕಾರಣವಿರಬಹುದು.

ಈಗ ವಾತಾವರಣವೆಲ್ಲ ಪರಸ್ಪರ ದ್ವೇಷಾಸೂಯೆಗಳಿಂದಲೂ ಸಂಶಯ ಅನುಮಾನಗಳಿಂದಲೂ ತುಂಬಿ ಹೋಗಿರುವುದೇನೋ ನಿಜ. ದುಃಖಕ್ಕೆಲ್ಲ ಇದೇ ಕಾರಣ. ಪ್ರಜಾವರ್ಗದ ಪ್ರತಿಪಂಗಡದವರೂ ಪ್ರಭುವರ್ಗದ ಪ್ರತಿ ಅಂತಸ್ತಿನವರೂ ಮನಸ್ಸುಮಾಡಿದರೆ ಈ ವಾತಾವರಣವನ್ನು ಕ್ಷಣಮಾತ್ರದಲ್ಲಿ ನಿರ್ಮಲ ಮಾಡಿಬಿಡಬಹುದು. ಅದಕ್ಕೆ ಬೇಕಾದುದು ಕೊಂಚ ಸಹ ಸಾಕಾದಷ್ಟುಮಟ್ಟಿಗೆ ಮೇಲೆ ಸೂಚಿಸಿದ ''ನಿರ್ಮಲೀಕಾರಣ''ಕ್ಕೆ ಅನುಕೂಲವಾಗಬಹುದೆಂಬ ಸೂಚನೆಗಳು ಕಾಣಬರುತ್ತಿವೆ.

ಆದರೂ ಹೊರಗೂ ಸಹ ''ರಾಜಭಕ್ತಿ'' ಪ್ರದರ್ಶನಕ್ಕಾಗಿ ಸಭೆಗಳನ್ನು ಹೂಡುವುದರಲ್ಲಿ ತಮ್ಮ ಶಕ್ತಿಯುಕ್ತಿಗಳನ್ನೆಲ್ಲ ಏನಿಯೋಗಮಾಡುತ್ತಿರುವವರೆಲ್ಲರೂ ಸೇರಿ ನಾಡಿನಲ್ಲಿ ನೆಲೆಸಿ ರಾಷ್ಟ್ರಕ್ಷಯಕ್ಕೆ ಮೂಲಕಾರಣವಾಗಿರು ಕೋಮುವಾರು ಪ್ರೇತವನ್ನು ಭೂಗತಮಾಡಲು ಮನಸ್ಸುಮಾಡುವುದು ಉಚಿತವಲ್ಲವೆ? ಹಾಗೆಮಾಡುವುದರಿಂದ ಸಮಾಜವು ಶಾಂತಿಗೊಳ್ಳುತ್ತದೆ. ಆಗ ಶ್ರೀಮನ್ಮಹಾರಾಜರ ಚಿತ್ತವೂ ಪ್ರಸನ್ನವಿತಾನಂದವಾಗುತ್ತದೆ. ಅವರ ಮನೋ ಯಾತನೆಯನ್ನೋಡಿಸಿ, ಅವರಿಗಾನಂದವನ್ನುಂಟುಮಾಡುವ ಕೆಲಸಕ್ಕಿಂತ ಮೇಲಾದುದ್ದೇ ನಾಲ್ಕುಮಂದಿಸೇರಿ ನಾಲಿಗೆಯ ತುದಿಯಲ್ಲಿ 'ರಾಜಭಕ್ತಿಯುತರು ನಾವು' ಅಂದು ಬೀಗುವುದು!

ಇವರಿಗ್ಯೇಕಿಷ್ಟು ವರ್ಣದ್ವೇಷ?

ಭಾರತೀಯರು ಬಡಿದಾಡಿ ಬ್ರಿಟಿಷರಿಂದ ಅಪಹೃತ ಸ್ವಾತಂತ್ರ್ಯವನ್ನು ಕೊಂಚ ಕೊಂಚವಾಗಿ ಕಿತ್ತುಕೊಳ್ಳುತ್ತಿದ್ದಾರೆ. ಈ ಸಂದರ್ಭದಲ್ಲಿ ನರೇಂದ್ರ ಮಂಡಳಕ್ಕೆ ಮಹಾ ಭೀತಿಯುಂಟಾಗಿ, ನೂರಾರು ರಾಜರು ಸೇರಿ, ತಮ್ಮ ಸ್ಥಾನಮಾನಗಳನ್ನು ಬಲಪಡಿಸಿಕೊಳ್ಳುವ ಒಂದೇ ಉದ್ದಿಶ್ಯದಿಂದ, ಚಂದಾ ಎತ್ತಿ.. ಲಕ್ಷಗಟ್ಟಲೆ ಹಣ ಸುರಿದು, ವಿಲಾಯಿತಿಯ ವಕೀಲರ ವಿಪರೀತ ಬುದ್ಧಿಯನ್ನೆಲ್ಲ ವಿನಿಯೋಗ ಮಾಡಿಕೊಳ್ಳುತ್ತಿದ್ದಾರೆ. ಅಷ್ಟೇ ಅಲ್ಲ. ವಿಲಾಯಿತಿಯಲ್ಲಿ ದೊಡ್ಡ ದೊಡ್ಡ ಔತನಗಳನ್ನು ಕೊಡುತ್ತಿದ್ದಾರೆ. ಅಲ್ಲಲ್ಲಿ ಉಪನ್ಯಾಸಗಳನ್ನು ಮಾಡುತ್ತಿದ್ದಾರೆ.

ಆದರೆ ಈ ಚಳವಳಿಯಲ್ಲಿ ಪಾಟಿಯಾಲ ಮಹಾರಾಜನನ್ನು (ಇವರು ನರೇಂದ್ರ ಮಂಡಲದ ನಾಯಕರು) ವಿಚಾರಿಸಿದವರೇ ಇಲ್ಲ. ನೆಹ್ರೂ ಸಮಿತಿಯ ವರದಿಯನ್ನೋದಿ, ಲಕ್ನೋ ಸಮ್ಮೇಳನದ ಸಿದ್ಧಾಂತಗಳನ್ನು ಕೇಳಿ ಈ ಮಹೀಂದ್ರರು ''ಮುಂದಿನ ರಾಜಕೀಯ ವ್ಯವಸ್ಥೆಯಲ್ಲಿ (ಸಂಸ್ಥಾನಿಕರು) ನಾವು ಭಾರತೀಯ ಸರಕಾರಕ್ಕೆ ಅಧೀನರಾಗದಂತೆ ನೋಡಿಕೊಳ್ಳಬೇಕು. ನಾವು ಬ್ರಿಟಿಷ್ ಸಾರ್ವಭೌಮರಿಗೇ ಅಧೀನರೆಂಬುದನ್ನು ಸ್ಥಾಪಿಸಿಕೊಳ್ಳಬೇಕು'' ಅಂದರು. ಈ ಮಾತನ್ನು ಕೇಳಿದ ಕೂಡಲೇ ನಮಗೆ ಕಪ್ಪೆಯೊಂದು ಪ್ರಾಣ ಸಂರಕ್ಷಣೆಗಾಗಿ ಹಾವಿನ ಬುಟ್ಟಿಯನ್ನು ಹೊಗಲು ಪ್ರಯತ್ನಪಟ್ಟ ಕತೆಯು ನೆನಪಿಗೆ ಬರುತ್ತದೆ.

ಇದೇ ಪಾಟಿಯಾಲಾ ಪ್ರಭುಗಳೊಂದಿಗೆ ಕಣ್ಣು ಕೆಂಪಗೆ ಮಾಡಿಕ್ಕೊಂಡು ''ಭರತ ಖಂಡದ ನಕ್ಷೆಯಲ್ಲಿ ಹಳದಿ ಬಣ್ಣ ತೋರಿಸಿರುವ ದೇಶೀಯ ಸಂಸ್ಥಾನಗಳಿಗೆ ಕೆಂಪು ಬಣ್ಣ (ಬ್ರಿಟಿಷ್ ಬಣ್ಣ) ಬಳಿಯುವ ಪ್ರಯತ್ನವನ್ನು ನಾನು ಎಳ್ಳಷ್ಟೂ ಸಹಿಸುವುದಿಲ್ಲ.''

ಅಂದರಂತೆ! ಇವರ ಹಿರಿಯಂತಾದ ರಣಜಿತ ಸಿಂಹರ ಭವಿಷ್ಯದ ಕಥೆಯಷ್ಟು (ಒಂದಿಲ್ಲೊಂದುದಿನ ಭರತ ಖಂಡದ ನಕ್ಷೆಯೆಲ್ಲ ಕೆಂಪಾಗುತ್ತದೆ ಎಂದು ಇವರು ತನ್ನ ಮಗನಿಗೊಮ್ಮೆ ಹೇಳಿದ್ದರು) ಹಿಂದೂ ದೇಶದ ಚರಿತ್ರೆಯಲ್ಲಿ ಓದಿದ್ದು ಈ ಪ್ರಭುಗಳು ಮರೆತು ಹೋದರೇನೂ?

ಭರತ ಖಂಡದಲ್ಲಿ ಶುದ್ಧ ಹಳದಿ ಕ್ಷೇತ್ರವನ್ನೀ ಮಹಾರಾಜರು ನಮಗೆ ತೋರಿಸ ಬಲ್ಲರೆ? ನಾಭಾ ಭರತ ಪುರಗಳ ಬಣ್ಣವೇನು? ಭಾವಲುಪುರ! ಇಂದೂರು ಹೈದರಾಬಾದುಗಳಾವ ಬಣ್ಣಕ್ಕೆ ತಿರುಗುತ್ತಿವೆ? ಹೋಗಲಿ ಈ ವಿಚಿತ್ರ ನೋಡಿ. ಪಾಟಿಯಾಲಾ ಪ್ರಭುಗಳಿಗೆ ಬ್ರಿಟಿಷ್ ಸಾರ್ವಭೌಮರ ಕ್ಷತ್ರಿಯ ನೆರಳುಬೇಕು. ಆದರೆ ಇವರಿಗೆ ಆವರ ಬಣ್ಣ ಮಾತ್ರ ಬೇಡ!! ಅಲ್ಲ ಇವರಿಗೇಕಿಷ್ಟು ವರ್ಣದ್ವೇಷ

ಪಂಗಡಗಳ ಸಂಖ್ಯಾಬಲ

"ಚಿತ್ರಗುಪ್ತ"

ಜುಲೈ ೩೦ನೇ (ಬೆಂಗಳೂರಿನ) ವಿಷಾದ ಪ್ರಸಂಗವನ್ನು ಕುರಿತು ಒಬ್ಬ ಮಿತ್ರರಲ್ಲಿ ಮಾತನಾಡುತ್ತಲಿದ್ದೆ. ಆಗ ಅವರು "ಇದೇನಯ್ಯಾ! ಇಷ್ಟುಮಂದಿ ಹಿಂದುಗಳಿದ್ದೀರಿ; ಅಲ್ಪಸ್ವಲ್ಪ ಮಂದಿ ಮುಸಲ್ಮಾನರಿಗೆ ಹೀಗೆ ಹೆದರಬೇಕೆ" ಎಂಬದಾಗಿ ಹೇಳಿ ತಮ್ಮ ಆಶ್ಚರ್ಯವನ್ನು ಸೂಚಿಸಿದರು. ಆಕ್ಷಣದಲ್ಲಿ ಹಿಂದುಗಳ ವಿಚಾರದಲ್ಲಿ ಅವನ ಮನಸ್ಸಿನಲ್ಲಿ ಏನು ಅನ್ನಿಸಿರಬಹುದೆಂಬುದನ್ನೂ ನಾನು ಕೊಂಜಮಟ್ಟಿಗೆ ಊಹಿಸಿದೆ. ಅವರು ಬಾಯಲ್ಲಿ ಅದನ್ನು ಹೇಳಿ ನನ್ನ ಮನಸ್ಸನ್ನು ನೋಯಿಸುವಷ್ಟು ಧೂರ್ತರಾಗಿರಲಿಲ್ಲ. ಆ ಮಾತು ಈ ಮಾತು ಆದಮೇಲೆ "ನೀವು ೧೯೩೧ನೇ ವರ್ಷದ 'ಸೆನ್ಸಸ್' ಅಂಕಿಗಳು ಇವೆಯಲ್ಲ ನೋಡಿ. ಅವುಗಳನ್ನು ಕೊಂಜ ಅಧ್ಯಯನಮಾಡಿದರೆ ಮೈಗೊಳ್ಳುದು" ಅಂದರು. ಅವರ ಸೂಚನೆಗಿಂತ ಮೊದಲೇ ನನಗೇ ಅಂಕಿಗಳ ಆಟದಲ್ಲಿ ಬಹು ವಿಶ್ವಾಸ. ಆದರೆ ಅವರ ಮಾತು ನನಗೆ ಆ ಆಟದಲ್ಲಿ ಮತ್ತಷ್ಟು ಶ್ರದ್ಧೆಯನ್ನು ಹೆಚ್ಚಿಸಿತು. ಕೂಡಲೇ ಮೈಸೂರು ಸಂಸ್ಥಾನದ ಜನಸಂಖ್ಯೆಯ ವಿಭಜನೆಗಾರಂಭಿಸಿದೆ.

ಮೈಸೂರು ದೇಶದಲ್ಲಿ ೬೦ ಲಕ್ಷ ಜನರಿದ್ದಾರೆ. ಅದರಲ್ಲಿ ಸುಮಾರು ೫೫ ಲಕ್ಷ ಅಥವಾ ಹನ್ನೆರಡಾಣೆಯಲ್ಲಿ ಹನ್ನೊಂದಾಣೆಪಾಲು ಹಿಂದುಗಳು. ಬೆಂಗಳೂರು ದಂಡು (ದಂಡಿನಲ್ಲಿ ೨೨ ಸಾವಿರ ಮುಸಲ್ಮಾನರಿದ್ದಾರೆ) ಸೇರಿ ಸಂಸ್ಥಾನದಲ್ಲೆಲ್ಲ ೨೫ lakh ಮುಸಲ್ಮಾನರಿಗಿಂತ ಹೆಚ್ಚಿಲ್ಲ. ಹಿಂದೂ ಮುಸಲ್ಮಾನರ ಸಂಖ್ಯಾಬಲದ ಸಂಬಂಧ ಹೀಗಿದ್ದರೂ ಬೆಂಗಳೂರಲ್ಲಿ ನಡೆದ ಗಲಾಟೆ ಮುಂದಿನ ಪ್ರಕರಣ ಮುಂತಾದ್ದನ್ನು ನೋಡಿದರೆ ಸಂಸ್ಥಾನದಲ್ಲಿ ಹಿಂದುಗಳು ಮುಸಲ್ಮಾನರಿಗೆ ಹೆದರಬೇಕಾಗಿದೆಯೆಲ್ಲ. ಅದಕ್ಕೇನುಕಾರಣ? ಹಿಂದುಗಳಲ್ಲಿ ಐಕಮತ್ಯವಿಲ್ಲದಿರೋಣದರಿಂದಲೇ? ಮುಸಲ್ಮಾನರು ಸುಲಭವಾಗಿ ಕ್ಷೌರ್ಯ ಬುದ್ಧಿಗ್ರಸ್ಥರಾಗುವ ಅಥವಾ ಲಕ್ಷಣವುಳ್ಳವರೆಂಬ ಕಾರಣದಿಂದಲೆ?

ಬೆಂಗಳೂರು ನಗರ ಬಲ

ಬೆಂಗಳೂರಿನ ಪ್ರಜಾಸಂಖ್ಯೆಯಲ್ಲಿ ಕೋಮುಗಳ ಪರಸ್ಪರ ಬಲಾಬಲಗಳನ್ನು ಕೊಂಜ ಪರೀಕ್ಷಿಸುವ. ನಗರದಲ್ಲಿ ೧೫ ಲಕ್ಷ ಜನರಿದಾರೆ. ಅದರಲ್ಲಿ

ಮುಸಲ್ಮಾನರು ಸು. ೧೨,೦೦೦

(ದಂಡಿನಲ್ಲಿ ೨೨,೦೦೦ ಮುಸಲ್ಮಾನರಿದ್ದಾರೆ. ಸದಾ ಅವರು ಬೆಂಗಳೂರಿನ ಮುಸಲ್ಮಾನರ ಸಹಾಯಕ್ಕೆ ಸಿದ್ಧರಿದ್ದಾರೆ)

ಬ್ರಾಹ್ಮಣರು	೨೩,೦೦೦
ನೆಯ್ಗೆಯವರು	೧೦,೦೦೦
ಒಕ್ಕಲಿಗರು	೯,೦೦೦
ಬಣಜಿಗರು	೮,೦೦೦
ಹೊಲೆಯರು	೫,೦೦೦
ಲಿಂಗಾಯಿತರು	೪,೦೦೦
ಕ್ಷತ್ರಿಯರು	೩,೫೦೦
ಮರಾಠರು	೩,೦೦೦
ತಿಗಳರು	೩,೦೦೦

ಬ್ರಾಹ್ಮಣರನ್ನು ಬಿಟ್ಟರೆ ಹಿಂದುಗಳ ಮುಖ್ಯವಾದ ೮ ಪಂಗಡದವರ ಬಲವೇ ೪೬,೦೦೦ ವಾಯಿತು. ಇವರೆಲ್ಲ ಐಕಮತ್ಯದಿಂದಿದ್ದರೆ ಹೊರಗಣ ಭಯದಿಂದ ಇವರು ಭ್ರಾಂತರಾಗಲೇನುಕಾರಣ?

ಮೈಸೂರು ನಗರ ಬಲ

ಇನ್ನು ಮೈಸೂರು ನಗರದ ಜನಬಲವನ್ನು ಕೊಂಜ ಪರೀಕ್ಷಿಸೋಣ: ನಗರದ ಜನಸಂಖ್ಯೆ ಸುಮಾರು ೮೪,೦೦೦ ಅದರಲ್ಲಿ

ಮುಸಲ್ಮಾನರು	೧೨,೦೦೦
ಬ್ರಾಹ್ಮಣರು	೧೭,೦೦೦
ಒಕ್ಕಲಿಗರು	೧೦,೦೦೦
ಹೊಲೆಯರು	೬,೦೦೦
ಲಿಂಗಾಯಿತರು	೪,೦೦೦
ಕ್ಷತ್ರಿಯರು	೩,೮೦೦
ಕುರುಬರು	೩,೦೦೦
ಬಣಜಿಗರು	೨,೫೦೦
ಮರಾಠರು	೨,೫೦೦

ಕಂಡಿರಾ? ಹಿಂದೂ ಜನಬಲಕ್ಕೇನೂ ಕಡಮೆಯಿಲ್ಲ. ಆದರೆ ಅವರಲ್ಲಿ ಇಲ್ಲದ್ದು ಐಕಮತ್ಯ; ಶಿಸ್ತು. ಅಷ್ಟೆ.

ರಾಜ್ಯದ ಬ್ರಾಹ್ಮಣ ಬಲ; ಮುಸಲ್ಮಾನ ಬಲ

ಸಂಸ್ಥಾನದ ಒಟ್ಟು ಬ್ರಾಹ್ಮಣರ ಬಲವನ್ನೆಲ್ಲ ಕೊಂಜ ನೋಡಿ: ಮುಸಲ್ಮಾನರ ಹಾಗೆ ಬ್ರಾಹ್ಮಣರೂ ಸಹ ಸಣ್ಣ ಪಂಗಡದವರೇ. ಮುಸಲ್ಮಾನರು ೨,೭೫,೦೦೦ ಇದ್ದರೆ ಬ್ರಾಹ್ಮಣರು ೨,೧೫,೦೦೦ ಮಂದಿ ಇದ್ದಾರೆ. ಮುಸಲ್ಮಾನರಿಗೂ ಬ್ರಾಹ್ಮಣರಿಗೂ ಸಂಬಂಧ ನೋಡಿದರೆ ೫ರಲ್ಲಿ ೪ ಅಂಶವಾದ ತಾಯಿತು. ಈ ಎರಡು ಪಂಗಡಗಳ ಸಂಖ್ಯಾಬಲವನ್ನೂ ಇನ್ನು ಕೊಂಜ ನೋಡಿ:

ಮುಸಲ್ಮಾನರು—ಬ್ರಾಹ್ಮಣರು
(೧೦೦೦ ಲೆಕ್ಕ)

ಬೆಂಗಳೂರು ನಗರ	೧೨	...	೨೩
ಮೈಸೂರು ನಗರ	೧೨	....	೧೭
ಶಿವಮೊಗ್ಗ ಜಿಲ್ಲೆ	೧೭	....	೨೭
ಕಡೂರು ಜಿಲ್ಲೆ	೧೩	....	೧೮
ಹಾಸನ ಜಿಲ್ಲೆ	೧೬	....	೨೦
ಮೈಸೂರು ಜಿಲ್ಲೆ	೨೯	....	೩೩

ಕೆಳಗಿನ ಅಂಕಿಗಳನ್ನು ನೋಡಿ: ಈ ಸ್ಥಳಗಳಲ್ಲೆಲ್ಲ ಮುಸಲ್ಮಾನರ ಸಂಖ್ಯಾಬಲ ಹೆಚ್ಚು:

ಬೆಂಗಳೂರು ದಂಡು	೨೨,೦೦೦
ಚಿನ್ನದ ಗಣಿ	೫,೦೦೦
ಬೆಂಗಳೂರು ಜಿಲ್ಲೆ	೪೪,೫೦೦
ಕೋಲಾರ ಜಿಲ್ಲೆ	೪೫,೦೦೦
ತುಮಕೂರು ಜಿಲ್ಲೆ	೩೨,೦೦೦

ಜಿಲ್ಲೆಗಳಲ್ಲಿ ಬ್ರಾಹ್ಮಣರ ಸಂಖ್ಯಾಬಲನೋಡಿ:

ಮೈಸೂರು	ಜಿಲ್ಲೆ	೩೩,೫೦೦
ಶಿವಮೊಗ್ಗ	,,	೨೭,೦೦೦
ಕೋಲಾರ	,,	೨೫,೦೦೦
ತುಮಕೂರು	,,	೨೦,೦೦೦
ಹಾಸನ	,,	೨೦,೦೦೦
ಬೆಂಗಳೂರು	,,	೧೯,೦೦೦
ಕಡೂರು	,,	೧೮,೦೦೦
ಚಿತ್ರದುರ್ಗ	,,	೯,೦೦೦

ಮೊದಲಿಂದಲೂ ಹಿಂದೂ ಸಮಾಜದಲ್ಲಿ ಬ್ರಾಹ್ಮಣರೇ ಮುಂದಾಳುಗಳಾಗಿದ್ದಾರೆ. ಈಗ ಇತರ ಹಿಂದುಗಳು ಮುಂದಾಳ್ತನವನ್ನು ವಹಿಸುವುದಾದರೆ ಸಂತೋಷ. ಬ್ರಾಹ್ಮಣರ ಇರುವಿಕೆಯು ಅವರ ಕೈಲಿ ಭದ್ರವಾಗಿದೆ.

ಹಿಂದೂ ಸಮಾಜ ಬಲ

ಬಹು ಸಂಖ್ಯಾತರಾದ ಇತರ ಹಿಂದೂ ಪಂಗಡಗಳ ಬಲವನ್ನು ನೋಡಿ:

೬೦ ಲಕ್ಷ ಪ್ರಜೆಗಳಲ್ಲಿ ೧೨,೨೩,೦೦೦ ಒಕ್ಕಲಿಗರು, ೯,೩೨,೦೦೦ ಆದಿಕರ್ನಾಟಕರು, ೭,೩೨,೦೦೦ ಲಿಂಗಾಯಿತರು. ಅಥವಾ ಜನಸಂಖ್ಯೆಯ ಐದರಲ್ಲೊಂದು ಪಾಲು ಒಕ್ಕಲಿಗರು; ಆರರಲ್ಲೊಂದು ಪಾಲು ಆದಿಕರ್ನಾಟಕರು; ಎಂಟರಲ್ಲೊಂದು ಪಾಲು ಲಿಂಗಾಯಿತರು. ಈ ಮೂರರಲ್ಲೊಂದು ಅಥವಾ ಮೂರೂ ಸೇರಿ ಮುಂದಾಳ್ತನವನ್ನು ವಹಿಸಬಹುದು ಮುಸಲ್ಮಾನರೊಂದಿಗೆ ಇನ್ನು ಬೆರೆಯಬೇಕಾದ ಕಾರಣವೇ ಇಲ್ಲ. ಇದರ ಮೇಲೆ ಅವರಿಗೂ ಇವರಿಗೂ ಸಂಸ್ಕೃತಿಯಲ್ಲಿ ಉತ್ತರ ದಕ್ಷಿಣ ಧ್ರುವದಂತಹ ಸಮುದ್ರ!

ಲಿಂಗಾಯಿತ ಬಲ

ಮುಸಲ್ಮಾನರು ೨,೭೫,೦೦೦ ಇದ್ದರೆ, ಮಾದಿಗರು ೨,೮೧,೦೦೦ ಇದ್ದಾರೆ; ಹೊಲೆಯರಾದರೋ ೬,೫೦,೦೦೦ ಮಂದಿ ಇದ್ದಾರೆ. ಮುಸಲ್ಮಾನರಿಗಿಂತ ಎರಡೂವರೆಯಷ್ಟು ಹೆಚ್ಚು. ಲಿಂಗಾಯಿತರಾದರೋ ೭,೧೫,೦೦೦; ಮುಸಲ್ಮಾನರಿಗೆ ಮೂರರಷ್ಟಿದ್ದಾರೆ; ಹೊಲೆಯರ ಬಲಕ್ಕಿಂತ ಕೊಂಜ ಹೆಚ್ಚು; ಆದಿಕರ್ನಾಟಕರ ಬಲದಲ್ಲಿ ಮುಕ್ಕಾಲರಷ್ಟು ಇದ್ದಾರೆ. ಒಕ್ಕಲಿಗರು ೧೨ ಆಣೆಯಾದರೆ ಇವರು ೭ ಆಣೆಯಷ್ಟಿದ್ದಾರೆ.

ಲಿಂಗಾಯಿತರೇ ಮುಂದಾಳ್ತನವನ್ನು ವಹಿಸಬೇಕೆಂದಿದ್ದರೆ ಸಂತೋಷವಾಗಿ ಆಗಬಹುದಲ್ಲ. ಅವರಿಗೆ ಜನಬಲವಿದೆ; ವಿದ್ಯಾಬಲವಿದೆ; ಧನಬಲವೂ ಉಂಟು. ಇನ್ನು ಇದಕ್ಕಾಗಿ ಮುಸಲ್ಮಾನರೊಂದಿಗೆ ಸೇರಬೇಕಾದ ಸಂಧವವೇ ಇಲ್ಲವಲ್ಲ.

ಒಕ್ಕಲಿಗರ ಬಲ

ಒಕ್ಕಲಿಗರು ಸಂಸ್ಥಾನದ ಜನಬಲದ ಐದರಲ್ಲೊಂದಂಶವೆಂದು ಮೊದಲೇ ಹೇಳಿದ್ದಾಯಿತು. ಒಟ್ಟು ೧೨,೨೩,೦೦೦ ಜನರಿದ್ದಾರೆ. ಮೈಸೂರು ಜಿಲ್ಲೆಯೊಂದರಲ್ಲೇ ೩,೪೯,೦೦೦ ಮಂದಿ ಅಥವಾ ಬ್ರಾಹ್ಮಣಬಲದ ಒಂದೂವರೆಯಷ್ಟು ಮುಸಲ್ಮಾನರ ಬಲಕ್ಕಿಂತ ಅಧಿಕವಾಗಿ ಇದ್ದಾರೆ. ಬೆಂಗಳೂರು ಜಿಲ್ಲೆಯೊಂದರಲ್ಲೇ ೨,೫೦,೦೦೦ ಮಂದಿಯುಂಟು; ಆದರೆ ಸರಿಸುಮಾರು ಮುಸಲ್ಮಾನ ಜನಬಲದಷ್ಟಾಯಿತಲ್ಲವೆ?

ಮೈಸೂರು ಜಿಲ್ಲೆಯಲ್ಲಿ ಮಾತ್ರ ಒಕ್ಕಲಿಗರೂ ಲಿಂಗಾಯಿತರೂ ಸರಿಸಮನಾಗಿದ್ದಾರೆ. ಉಳಿದ ಜಿಲ್ಲೆಗಳ ಬಲ ನೋಡಿ:

ಹಾಸನ	೧,೮೪,೦೦೦
ತುಮಕೂರು	೧,೮೯,೦೮೦
ಕೋಲಾರ	೧,೦೮,೦೦೦
ಶಿವಮಗ್ಗ	೧,೦೫,೦೦೦
ಚಿತ್ರದುರ್ಗ	೧,೨೨,೦೦೦
ಕಡೂರು	೬೩,೦೦೦

ಪಂಗಡಗಳ ಬಲ

ಬ್ರಾಹ್ಮಣರ ಸಂಖ್ಯಾಬಲವನ್ನು ವಿಾರಿಸಿದ ಇತರ ಪಂಗಡಗಳಂದರೆ ಇವು:

ಒಕ್ಕಲಿಗರು	೧೨,೨೩,೦೦೦
ಆದಿಕರ್ನಾಟಕರು	೯,೩೨,೦೦೦
ಲಿಂಗಾಯಿತರು	೭,೧೫,೦೦೦
ಕುರುಬರು	೪,೦೦,೦೦೦
ಮುಸಲ್ಮಾನರು	೨,೭೫,೦೦೦
ಬೇಡರು	೨,೭೧,೦೦೦
ಗೊಲ್ಲರು	೨,೬೧,೦೦೦

ಸಂಖ್ಯಾಬಲದ ಸ್ಥಾನದಲ್ಲಿ ಬ್ರಾಹ್ಮಣರು ಎನೆಯವರಾದರೂ ಅವರ ಬಲವಷ್ಟು ನಿಕೃಷ್ಟವಾಗಿ ಕಾಣತಕ್ಕದ್ದಲ್ಲ.

ಪರಸ್ಪರ ಸಂಖ್ಯಾಬಲ ಹೀಗಿದ್ದರೂ ಹಿಂದುಗಳ ಅಹರ್ನಿಶಿಯೂ ಮುಸಲ್ಮಾನರಿಗೆ ಭಯಪಡಬೇಕಾಗಿ ಬಂದಿದೆ. ಈ ಅನ್ಯಾಯ, ಅಸಹಜ ಪರಿಸ್ಥಿತಿಗೇನು ಕಾರಣ? ಈ ಕಾರಣವನ್ನು ಕಂಡುಹಿಡಿದು, ಮುಂದಿನ ಸಂತಾನದ ಶ್ರೇಯಸ್ಸನ್ನು ಸಂರಕ್ಷಿಸುವುದು ನಮ್ಮೆಲ್ಲರ ಕರ್ತವ್ಯವಲ್ಲವೆ?

ವಿಶ್ವಕರ್ನಾಟಕ

ದಾವಣಗೆರೆಯ ಹಿಂದೂ-ಮುಸಲ್ಮಾನರ ಮಾರಾಮಾರಿ

(ನೆನ್ನೆ ರಾತ್ರಿ ೯ ಘಂಟೆಯುವೇಳೆಗೆ ಶ್ರೀ ಬಿ. ವಿ. ಪುರಾಣಿಕರು ದಾವಣಗೆರೆಯಿಂದ ಕಳಿಸಿದ ತಂತೀವರ್ತಮಾನ)

ಗಣೇಶನಸಹಿತ ಪಲ್ಲಕ್ಕಿಯು ಸುಟ್ಟು ಬೂದಿಯಾಯಿತು.

ಮುಸಲ್ಮಾನರ ದಾಂಧಲೆ

ಪೋಲೀಸಿನವರ ದೌರ್ಬಲ್ಯ !!

ಶಾಲಾ ಬಾಲಕರೊಂದಿಗೆ ಗಣೇಶ ಮೆರವಣಿಗೆಯು ನ್ನೆ ಸಾಯಂಕಾಲ (ಶುಕ್ರವಾರ ೨೧-೯-೨೬) ಕುಡ್ಡಪೇಟೆಯಲ್ಲಿ ಹೊರಟಿತು. ಅಲ್ಲಿ ಒಂದು ಮ ೀದಿ ಇದೆ. ಆದರೆ ಅದು ರಸ್ತೆಗೆ ಎದುರಾಗಿಲ್ಲ. ಇದಕ್ಕೆ ಮೊದಲು ಮೆರವಣಿಗೆಯ ಕಾಲದಲ್ಲಿ ತಾಳ ೀಳಗಳಿಗೆ ಅದರ ಮುಂದೆ ಅಡ್ಡಿ ಇರುತ್ತಿರಲಿಲ್ಲ. ಕೇಟಲೆ ಮಾಡಬೇಕೆಂದು ಆಪೇಕ್ಷಿಸಿ ನೂರಾರು ಮು ಸಲ್ಮಾನರು ಮಸೀದಿಯೊಳಗೆ ಬಂಡಿಗಟ್ಟಲೆ ಕಲ್ಲುಗಳ ನ್ನೂ, ಮತ್ತು ಜೋಡುಗಳು, ದೊಣ್ಣೆಗಳು, ಚೂರಿ ಗಳು ಮುಂತಾದವುಗಳನ್ನೂ ಶೇಖರಿಸಿಕೊಂಡು ಕಾ ದಿದ್ದರು.

ಈ ಸಿದ್ಧತೆಯ ವಿಚಾರವನ್ನು ಮೊದಲೇ ತಿಳಿದಿದ್ದ ರೂ ಪೋಲೀಸಿನವರು ತಕ್ಕ ಬಂದೋಬಸ್ತನ್ನು ಮಾ ಡಿರಲಿಲ್ಲ. ಮುಸಲ್ಮಾನರು ಮೆರವಣಿಗೆಯನ್ನು ಅಡ್ಡಿಪಡಿಸಿದರು. ಹುಡುಗರು ತಾಳ್ಮೆಯಿಂದ ಪೋ ಲೀಸಿನವರಿಗಾಗಿ ಕಾದರು. ಒಂದು ಘಂಟೆಯ ಮೇಲೆ ಪೋಲೀಸ್ ಸೂಪರಿಂಟೆಂಡೆಂಟರು, ಜಿಲ್ಲಾ ಧಿಕಾರಿಗಳು ಇವರೊಂದಿಗೆ ಪೋಲೀಸಿನವರು ಬಂದ ರು. ಮುಸಲ್ಮಾನರು ದೀನ್ ದೀನ್ ಎಂದು ಕೂ ಗುತ್ತಾ, ದೊಣ್ಣೆ, ಹಳೇ ಜೋಡು, ಆಯುಧಗಳನ್ನು ಪ್ರದರ್ಶಿಸಿದರೂ ಇವರೇನೂ ಮಾಡಲಿಲ್ಲ. ಭಯ ಪ್ರಸ್ತರಾದ ಸ್ಥಳೀಯರು ಜಿಲ್ಲಾಧಿಕಾರಿಗಳಿಗೆ "ಸ್ವಾಮಿ! ಮುಸಲ್ಮಾನರನ್ನು ಚದರಿಸಿ. ಪೋಲೀ ಸಿನವರ ಸಹಾಯದಿಂದ ಮೆರವಣಿಗೆಯನ್ನು ನಡೆಸಿ ಕೊಡಿ" ಎಂದು ಪ್ರಾರ್ಥಿಸಿದರು.

ಆದರೆ ಪೋಲೀಸಿನವರು ನಿರಾಯುಧರಾಗಿಯೂ, ಸಿದ್ಧರಾಗಿಲ್ಲದೆಯೂ ಬಂದಿದ್ದರು. ನೋಡಿದರೆ ಅವ ರು "ವನಭೋಜನ" ಕ್ಕೆ (ಗಾರ್ಡನ್‌ಪಾರ್ಟಿ) ಬಂದಹಾಗಿತ್ತು. ಮ್ಯಾಜಿಸ್ಟ್ರೇಟರು "ಕೊಂಚ ತಾಳಿ" ಎಂದು ಹಿಂದೂಗಳಿಗೇ ಹೇಳಿದರು. ಮೊ ದಲೇ ಸಿದ್ಧ ಮಾಡಿಕೊಂಡಂತೆ ಮಸೀದಿಯೊಳಗಿಂದ ಮುಸಲ್ಮಾನರು ಕಲ್ಲು, ಹಳೇಜೋಡು, ದೊಣ್ಣೆ, ಗಳ ಮಳೆ ಸುರಿಸಿದರು. ಮುಸಲ್ಮಾನರು ಪ್ರದರ್ಶಿ ಸಿದ ಕತ್ತಿ ಕೋವಿಗಳನ್ನು ಕಂಡು ಹುಡುಗರು ಭಯಗೊಂಡು ಹಿಂದಕ್ಕೆ ಸರಿದರು. ಕೂಡಲೇ ಮುಸಲ್ಮಾನ ಬದಮಾಷಿಗಳು ನುಗ್ಗಿ ಗಣೇಶ, ಮಹಾರಾಜರ ಚಿತ್ರಪಟವಿದ್ದ ಪಲ್ಲಕ್ಕಿಯ ಮೇಲೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿದರು. ಒಂದು ಗಂಟೆಯ ಹೊತ್ತು ಉರಿದು ಭಸ್ಮವಾಯಿತು. ಉದ್ರೇಕಗೊಂಡ ಮುಸಲ್ಮಾನರು ದೀನ್! ದೀನ್! ಎಂದು ಹಾಹಾಕಾರ ಮಾಡುತ್ತ ಹಿಂದೂಗಳನ್ನು ಸದೆ ಬಡಿದರು. ತಾವೂ ಬೆದೆ ತಿನ್ನುತ್ತಾ ಪೋಲೀಸಿ ನವರು ಹೆಣಗಾಡುತ್ತಿದ್ದರು. ಆ ಮೇಲೆ ಮುಸಲ್ಮಾ ನರು ಸುತ್ತ ಮುತ್ತಣ ಹಿಂದೂಗಳ ಮನೆಗಳಿಗೆ ಬಂಕಿ ಹಚ್ಚುವ ಸನ್ನಾಹ ಮಾಡಿದರು. ಕಲ್ಲು ದೊಣ್ಣೆ, ಚಾಕುಗಳಿಂದ ಅನೇಕ ಹಿಂದೂಗಳಿಗೂ, ಪೋಲೀಸರಿಗೂ ಪೂರಾ ಪೆಟ್ಟಾಯಿತು. ಅನಂತರ ಕೆಲವು ಬದಮಾಷಿಗಳು ಮುಸಲ್ಮಾನರ ಬೀಡಿ ಅಂಗ ಡಿಗಳಿಂದ ಕೆಲವು ಸಾಮಾನುಗಳನ್ನು ಬೇದಿಗೆಳೆದು ಬೆಂಕಿ ಇಟ್ಟರು.

ಈ ದಿನ (ಶನಿವಾರ) ಮಸೀದಿ ಶೋಧನೆಯಾಯಿ ತು. ಅಲ್ಲಿ ಬಂಡಿಗಟ್ಟಲೆ ಕಲ್ಲುಗಳೂ, ಮತ್ತು ದೊಣ್ಣೆಗಳೂ, ಹರಕು ಜೋಡುಗಳೂ, ಇದ್ದವು.

ಹಿಂದೂ ಅಂಗಡಿಗಳನ್ನು ಲಕ್ಷಗಟ್ಟಲೆ ಬೆಲೆಯುಳ್ಳ ಗಿರಣಿಗಳನ್ನು ಸುಡುತ್ತೇವೆಂದು ಮುಸಲ್ಮಾನರು ಬೆದರಿಸುತ್ತಿರುವರು. ಇವರ ಹಾವಳಿಯನ್ನು ಸಹಿಸ ಲಕ್ಕಾಗದು. ಅವರನ್ನು ಕೇಳುವವರೇ ಇಲ್ಲ. ಸುತ್ತ ಮುತ್ತ ಪ್ರದೇಶಗಳಿಂದ ಮುಸಲ್ಮಾನರು ಬಂದಿಳಿ ಯುತ್ತಿದ್ದಾರೆ. ಪೋಲೀಸು ಬಲಸಾಲದು. ನಡು ರಾತ್ರಿ ಸ್ವಲ್ಪ ಸ್ವಯಂಸೇವಕರ ಸಹಾಯದಿಂದ ಎಸೋಕೊಂಚ ಸಮಾಧಾನವಾಯಿತು. ಸಾರ್ವಜ ನಿಕರ ಮೋಟಾರು ಗಾಡಿಗಳು ರಾತ್ರಿ ಬೀದಿಗಳಲ್ಲಿ ಗಸ್ತುತಿರುಗುತ್ತಿದ್ದವು. ಊರೆಲ್ಲೆಲ್ಲ ಭಯ ಭ್ರಾಂತಿ ಗಳುಂಟಾಗಿವೆ. ಅಂಗಡಿಗಳೆಲ್ಲ ಮುಚ್ಚಿವೆ. ಸರ್ಕಾ ರದವರು ಸಕಾಲದಲ್ಲಿ ತಕ್ಕ ಏರ್ಪಾಟು ಮಾಡದಿದ್ದರ ಹಿಂದೂಗಳ ಪ್ರಾಣಮಾನದನಗಳಿಗೆ ಭಂಗಕ್ಕಾಗುವ

ಸರ್ ವಿಶ್ವೇಶ್ವರಯ್ಯ ಸಮಿತಿ

(೧೫-೯-೨೫)

ಶ್ರೀ ನಂಜುಂಡಯ್ಯನವರು

(ಕಂಟ್ರಾಕ್ಟರು)

"ಕೃಷ್ಣವಿಗ್ರಹ ವಾಣೀವಿಲಾಸ ಶಾಲೆಯಲ್ಲಿಟ್ಟಿ. ಕೇಳಿದವರಾರು!"

ಗೂಡನ್ನು ಕಟ್ಟಿದ ಕಂಟ್ರಾಕ್ಟರು ಸಮಿತಿಯವರ ಪಾಟೀಸವಾಲಿಗೆ ಹೀಗೆ ಉತ್ತರ ಕೊಟ್ಟರು:

ನಾನು ೧೫ ವರ್ಷಗಳಿಂದ ಕಂಟ್ರಾಕ್ಟು ಮಾಡುತ್ತಿದ್ದೇನೆ. ಸ್ಕೂಲು ರಿಪೇರಿ ಕಂಟ್ರಾಕ್ಟು ತೆಗೆದುಕೊಂಡು ಮೇ ೧೪ಕ್ಕೆ ಆರಂಭಿಸಿ ಜೂನ್ ೨-೩ಕ್ಕೆ ಮುಗಿಸಿದೆ. ಈ ಮಧ್ಯೆ ಶಾಲೆಯ ಹುಡುಗರು 'ನಮ್ಮ ಗಣಪತಿ ಪೀಠ ಹಾಳಾಗಿದೆ. ರಿಪೇರಿಮಾಡಿಕೊಡಿ. ಮೇಲೊಂದು ಗೂಡು ಕಟ್ಟಿಕೊಡಿ' ಎಂದು ಬೇಡಿದರು. ಕೊಂಚಕಾಲ ಹಾಗೂ ಹೀಗೂ ತಳ್ಳಿಕಡೆಗೆ ರಿಪೇರಿ ಮಾಡಿದೆ. ದೇವರಕೆಲಸ. ಎಲ್ಲ ೬-೭ ರೂಪಾಯಿಗಳ ಸಣ್ಣ ಕೆಲಸ. ಗಣೇಶ ಅಲ್ಲಿ ೧೦ ೧೫ ವರ್ಷಗಳಿಂದ ಇದೆ. ನಾನೇ ನಿಂತುಕೊಂಡು ಹಗಲು ಕಟ್ಟಿಸಿಬಿಟ್ಟಿ. ಕಟ್ಟುವಾಗ ಯಾರೂ ಅಡ್ಡಿ ಮಾಡಲಿಲ್ಲ. ಏನೋ ಸಣ್ಣರಿಪೇರಿ ಕೆಲಸವೆಂದು ಯಾರ ಅಪ್ಪಣೆಯನ್ನೂ ಪಡೆಯಲಿಲ್ಲ. ಹೆಡ್ಮಾಸ್ಟರ ಸಂಗಡ ನಾನು ಮಾತನಾಡಲೇ ಇಲ್ಲ.

ನಾಗಪ್ಪನವರು—ಶಾಲೆಯಲ್ಲಿ ಗುಡಿಕಟ್ಟಬಹುದೇ? ಸ್ವಾಮಿ ವಿಗ್ರಹಕ್ಕೆ ಪ್ರತಿಷ್ಠೆ ಆಗಿದೆಯೆ?

ನಂ—ಅದು ಗುಡಿ ಹೇಗೆ ಸ್ವಾಮಿ-ಪ್ರತಿಷ್ಠೆ ಗಿತಿಷ್ಠೆ ಮಾತು ಆಗವಿಾಕರಿಗೆ ಗೊತ್ತು.

ನಾಗಪ್ಪ—ಅದು ಸ್ಕೂಲು, ಯಾರಪ್ಪಣೆಯೂ ಪಡೆಯದೆ ನೀವು ಹೇಗೆ ಕಟ್ಟಿದಿರಿ?

ನಂ—೩ ವರ್ಷಗಳ ಹಿಂದೆ ೧೫ ರೂಪಾಯಿ ಖರ್ಚುಮಾಡಿ ವಾಣಿವಿಲಾಸ ಸ್ಕೂಲಿನಲ್ಲಿ ಕೃಷ್ಣವಿಗ್ರಹ ರಿಪೇರಿ ಮಾಡಿದೆ ಮಹಾಸ್ವಾಮಿ? ಕೇಳಿದವರೇ ಇಲ್ಲ. ದೂರಿಲ್ಲ; ಗಲಾಟೆಯಿಲ್ಲ.

ಬಸಪ್ಪ—ನೀವಿಷ್ಟುಮಾಡಿದಿರಿ. ಧರ್ಮಕ್ಕಾಗಿ ಅದನ್ನು ಕಟ್ಟಿದಿರಿ. ಫಲವಾಗಲಿಲ್ಲ. ಗಲಾಟೆಯಾಯಿತಲ್ಲ. ನೀವೇನಾದರೂ ಇದಕ್ಕೇನು ಕಾರಣವೆಂದು ತಿಳಿಯಲು ಪ್ರಯತ್ನಮಾಡಿದಿರಾ?

ನಂ—ಊರಿಗೆಲ್ಲ ನಾನೇ ಹೊಣೇನೆ ಸ್ವಾಮಿ!!

(೧೮-೯-೨೫)

ರಿಂದ ೧ ಘಂಟೆಯವರೆಗೆ ಸಮಿತಿಯವರು ರಹಗಿ ಡಿ. ಎಸ್. ಪಿ. ಮುಂತಾದವರನ್ನು ವಿಚಾರಿಸಿದರು. ಅನಂತರ ಚಂದ್ರರಾಜನ ವಿಚಾರ ಆರಂಭವಾಯಿತು. ಶ್ರೀ ಸಂಜೀವರಾಯರು ಠಿಯಲ್ಲಿ ಹುಡುಗನು ಹೇಳಿದ್ದನ್ನು ಇಂಗ್ಲೀಷಾಂತರ ಮಾಡಿದರು.

ಚಂದ್ರರಾಜ

(ದರ್ಜಿಯ ಹುಡುಗ, ಸು. ೧೨ ವರ್ಷ)

ಬ್ಯಾಸ್ವಾನರ ಮನೆ ಮಹಡಿಯಿಂದ ಹುಡುಗಳು ಹಾರಿದವು"

ಮೂರೋ ಅವುಗಳನ್ನೆತ್ತಿಕೊಂಡರು. ಗಲಾಟೆಯಾದ್ದರಿಂದ ಪೂಜೆನೋಡಲು ನಾನು ಗೋಡೆ ಹತ್ತಿ ಕೂತೆ. ಬೆನ್ನು ಅಬ್ಬಾಸಖಾನರ ಮನೆಕಡೆ ಮುಖಮಾಡಿ ಕೂತಿದ್ದೆ. ೫-೬ ಗುಂಡುಗಳು ಬಿದ್ದಹಾಗಾಯಿತು. ನನಗೊಂದು ಗುಂಡಿನೇಟು ಬೆನ್ನಿಗೆ ಬಿತ್ತು. ನಾನು ಕೇಳಿದೆ, ನೋಡಲಿಲ್ಲ. ಫಟ್, ಫಟ್ ಎಂಬ ಶಬ್ದ ಕೇಳಿದೆ. ಮನೆಯ ಮಹಡಿ ಮೇಲಿನಿಂದ ಗುಂಡುಗಳು ಬಂದವು. ಗುಂಡು ಬಿದ್ದಮೇಲೆ ಜ್ಞಾನತಪ್ಪಿ ಕೆಳಗೆ ಬಿದ್ದೆ. ಯಾರೋ ಬ್ರಾಹ್ಮಣರು ನೀರುಹಾಕಿ, ನನ್ನನ್ನು ಹಿಂದಿನ ಬಾಗಿಲಿಂದ ಕರೆದುಕೊಂಡು ಹೋದರು. ನನಗೇನೋ ನೋವಾಗುತ್ತಿತ್ತು. ಬಂದು ಷರಟು ಒಂದು ಅಂಗಿಹಾಕಿದ್ದೆ. ಅವೆರಡಕ್ಕೂ ತೂತುಗಳಿವೆ. (ಇವು ಮಾಜಿಸ್ಟ್ರೇಟರ ವಶದಲ್ಲಿವೆ) ಚೌಕದಿಂದ ತೆವಳಿಕೊಂಡು ಮನೆಗೆ ಹೋದೆ ಎಡೋಬಾಗುಡಿ ಹತ್ತಿರ ಮನೆ ಇದೆ. (ಸದಸ್ಯರೆಲ್ಲರೂ ಆಗ ಹುಡುಗನ ಅಂಗಿ ಕಳಚಿ ಗಾಯವನ್ನು ನೋಡಿದರು.) ಮನೆಯಲ್ಲಿ ನಮ್ಮಮ್ಮ ಇದ್ದರು. ನಾಗಪ್ಪನೆಂಬ ನಾಯಿಂದನು ಬಂದು ಎಣ್ಣೆ ನವರಿದ. ಆ ಮೇಲೆ ಅಪ್ಪಬಂದರು. ಮಾರನೆಯ ದಿನ ಬೆಳಿಗ್ಗೆ ವಿಕ್ಟೋರಿಯಾ ಆಸ್ಪತ್ರೆಗೆ ಕರಕೊಂಡು ಹೋದರು. ೯ ಘಂಟೆವರೆಗೆ ಅಲ್ಲಿ ಇದ್ದೆ. ಆಮೇಲೆ ನಮ್ಮಪ್ಪ ಮನೆಗೆ ಹೋಗೋಣವೆಂದು ಹೇಳಿದರು. ಬಹಳ ಗಲಾಟೆಯಾಗಿತ್ತು. ಯಾರೂ ಚಿಕಿತ್ಸೆ ಮಾಡಲಿಲ್ಲ. ಮಾರ್ಕೆಟ್‌ಪೋಲೀಸು ಸ್ಟೇಷನ್‌ಗೆಹೋದೆವು. ಅಲ್ಲೂ ನಮ್ಮನ್ನು ಯಾರೂ ಕೇಳಲಿಲ್ಲ. ನಮ್ಮಪ್ಪ ಯಾರೋ ಪೋಲೀಸಿನವರಸಂಗಡ ಮಾತನಾಡುತ್ತಿದ್ದು ಆಮೇಲೆ ಮನೆಗೆ ಬಂದು ಬಿಟ್ಟೆವು. ನಾಗಪ್ಪ ಕೊಟ್ಟ ಎಣ್ಣೆ ೪ ದಿನ ನಂಗೆ ನಮ್ಮಮ್ಮ ಹಚ್ಚುತ್ತಿದ್ದಳು.

ಆಮೇಲೆ ಶ್ರೀ ಸಂಜೀವರಾಯರು ಬೌರಿಂಗ್ ಆಸ್ಪತ್ರೆಗೆ ಕರಕೊಂಡು ಹೋದರು. ೪-೫ ದಿನ ಬಹಳ ನೋವಾಯಿತು. ಇಷ್ಟು ದಿನವೂ ಒಬ್ಬ ಪೋಲೀಸಿನವರೂ ನಮ್ಮ ಮನೆಗೆ ಬರಲಿಲ್ಲ. ಆಸ್ಪತ್ರೆಯಲ್ಲಿ ಸಮಾರು ಒಂದು ತಿಂಗಳಿದ್ದೆ. ಆಪರೇಷನ್ ಮಾಡಿದರು. ನಿತ್ಯ ಮದ್ದು ಹಾಕುತ್ತಿದ್ದರು. ಬಹಳ ನೋಯುತ್ತಿತ್ತು. ವಾಸಿಯಾಗುವವರೆಗೂ ಅಲ್ಲೇ ಇದ್ದೆ. ಒಂದು ಭಾಗ ಫೋಟೋತಕ್ಕೊಂಡರು ನಾನು ಹೋದ ಮಾರನೆಯ ದಿನವೇ ಫೋಟೋತೆಗೆದಾಗ ೪-೫ ಮಂದಿ ಇದ್ದರು. ಅಲ್ಲಿ ನಮ್ಮಪ್ಪ ಇರಲಿಲ್ಲ. ಸಂಜೀವರಾಯರೂ ಇರಲಿಲ್ಲ. ೮ ದಿನವಾದ ಮೇಲೊಂದುಸಾರಿ ಫೋಟೋ ತೆಗೆದರು. ನಾನು ಈಗ ಕೈಮೇಲಕ್ಕೆ ಎತ್ತಲಾರೆ.

ಶ್ರೀ ನರಸಿಂಹಯ್ಯಂಗಾರ್ಯರು

"ದಸ್ತಗಿರಿ ಮಾಡಿರೆಂದು ಬೊಬ್ಬೆಹಾಕಿದರೂ ಅಧಿಕಾರಿಗಳಾರೂ ಕೇಳಲಿಲ್ಲ"

ನಾನು ಇಂಜನಿಯರಿಂಗ್ ಕಾಲೇಜಿನಲ್ಲಿ ಓದುತ್ತಿದ್ದೇನೆ. ನಾನು ಚಿಕ್ಕಪೇಟೆಯಲ್ಲಿ ಮನೆ ಬಳಿ ಇದ್ದೆ. ಅಬ್ಬಾಸಖಾನರ ಮನೆ ಬಳಿ ಗುಂಡುಗಳು ಹಾರಿಸುತ್ತಿರುವರೆಂದೂ, ಮುಸಲ್ಮಾನರು ಹಿಂದುಗಳನ್ನು ಹೊಡೆಯುತ್ತಿರುವರೆಂದೂ ಕೇಳಿದೆ. ನನ್ನ ತಮ್ಮಂದಿರಿಬ್ಬರು ಅಲ್ಲಿಗೆ ಮಂಗಳಾರತಿಗೆ ಹೋಗಿದ್ದರು. ನಾನು ಸ್ಕೂಲಿಗೆ ಓಡಿದೆ. ಜನರು ದಸ್ತಗಿರಿ ಮಾಡಿರೆಂದು ಬೊಬ್ಬೆಹಾಕುತ್ತಿದ್ದರು. ಪೋಲೀಸಿನವರೇನೂ ಮಾಡಲಾಗಲಿಲ್ಲ. ಡಿ. ಎಸ್. ಪಿ, ಎ. ಎಸ್. ಪಿ. ಮುಂತಾದವರನ್ನು ಕಂಡೆ. ಜನರು ಬ್ಯಾಸ್ವಾ ಸ್ವಾನರ ಮನೆಗೆ ಹುಡುಗರನ್ನು ಎಳೆದುಕೊಂಡು ಹೋಗಿದ್ದಾರೆ" ಎಂದುಕೂಗಿದರು. ಡಿ. ಎಸ್. ಪಿ. ಏನೂ ಮಾಡಲಿಲ್ಲ. ಕೆಲವು ಹುಡುಗರು ಶಾಲೆಯ ಕೋಣೆಗಳಲ್ಲಿದ್ದರು. ಕೃಷ್ಣೇ ಅರಸಿನವರ ಸಂಗಡ ನಾನು ಹೋಗಿ ಅವರನ್ನು ಬಿಡಿಸಿದೆ. ಅಬ್ಬಾಸಖಾನರ ಮನೆಯಿಂದ ಕೆಲವರು ಮುಸಲ್ಮಾನರು ಬಂದು ಜನರನ್ನು ಹೊಡೆದರು. ಖಾನರ ಕಾಂಪೌಂಡಿನಲ್ಲಿ ೧೦-೧೫ ಮಂದಿ ಮುಸಲ್ಮಾನರನ್ನು ಕಂಡೆ. ನಾನು ನಾಲ ಬಂದವಾಡಿಚೌಕಕ್ಕೆ ಹೋಗಿ ಡಿ. ಎಸ್. ಪಿ ಯನ್ನು ಕಂಡು "ಮುಸಲ್ಮಾನರು ಲಾಠಿಗಳನ್ನು ಹಿಡಿದು ಹೊಡೆಯುತ್ತಿದ್ದಾರೆ. ಅರೆಸ್ಟು ಮಾಡಿ" ಅಂದೆ. ಅವರು ಕಿವಿಗೆ ಹಾಕಿಕೊಳ್ಳಲಿಲ್ಲ. ನಾನು ಗಲಾಟೆ ಆದಮೇಲೆ ಹೋದೆ. ನಾನು ಶಾಲೆ ಕಾಂಪೌಂಡಿಗೆ ಹೋದಮೇಲೂ ನನ್ನ ಮೇಲೊಂದು ಕಲ್ಲು ಬಿತ್ತು. ನನ್ನ ತಮ್ಮಂದಿರು ಆಗಲೇ ಹಿಂಬಾಗಿಲಿಂದ ಹೊರಟು ಹೋಗಿದ್ದರಂತೆ. ಮಾರ್ಕೆಟ್ ಸಂಜೀವಪ್ಪನವರು ಅಲ್ಲಿದ್ದರು. ಲಾಠೀಹಿಡಿದ ೩-೪ ರನ್ನು ನಾನು ಕಣ್ಣಾರ ಕಂಡೆ. ರಸ್ತೆಯ ಎರಡು ಕಡೆ ಗುಂಪಿತ್ತು. ಡಿ. ಸಿ. ಯವರು ಚೌಕದಲ್ಲಿದ್ದರು. ನಾನು ಅವರಿಗೆ ಅರೆಸ್ಟುಮಾಡಿರೆಂದು ಹೇಳಿದೆ. ಅವರು "ಇದು ಸಮಯವಲ್ಲ" ಅಂದರು.

ಶ್ರೀ ನಾಗಪ್ಪನವರು ಪ್ರಶ್ನೆಹಾಕಲು 'ನಾನು ಮುಷ್ಕರಕ್ಕೆ ಸೇರಿದವನಲ್ಲ. ನನಗೆ ಲಾ ಗೊತ್ತಿಲ್ಲ ವಾದರೂ ದಸ್ತಗಿರಿ ಮಾಡೆಂದು ಯಾಕೆ ಹೇಳಬೇಕೋ ಅದು ಗೊತ್ತಿದೆ. 'ಅಬ್ಬಾಸಖಾನ ಸತ್ತ, ದಿವಾನರು ಸತ್ತರೆಂಬ' ಕೂಗು ನಾನು ಕೇಳಲಿಲ್ಲ' ಎಂದು ಹೇಳಿದರು.

ಮಿ|| ಅಬ್ದುಲ್‌ಸಮತ್ ಖಾನ್

(ಪೋಲೀಸ್ ಸಬ್ ಇನ್‌ಸ್ಪೆಕ್ಟರ್)

"೨೦೦—೩೦೦ ಹಿಂದುಗಳು ಲಾಠೀ ಹಿಡಿದಿದ್ದರು"

ಬೆಂಗಳೂರಲ್ಲಿ ೩ ತಿಂಗಳ ಸರ್ವೀಸಾಗಿದೆ. ಗಲಾಟೆಯೆಲ್ಲ ಆದಮೇಲೆ ಸುಮಾರು ೮ ಘಂಟೆಗೆ ನಾನು ಶಾಲೆಯ ಬಳಿ ಹೋದೆ. ಗಲಾಟೆಯಾಗುವಾಗ ಉಪ್ಪಾರ್‌ಪೇಟೆ ಸ್ಟೇಷನ್ ಬಳಿ ಇದ್ದೆ. ಅಲ್ಲಿ ಮಾರಾಮಾರಿಯಾಗುತ್ತಿದೆಯೆಂದು ಕೇಳಿ ಮಾರ್ಕೆಟ್ ಪೋಲೀಸು ಸ್ಟೇಷನ್‌ಮೂಲಕ ಶಾಲೆಗೆ ಹೋದೆ. ನಾನು ಹೋದಾಗ ಸು. ೩೦-೪೦ ರಿಸರ್ವಿನವರೂ, ಸವಾರರೂ ಜನರನ್ನು ಚದರಿಸುತ್ತಿದ್ದರು. ೧೦ ಘಂಟೆಯವರೆಗೂ ಅಲ್ಲಿದ್ದೆ. ಕೆಲವರು ಗುಂಡುಗಳು ಹಾರಿತೆಂದು ಹೇಳಿದರು; ಕೆಲವರು ಬೆಳ್ಳುಳ್ಳಿ ಪಟಾಸೆಂದು ಹೇಳಿದರು. ಹಿಂದುಗಳು ಎಲ್ಲಕಡೆ ಇದ್ದರು. ಠಾಣಾ ಸಿಂಗನಪೇಟೆ ಕಡೆ ಮುಸಲ್ಮಾನರಿದ್ದರು. ಎರಡು ಪಂಗಡಗಳ ಜನರ ಕೆಲವರ ಕೈಯ್ಯಲ್ಲೂ ಲಾಠಿಗಳಿದ್ದುವು.

ಶ್ರೀ ರಾಮರಾಯರು ಅವರು ಹೀಗೆ ಹೇಳಿದರು

ಬೆಂಗಳೂರಲ್ಲಿ ಕೊಂಚಕಾಲ ಪ್ರೊಬೇಷನರಾಗಿದ್ದು ಬಿಡದಿಗೆ ಹೋದೆ. ಆಮೇಲೆ ಬೆಂಗಳೂರಿಗೆ ಬಂದೆ. ಮೈಸೂರು ರಸ್ತೆ ರಿಸರ್ವ್ ಲೈನಿನಲ್ಲಿದ್ದೇನೆ. ನಾನು ಕೈವಾರದವ. ನಾಲಬಂದವಾಡಿಚೌಕ ನೋಡಿದ್ದೇನೆ. ಅಲ್ಲಿ ಸುಮಾರು ೧೦-೧೫ ಮುಸಲ್ಮಾನ ಮನೆಗಳಿರಬಹುದು. ನಾಲಬಂದ ಚೌಕದ ಬಳಿ ೪೦-೫೦ ಮಂದಿ ಮುಸಲ್ಮಾನರ ಗುಂಪಿತ್ತು. ನಾನು ಹೋದಾಗ ಡಿ. ಎಸ್. ಪಿ, ಡಿ. ಸಿ. ಯರನ್ನು ಕಂಡೆ ಐ. ಜಿ, ಎ. ಎಸ್. ಪಿ. ಗಳನ್ನು ನಾನು ನೋಡಲಿಲ್ಲ. ಶೇಷಾದ್ರಿಯನ್ನು ಮಾರ್ಕೆಟ್‌ಸ್ಟೇಷನ್ ಬಳಿ ಗಾಯಪಟ್ಟಿದ್ದಾಗ ಕಂಡೆ. ಸೈಕಲ್‌ಷಾಪ್ ಬಳಿ ಮುಸಲ್ಮಾನರನ್ನು ನೋಡಲಿಲ್ಲ. ಆ ಮನೆ ಮಹಡಿ ನಾನು ಇದುವರೆಗೆ ಹತ್ತಿಲ್ಲ. ೨೦೦-೩೦೦ ಹಿಂದುಗಳು ಲಾಠಿಗಳನ್ನು

ಹಿಡಿದಿದ್ದರು. ಒಣಗಿದ್ದ ಬೊಂಬುಗಳು ಹಿಡಿದಿದ್ದರು. ಡಿ. ಎಸ್. ಪಿ. ಯನ್ನು ಜೌಕದಲ್ಲಿ ನೋಡಿದೆ. ಎಲ್ಲರೂ ಅವರ ಸಂಗಡ ಮಾತಾಡುತ್ತಿದ್ದರು. ನಾನು ಜನರಿಗೆ 'ಹೋಗಿ ಹೋಗಿ' ಎಂದು ಹೇಳುತ್ತಿದ್ದೆ. ಡಿ. ಸಿ. ನನಗೇನೂ ಆಜ್ಞೆಮಾಡಲಿಲ್ಲ. ನಾನು ಯಾರ ಕೈಯಿಂದಲೂ ಲಾಠಿಗಳನ್ನು ಕಿತ್ತುಕೊಳ್ಳಲಿಲ್ಲ. ಖಾನರ ಮನೆಯ ಬಳಿ ಮುಸಲ್ಮಾನರನ್ನು ನೋಡಲಿಲ್ಲ. ಆ ಮನೆಗೂ ಹೋಗಲಿಲ್ಲ. ಖಾನರನ್ನೂ ನೋಡಲಿಲ್ಲ. ಆ ರಾತ್ರಿ ಮಸೀದಿಯೊಳಕ್ಕೆ ಹೋಗಲಿಲ್ಲ. ಅಲ್ಲೇನೂ ನಾನು ಅತಿಶಯ ನೋಡಲಿಲ್ಲ. ಅಲ್ಲಿ ಕಲ್ಲು ಬಿದ್ದ ವಿಚಾರವೇ ನನ್ನ ಕಿವಿಗೆ ಬೀಳಲಿಲ್ಲ. ನಾನು ಶಾಲಾ ಅಂಗಳಕ್ಕೆ ಹೋಗಲಿಲ್ಲ. ಯಾರನ್ನೂ 'ಅರೆಸ್ಟು'ಮಾಡುವ ಆಜ್ಞೆ ಬರಲಿಲ್ಲ! ಹಾಗೆ ಕೇಳುವ ಬುದ್ಧಿಯೇ ನನಗೆ ಹೊಳೆಯಲಿಲ್ಲ.

೨೫ನೇ ತಾರೀಖಿನಿಂದ ಹುಡುಗರ ಗುಂಪನ್ನು ಹಿಂಬಾಲಿಸುತ್ತಿದ್ದೆ. ಉಪನ್ಯಾಸಗಳನ್ನು ಕೇಳಿದೆ. ಮಾರ್ಕೆಟ್‌ಬಳಿ ಶ್ರೀ ಸುಬ್ರಹ್ಮಣ್ಯಂ ಉಪನ್ಯಾಸ ಕೊಟ್ಟರು. ಸುಮಾರು ೩೦೦ ಹುಡುಗರಿದ್ದರು ಭಾಷಣದಲ್ಲಿ :

'ಮುಸಲ್ಮಾನರು ಅಕ್ಕಿಮೂಟೆಯಲ್ಲಿ ಕಲ್ಲುಗಳ ಹಾಗಿದ್ದಾರೆ. ಹಿಂದೂಗಳೆಲ್ಲ ಎಕವಾದರೆ ಅವರೆಲ್ಲಿ?'

'ಶಿಕ್ಷಣ ಶಾಖಾಧಿಕಾರಿಗಳು ಅವರ ಧರ್ಮವನ್ನು ಮರೆತಿದ್ದಾರೆ. ಗಣೇಶನ ವಿಚಾರ ಅವರಿಗೆ ಗೊತ್ತಿದ್ದರೂ, ಯಾರ ಮಾತನ್ನೋ ಕೇಳಿ ಹೀಗೆ ಮಾಡಿದ್ದಾರೆ.' ಮುಂತಾದ ಮಾತುಗಳಿದ್ದುವು.

ನಾನು ಭಾಷಣ ಬರಕೊಳ್ಳಲಿಲ್ಲ. ಕೆಲವು ಅಂಶಗಳನ್ನು ಮಾತ್ರ ಇಂಗ್ಲಿಷಿನಲ್ಲಿ ಗುರುತಿಸಿದೆ. ಎ. ಎಸ್. ಪಿ. ಗೆ ಕಳಿಸಿದೆ ಆ ವರದಿಯಲ್ಲಿ ಅಕ್ಕಿ ಮೂಟೆ ವಿಚಾರ ಮಾತ್ರ ಬರೆಯಲಿಲ್ಲ.

ಹುಡುಗರನ್ನು ದಸ್ತಗಿರಿ ಮಾಡಲು ಆಜ್ಞೆ ಬರಲಿಲ್ಲ. ಅವರನ್ನು ಕಾಯುವಂತೆ ಹೇಳಿದ್ದರು. ಮಾ ಮೂಲುಪೇಟೆ ಬಳಿ ಹುಡುಗರು ಕಲ್ಲೆಸೆದರು. ಯಾರಿಗೂ ಗಾಯವಾಗಲಿಲ್ಲ. ೩೦ನೇ ತಾರೀಖಿನ ವರೆಗೂ ಅದೇ ಆಜ್ಞೆ.

೨೯ನೇ ತಾ॥ ಬೆಳಿಗ್ಗೆ ಶಾಲೆಗೆ ಹೋದೆ. ಸುಮಾರು ೮॥ ಘಂಟೆ. ಜನಾನಾ ಗಾಡಿಗಳು ಶಾಲೆಗೆ ಬಂದವು. ಅವುಗಳನ್ನು ಹುಡುಗರು ಅಡ್ಡಿಪಡಿಸಿದರು. ಮುಸಲ್ಮಾನರು ನನಗೆ ಬಂದು ಹೇಳಿದರು. ನಾನು ಅಲ್ಲಿಗೆ ಹೋಗಿ ಗಾಡಿಗಳನ್ನು ಬಿಡಿಸಿದೆ. ಆಮೇಲೆ ಅವರು ಎ. ಎಸ್. ಪಿ ಬಳಿ ಹೋದರು. ಸುಬ್ರಹ್ಮಣ್ಯಂ, ತಿವಾರಿ, ಭೀಮರಾವುಗಳಿದ್ದರು. ಮಧ್ಯಾಹ್ನ ಮುಂದಾಳುಗಳನ್ನು 'ಸತ್ಯಾಗ್ರಹ ನಿಲ್ಲಿಸಿ' ನಾವು ನೋಡಿಕೊಳ್ಳುತ್ತೇವೆ. ಎಂದು ಹೇಳಲು ಗರುಡಾಚಾರ್ಯರೇ ಮುಂತಾದವರು ಬಂದಿದ್ದರು. ಭೀಮರಾವ್, ತಿವಾರಿ ಒಪ್ಪಿದರು. ಆದರೆ ಸುಬ್ರಹ್ಮಣ್ಯಂ ಒಪ್ಪಲಿಲ್ಲ. "ಗಣೇಶನನ್ನು ಬಿಡುವವರೆಗೂ ನಿಲ್ಲಿಸುವುದಿಲ್ಲ" ಅಂದರು.

೨೯ನೇ ತಾ॥ ಸರ್ವಾಧಿಕಾರಿಗಳನ್ನು ಮಧ್ಯಾಹ್ನ ೨ ಘಂಟೆಗೆ ನೋಡಿದೆ. ಅವರನ್ನು ನಾಯಕರನ್ನಾಗಿ ಮಾಡಿದರು. ಮ್ಯಾಥನರು ಬಂದಾಗ ನಾನು ನಾಲ ಬಂದವಾಡಿ ಜೌಕದಲ್ಲಿದ್ದೆ.

ಶ್ರೀ ಮೊದಲಿಯಾರ ಪ್ರಶ್ನೋತ್ತರಗಳಿಂದ ಈ ವಿಷಯಗಳು ಹೊರಬಿದ್ದವು.

ನಾನು ಎ. ಎಸ್. ಪಿ. ಗೆ ಕಳಿಸಿದ ವರದಿಯಲ್ಲಿ ೧ ಘಂಟಿವರೆಗಿದ್ದೆ" ಎಂದು ಹೇಳಿದ್ದೇನೆ. ಇಲ್ಲಿ ಹತ್ತು ಘಂಟಿವರೆಗೆಂದು ಹೇಳಿದೆ. ಜೌಕದಲ್ಲಿದ್ದೆ. ಡಿ. ಎಸ್. ಪಿ. ಯನ್ನು ಕಂಡೆ. ನಾನು ಐ. ಜಿ. ಯನ್ನು ರಾತ್ರಿ ನೋಡಲೇ ಇಲ್ಲ. (ಡೈರಿಯನ್ನು ಓದೆಂದು ಹೇಳಲು ಓದಿದರು. ಅದರಲ್ಲಿ 'ಐ. ಜಿ. ಯನ್ನು ಕಂಡೆ' ಎಂದಿತ್ತು. ಆಮೇಲೆ ಕಂಡೆನೆಂದರು.) ಮಾರನೆಯ ದಿನ ಅವರಿಗೆ ಎಟುಬಿತ್ತೆಂದು ಕೇಳಿದೆ. ಡಿ. ಎಸ್. ಪಿ. ಸಂಗಡ ಖಾನರ ಮನೆಗೆ ಹೋಗಲಿಲ್ಲ. ಅವರ ಮನೆಗೇ ಹೋಗಲಿಲ್ಲ. ಗಾಯಪಟ್ಟವರೊಬ್ಬರನ್ನೂ ನೋಡಲಿಲ್ಲ. ಡಿ. ಎಸ್. ಪಿ. ಖಾನರ ಮನೆಗೆ ಹೋದದ್ದನ್ನು ನೋಡಲಿಲ್ಲ.

ಗುಂಡು ಬಿತ್ತೆಂದು ಕೇಳಿದೆ.

ಶ್ರೀ ಮೊದಲಿ—ಸುಬ್ರಹ್ಮಣ್ಯಂ ಆಗಾಗ ಮಾಡಿದ ಉಪನ್ಯಾಸಗಳಲ್ಲಿ ಹೇಳಿದ್ದೇನು?

ಉ—ಮುಷ್ಕರ ನಡೆಸಿ. ಸರ್ಕಾರಕ್ಕಾಗಲಿ, ಪೋಲೀಸಿನವರಿಗಾಗಲಿ ಹೆದರ ಬೇಡಿ. ಧರ್ಮ ಹೆಚ್ಚು. ಮೇಲೂ ತುರುಕರೆ, ಕೆಳಗೂ ತುರಕರೆ. ಗಣೇಶನ ವಿಚಾರ ಬಿಟ್ಟುಬಿಟ್ಟರೆ ಹಿಂದೂ ದೇವಾಲಯಗಳೆಲ್ಲ ನಾಶವಾಗುತ್ತವೆ.

ನಾಗಪ್ಪ—ಬೀದಿಯಲ್ಲಿ ಹುಡುಗರೇನು ಕೂಗುತ್ತಿದ್ದರು?

ಉ—ಅಬ್ಬಾಸಖಾನ್ ಸತ್ತನೆಂದು ಒಂದೆರಡು ಸಾರಿ ಹೇಳಿದರು.

ಶ್ರೀ ನಾಗಪ್ಪ—ಗಲಾಟೆಯಾಯಿತಲ್ಲ ಮೊದಲು ಆರಂಭಿಸಿದವರು ಯಾರು?

ಉ—ನನಗೆ ಗೊತ್ತಿಲ್ಲ. ಮುಸಲ್ಮಾನರ ಮೇಲೆ ಹಿಂದೂಗಳೂ, ಹಿಂದೂಗಳ ಮೇಲೆ ಮುಸಲ್ಮಾನರೂ ಹೇಳುತ್ತಾರೆ. ಅವರ ಮಾತೂ ನಿಜ ಇರಬಹುದು ಇವರ ಮಾತೂ ನಿಜ ಇರಬಹುದು. ಸುಳ್ಳು ಇರಬಹುದು. ಇಬ್ಬರೂ ಸಿದ್ಧರಾಗಿರಲಿಲ್ಲ.

ಶ್ರೀ ಕಲಾಮಿ—ಹುಡುಗರು ಏನು ಹೇಳುತ್ತಿದ್ದರು? ಉದ್ರೇಕ ಭಾಷಣಗಳಾದುವೊ?

ಉ—ಗಣೇಶನನ್ನು ಪ್ರತಿಷ್ಠೆ ಮಾಡಲು ಆಜ್ಞೆ ಕೊಡಿ ಎಂದು ಕೇಳುತ್ತಿದ್ದರು. ಬೀದಿಗಳಲ್ಲಿ ಆಗಾಗ ಅಬ್ಬಾಸಖಾನ್ ಸತ್ತನೆಂದು ಕೂಗುತ್ತಿದ್ದರು.

ಕಲಾಮಿ—ಹುಡುಗರಿಗೆ ತಿಂಡಿಕೊಟ್ಟು ಪ್ರೋತ್ಸಾಹಿಸಿದವರು ಯಾರು?

ಉ—ಆರ್ಯಭವನದವರು, ಇನ್ನೂ ಇತರರು.

ಕಲಾಮಿ—ಹುಡುಗರ ಸಂಗ್ರಾಮ ಶಬ್ದವೇನು?

ಉ—ಗಾಂಧೀಕಿ ಜೈ! ಗಣೇಶಾಕಿ ಜೈ!

ಕಲಾಮಿ—ಪ್ರತಿ ಮುಸಲ್ಮಾನರ ಅಂಗಡಿಗಳ ಮುಂದೆ ಹುಡುಗರು ನಿಂತು ಅವರನ್ನು ರೇಗಿಸುವಂತೆ ಅಸಹ್ಯಪಡಿಸುವಂತೆ ಮಾತನಾಡುತ್ತಿದ್ದರೊ?

ಉ—ನನಗೆ ಗೊತ್ತಿಲ್ಲ.

ಅಧ್ಯಕ್ಷ—ಪ್ರೆಸ್ಸಿನವರಲ್ಲಿ ಯಾರಾದರೂ ಬಂದರೊ?

ಉ—ನನಗೆ ಗೊತ್ತಿಲ್ಲ. ಅವರು ಕೊಡೋಸುದ್ದಿಯೆಲ್ಲ ಶುದ್ಧಸುಳ್ಳು. ಉತ್ಪ್ರೇಕ್ಷೆಮಾಡುತ್ತಾರೆ.

ಮೊದಲಿ—ಸುಬ್ರಹ್ಮಣ್ಯಂ 'ಮೇಲೂ ತುರುಕರು, ಕೆಳಗೂ ತುರುಕರು' ಎಂದು ಹೇಳಿದಿರೆಂದು ತಿಳಿಸಿದಿರಲ್ಲಾ ಅದನ್ನು ನಿಮ್ಮ ಡೈರಿಯಲ್ಲಿ ಬರೆದಿದ್ದೀರೊ?

ಉ—ಇಲ್ಲ.

ಮೊದ—ಇದು ಬರೆಯತಕ್ಕದ್ದಲ್ಲವೊ?

ಉ—ಹೌದು ಬರೆಯಲಿಲ್ಲ.

ಮೊದ—ದಿವಾನರು ಸತ್ತರೆಂದು ಯಾರಿಂದಲಾದರೂ ಕೇಳಿದಿರೊ?

ಉ—ಇಲ್ಲ. ನನಗೆ ನೆನಪಿಲ್ಲ.

ಮೊದ—ನೀವು ಎ. ಎಸ್. ಪಿ. ಗೆ ವರದಿಕೊಟ್ಟಿದ್ದೀರಲ್ಲ. ಅದನ್ನು ಬರೆದದ್ದು ಯಾರು?

ಉ—ಲಕ್ಷ್ಮಣಯ್ಯರು ಬರೆದರು. ನಾನು ಸಹಿ ಹಾಕಿದೆ.

ಅಧ್ಯಕ್ಷ—ಇನ್ನೇನಾದರೂ ಗುಟ್ಟಾಗಿ ಬೇಕಾಗಿದ್ದರೆ ಹೇಳಿ.

ಉ—ರಹಸ್ಯವಾಗಿ ಹೇಳಬೇಕಾದ್ದೇನೂ ಇಲ್ಲ. ಎಲ್ಲ ಸತ್ಯವಾಗಿ ಹೇಳಿದ್ದೇನೆ.

ಶ್ರೀ ಸೋಮಶೇಖರರಾವ್

(ವಕೀಲರು, ಬೆಂಗಳೂರು ನಗರ)

"ಸೈನ್ಯತರಿಸಲಿಕ್ಕೆ ಎಳ್ಳಷ್ಟೂ ಕಾರಣವಿಲ್ಲ"

ರಾಯರು ತಾವು ಬರೆದು ತಂದ ಲೇಖನವನ್ನು ಓದಿ ಅದರಲ್ಲಿ ಗಣೇಶನ ಕತೆ, ಮುಂದಾಳುಗಳ ದಸ್ತಗಿರಿ, ಅವರ ವಿಚಾರಣೆಗಾಗಿ ತಾವು ದಿವಾನರೊಂದಿಗೂ, ಇತರ ಅಧಿಕಾರಿಗಳೊಂದಿಗೂ ನಡೆಸಿದ ಸಂಧಾನ, ಸರ್ಕಾರದ ವೈದಾಸೀನ್ಯ ಮುಂತಾದ ವಿಚಾರಗಳನ್ನೆಲ್ಲ ತಿಳಿಸಿದರು. ಅನಂತರ ಶ್ರೀ ರಾಮರಾಯರು ಪ್ರಶ್ನೆಮಾಡಲು ಈ ರೀತಿ ಹೇಳಿದರು :

ಜುಲೈ ೧೫ನೆ ಸುಮಾರಿನಲ್ಲಿ ಈ ವಿಚಾರ ನನ್ನ ಕಿವಿಗೆ ಬಿತ್ತು. ೨೯ನೇ ತಾರೀಖಿನವರೆಗೆ ಯಾರೂ ಈ ವಿಚಾರಕ್ಕೆ ತಲೆ ಹಾಕಿದವರಾಗಿಲ್ಲ. ೨೯ನೇ ತಾರೀಖಿನ ದಿನ ನಾನು ಕೆಲಸದಿಂದಾಗಿ ಜರ್ಜರಿತನಾಗಿದ್ದೆ. ೨೯ ರಿಂದ ೩೧ ರವರೆಗೂ ಆ ರಸ್ತೆಯಲ್ಲಿ ಯಾರೂ ಅಡ್ಡಿಮಾಡಲಿಲ್ಲ. ೩೧ನೇ ತಾ॥ ಬೆಳಿಗ್ಗೆ ಶಾಲೆಗೆ ಹೋದೆ. ದೊಡ್ಡ ಗುಂಪಿತ್ತು, ಎಸ್. ಮ್ಯಾಥೆನರು ಬಂದರು. ತರ್ಮರು ಮಾತನಾಡುತ್ತಿದ್ದರು. ನಡೆದದ್ದನ್ನೆಲ್ಲ ಕಂಡು ಆ ಸಚಿವರು ಗಣೇಶನನ್ನು ಬಿಡುಗಡೆ ಮಾಡಿಬರು.

೧೧–೨ ಘಂಟೆ ಸುಮಾರಿಗೆ ಅಶೋಕಾಕಜೇರಿಗೆ ಹೋದೆ ೨೦೦–೩೦೦ ಹುಡುಗರಿದ್ದರು. ಪೋರ್ಟಿಕೋದಲ್ಲಿ ಸಣ್ಣ ಪಣ್ಣ ಹುಡುಗರು ಕೂತಿದ್ದರು. ದಿವಾನರನ್ನು ಕಂಡು ಮುಂದಾಳುಗಳನ್ನು ಬಿಡುಗಡೆ ಮಾಡಿಸಬೇಕೆಂಬುದೇ ಅವರ ಆಶೆಯಾಗಿತ್ತು. ಅವರು ಯಾರೂ ಕಟ್ಟಡದೊಳಕ್ಕೆ ನುಗ್ಗಲಿಲ್ಲ. ನಾನು ಕಛೇರಿಯಲ್ಲಿ ಸು. ೪ ಘಂಟೆವರೆಗೂ ಇದ್ದೆ. ಹುಡುಗರು ಕಲ್ಲು ಬೀರಿದ್ದನ್ನು ನಾನು ನೋಡಲಿಲ್ಲ. ಸವಾರರಿಗೆ ಎಲ್ಲಿ ಯಾವಾಗ ಕಲ್ಲುಬಿತ್ತೋ ನಾನು ಕಾಣೆ. ಭಲ್ಯದ ಸವಾರರು ಹುಡುಗರನ್ನು ಅಟ್ಟಿಕ್ಕೊಂಡು ಹೋಗುತ್ತಿದ್ದರು. ಅನೇಕರಿಗೆ ಗಾಯಗಳಾದುವೆಂದೂ ಅವರನ್ನು ಆಸ್ಪತ್ರೆಗೆ ಸಾಗಿಸಿದರೆಂದೂ ಕೇಳಿದೆ. ಭಲ್ಯದವನ್ನೊಬ್ಬ ಸವಾರನು ಹುಡಗನೊಬ್ಬನ ಕುತ್ತಿಗೆಗೆ ಗುರಿಯಿಟ್ಟದ್ದನ್ನು ನಾನು ಕಣ್ಣಾರೆ ಕಂಡೆ. ಅಲ್ಲಿಂದ ಜೈಲುಕಡೆ ಹೋದೆ.

(೨೦–೯–೧೯೨೮)

ಶ್ರೀ ರಾಮರಾಯರ ಪ್ರಶ್ನೆಗಳಿಗೆ—

೩೧ನೇ ತಾರೀಖಿನ ದಿನ ಸಿಡಿಮದ್ದಿನ ಮೋಟಾರುಗಳು ಓಡಾಡುತ್ತಿದ್ದವು. ಜನರು ಗುಂಪುಗುಂಪಾಗಿ ತಿರುಗಾಡುತ್ತಿದ್ದರು. ಬಹುತರ ಕೆಲವರು ತಮಾಷೆಗಾಗಿರಬಹುದು. ಕೆಲವರು ಭಯಭ್ರಾಂತಿಯಿಂದ ಇರಬಹುದು. ಅಸ್ಕಾನಿಯಾ ನಾಟಕಶಾಲೆಯ ಬಳಿ ಒಬ್ಬ ಗುಮಾಸ್ತರನ್ನು ಮುಸಲ್ಮಾನರು ಹೊಡೆದರೆಂದು ಕೇಳಿದೆ. ಬಿನ್ನವತ್ತಳೆಗೆ ನಾನೂ ಸಹಿ ಹಾಕಿದ್ದೇನೆ. ಖಾನರ ಜೊತೆಯಲ್ಲಿ ಯಾರು ಕೆಲಸ ಮಾಡುತ್ತಿದ್ದರೋ ನನಗೆ ಗೊತ್ತಿಲ್ಲ. ೩೦ನೇ ತಾರೀಖಿನ ಅನಂತರ ಶ್ರೀ ಕಲೀಲ್, ಹಯವದನರಾವ್, ಮೈ. ಎ. ಅಯ್ಯ, ಶಿದ್ಧವೀರಪ್ಪ, ಮುಂತಾದವರು ಅವರ ಬಳಿ ಓಡಾಡುತ್ತಿದ್ದಾರೆ. ಹುಡುಗರು ದಿವಾನರ ಕೋಣೆಗೆ ಹೋಗಲು ಎತ್ನಿಸಲೇ, ಇಲ್ಲ. 'ಹುಡುಗರು ನನ್ನ ಮನೆ ಬಳಿ ದುಡುಕಿದರು ನಾನವರನ್ನು ನೋಡುವುದಿಲ್ಲ' ವೆಂದು ದಿವಾನರು ಹೇಳಿದರು. ಸೈನ್ಯಬಲ ತರಲಿಕ್ಕೆ ಎಳ್ಳಷ್ಟೂ ಕಾರಣವಿರಲಿಲ್ಲ. ಪರಿಸ್ಥಿತಿಯನ್ನು ಕಡೆಗಣಿಸಲಾಗಿತ್ತು. ಸೈನ್ಯತರಿಸಲಿಕ್ಕೆ ಸರ್ಕಾರದವರ ಪ್ರಕಟನೆಯ ಮುಂಚಿತವಾಗಿಯೇ ೩೧ನೇ ತಾರೀಖು ಊರಿನಲ್ಲಿ ಹಿಂದೂಗಳಿಗೆ ಮುಸಲ್ಮಾನರಿಂದ ಭಯವಿತ್ತು. ಮುಸಲ್ಮಾನರ ವಿಚಾರ ನನಗೆ ಗೊತ್ತಿಲ್ಲ. ಪರಮಶಿವಯ್ಯರಿಗೂ ನನಗೂ ಈ ವಿಚಾರದಲ್ಲಿ ಸಂಬಂಧವೇ ಇಲ್ಲ. ಶ್ರೀಯವರು ಅಯ್ಯರನ್ನು ಏನಾ ಕೇಳಿದ್ದೇನೆ." ಅಂದರು.

ಶ್ರೀ ನಾಗಪ್ಪನವರ ಪ್ರ

ಮಿಲ್ಲರ್ ಕಮಿಟಿ ವಿ

ಮುಖ್ಯಾಂಶದವರಿಗೆ ಸ

ಬ್ರಾಹ್ಮಣರಿಗೆ

ಹುದು. ಬ

ಯೇ ಇಲ್ಲ ಕ

ಷವಿಲ್ಲ. ಪ್ರ. ಪ್ರ. ಸಭೆಯಲ್ಲಿ ವಿ. ಕ. ಶಿಫಾರಸು ವಿಚಾರದಲ್ಲಿ ಚರ್ಚೆ ಬಂದಾಗ ಬ್ರಾಹ್ಮಣರೊಬ್ಬರೂ ಇದಕ್ಕೆ ಬಾಯಿಹಾಕಲಿಲ್ಲ. ಬ್ರಾಹ್ಮಣೇತರರು ದಿವಾನರನ್ನು ಧಿಕ್ಕರಿಸಿದರು. ತತ್ವಗಳ ಮೇಲೆ ಬ್ರಾಹ್ಮಣ ಬ್ರಾಹ್ಮಣೇತರರಿಗೆ ಪ್ರಜಾಪ್ರತಿನಿಧಿಸಭೆ, ನ್ಯಾಯವಿ ನಾಯಕಸಭೆಗಳಲ್ಲಿ ವ್ಯತ್ಯಾಸವೇ ಇಲ್ಲ. ಒಂದು ಪಕ್ಷದವರು ಕೋಮುವಾರಿನವರು, ಇನ್ನೊಂದು ಪಕ್ಷದವರು ಕೋಮುವಾರು ತತ್ವವಿರೋಧಿಗಳು. ಇದು ಪ್ರಗತಿಪಕ್ಷ. ಅದು ಬ್ರಾಹ್ಮಣಪಕ್ಷವಲ್ಲ. ಅನೇಕ ಬ್ರಾಹ್ಮಣೇತರರೂ ಅಲ್ಲಿ ಇದ್ದಾರೆ. ಕೋಮುವಾರು ಪ್ರಶ್ನೆ ಜರ್ಚೆಬಂದಾಗಲೆಲ್ಲ ಪ್ರಗತಿಪಕ್ಷ ಸದಸ್ಯರು ಮೌನವನ್ನು ವಹಿಸುತ್ತೇವೆ.

ಖಾನರು ಬ್ರಾಹ್ಮಣೇತರ ನಾಯಕರಾಗಿದ್ದರು, ಏಕೋ ನನಗೆ ಗೊತ್ತಿಲ್ಲ. ಬೆಂ. ಪೌರಸಭಾಧ್ಯಕ್ಷಪದವಿಯ ವಿಚಾರದಲ್ಲೂ, ಪೌರಸಭಾ ಕಾರ್ಯವಿಚಾರದಲ್ಲೂ ಅಷ್ಟೇನೂ ಅಸಮರ್ಪಕ ಸಮಾಚಾರಗಳೇನೂ ಇಲ್ಲ. ಏನೋ ಕೊಂಚ ಅಂತಃಕಲಹಗಳಿದ್ದವು. ಅಶ್ವತ್ಥಕಟ್ಟೆಗಳನ್ನು ಕಡಿದ ವಿಚಾರ ಮುಂತಾದವುಗಳಲ್ಲಿ ಜನರಿಗೆ ಕೊಂಚ ಅಸಮಾಧಾನವಿದ್ದೇ ಇರಬೇಕು. ಶ್ರೀ ರಾಜು, ಶಾಮರಾಯರು ಖಾನರ ಮಿತ್ರರಾಗಿದ್ದರು. ಈಗ ಅವರವರಿಗೆ ಆಗುವುದಿಲ್ಲ. ಮೈಸೂರ ಬ್ಯಾಂಕಿನ ವಿಚಾರದಲ್ಲಿ ರಾಜುಯವರು ಹೊಡೆದಾಡಿದರು. ಅಯ್ಯರು ಭದ್ರಾವತಿ ವಿಚಾರದಲ್ಲಿ ಲೇಖನಗಳನ್ನು ತೀವ್ರವಾಗಿ ಬರೆಯುತ್ತ ಬಂದರು. 'ಪ್ರಜಾಮಿತ್ರ'ಕ್ಕೆ ಅಯ್ಯರವರು ಬರೆಯುತ್ತಿದ್ದರು. ರಾಜು–ಪ್ರಜಾಮಿತ್ರ ಜಾಂಧವ್ಯ ನನಗೆ ಗೊತ್ತಿಲ್ಲ. ಪ್ರಜಾಮಿತ್ರ ಪೈಸ್ಸನ್ನು ಸರ್ಕಾರದವರು ಕಿತ್ತುಕೊಂಡರು.

ಪೈಸ್ಸಿನಲ್ಲಿ ಸುಳ್ಳುಸುಳ್ಳು ಬರೆಯುತ್ತಿದ್ದಾರೆಂದು ನಾನು ಹೇಳಲಾರೆ. ಕೆಲವೇನೊ ನಿಜವೆಂದೇ ನನಗೆ ತಿಳಿದುಬರುತ್ತದೆ. ಶ್ರೀರಂಗಪಟ್ಟಣ ವಿಚಾರ ಸರಿಯಲ್ಲವೆಂದು ಗೊತ್ತಾಯಿತು. ಗುಡಿಬಂಡೆಯ ವಿಚಾರದಲ್ಲಿ ಸರ್ಕಾರದವರು ಹೇಳಿರುವದನ್ನು ನಾನು ನಂಬುವದಿಲ್ಲ. ಒಟ್ಟಿನಲ್ಲಿ ಪತ್ರಿಕೆಗಳೆಲ್ಲ ಸರಿಯಾಗಿ ಬರೆಯುತ್ತಿವೆ. ಆಗಾಗ ಕೆಲವು ತಪ್ಪುಗಳಿರಬಹುದು. ಹಿಂದೂಮುಹಮ್ಮದೀಯರಿಗೆ ದ್ವೇಷವಿದೆಯೆಂದು ನಾನು ಹೇಳಲಾರೆ. ಅದಕ್ಕೆ ಪತ್ರಿಕೆಗಳು ಕಾರಣವಲ್ಲ.

ಸರ್ಕಾರದವರೇ ತಕ್ಕಮಟ್ಟಿಗೆ ಆಗಿನವರೆಗೆ ಅವರಿಗೆ ತಿಳಿದ ಮಟ್ಟಿಗೆ ಬರೆಯುತ್ತಾರೆ. ಕಮ್ಯೂನಿಕೆಗಳನ್ನು ನೋಡಿ. ಇನ್ನು ಪತ್ರಿಕೆಗಳ ಮಾತೇನು? ಸಣ್ಣ ಹುಡುಗರು ಮುಷ್ಕರಹಿಡಿಯುವುದು ಸರಿಯಲ್ಲವೆಂಬುದು ನನ್ನ ಮತ. ಆದರೂ ಈ ಸಂದರ್ಭದಲ್ಲಿ ಹುಡುಗರು ದುಷ್ಟತನ ಮಾಡಿದರೆಂದೂ, ಹಿಂದೂ ಮಾರ್ಗವಿಘಾತ ಮಾಡಿದರೆಂದೂ ಹೇಳುವ ಮಾತಿನಲ್ಲಿ ನನಗೆ ನಂಬುಗೆಯಿಲ್ಲ.

ಮುಂದಾಳುಗಳನ್ನು ಬಿಡಿಸಲಿಕ್ಕಾಗಿ ಹುಡುಗರು ಮುಷ್ಕರ ಹಿಡಿದರು. ಮುಂಬಾಡರೇನೂ ಪ್ರಯತ್ನ ಮಾಡಿರಲಿಲ್ಲ. ಅವರು ತಪ್ಪಾಯಿತೆಂದು ಕ್ಷಮಾಪತ್ರ ಕೊಡಲು ಸಿದ್ಧರಾದರು. ಆದರೂ ಸರ್ಕಾರದವರು ಒಪ್ಪಲಿಲ್ಲ.

ಪ್ರ—ಹುಡುಗರು ಮಾಡಿದ ಗಲಾಟೆಯಿಂದವು ಕಚೇರಿಯಲ್ಲಿ ಕೆಲಸ ಮಾಡಲಿಕ್ಕಾಗುತ್ತಿತ್ತೆ

ಉ—ಹುಡುಗರ ಗಲಾಟೆ ನಿಮ್ಮ ಕೋಣೆಗೆ ಮುಟ್ಟಲೇ ಇಲ್ಲವಲ್ಲ!

ಪ್ರ—ಹುಡುಗರು ನುಗ್ಗುತ್ತಿದ್ದರು, ಸೇವಕರು ತಡೆಯಲಿಲ್ಲ.

ಅ—ಸೇವಕರೇನು ಪುತ್ಥಳಿ ಗೊಂಬೆಗಳಂತೆ ನಿಂತಿದ್ದರೋ ಹಾಗಾದರೆ ಅಲ್ಲಿ!!

ಉ—ನನಗೆ ತಿಳಿದ ಮಟ್ಟಿಗೆ ಸೈನ್ಯತರಿಸಲಿಕ್ಕೆ ಲೇಶವೂ ಕಾರಣವಿರಲಿಲ್ಲ.

ಸ್ವರಾಜ್ಯ 'ಟೈಮ್ಸ್ ಆಫ್ ಇಂಡಿಯ ಸುದ್ದಿಗಾರರು ಯಾರೋ' ನನಗೆ ಗೊತ್ತಿಲ್ಲ. ಬಿನ್ನವತ್ತಳೆಯ ರಚನೆಗೆ ನನ್ನ ಕೈಯ್ಯೂ ಇದೆ. ನಾನೂ ಸಹಿ ಹಾಕಿದ್ದೇನೆ. ಪೈಸರಾಯರಿಗಾಗಲಿ, ವಿದೇಶ ಪತ್ರಿಕೆಗಳಿಗಾಗಲಿ ಸುದ್ದಿಕಳಿಸಿದ ವಿಚಾರ ನನಗೆ ಗೊತ್ತಿಲ್ಲ. ಸ್ವರಾಜ್ಯಕ್ಕೆ ನಾನು ಹೆಸರು ಹಾಕೇ ಬರೆಯುತ್ತಿದ್ದೇನೆ.

ಪ್ರ—ಈಗಿನ ಸರ್ಕಾರ ನಿಮಗೆ ಇಷ್ಟವೋ

ಉ—ಇಷ್ಟವಾದ ಭಾಗವೂ ಇದೆ. ಅನಿಷ್ಟವಾದ ಭಾಗವೂ ಇದೆ.

ಪ್ರ—ದಿವಾನರವಿಚಾರ.

ಉ—ನಾನೀಗ ಹೇಳಲಾರೆ.

ಶ್ರೀ ಬಸಪ್ಪನವರ ಪ್ರಶ್ನೆಗಳಿಗೆ—

ಸತ್ಯಾಗ್ರಹ ಏರಂಭಿಸಿದ್ದಾರೋ ಗೊತ್ತಿಲ್ಲ. ಶಿಕ್ಷಣ ಶಾಖಾಧಿಕಾರಿಗಳ ಆಜ್ಞೆ ನಿಜವಾಗಿಯೂ ಹುಡುಗರಿಗೆ ಖೇದವುಂಟುಮಾಡಿತು. ಪತ್ರಿಕೆಗಳ ಪ್ರಚಾರದಿಂದ ಆಗಲಿಲ್ಲ.

ಅ—ಪುರಪ್ರಮುಖರೇಕೆ ಉದಾಸೀನಮಾಡಿದರು?

ಉ—ಸ್ಥಿತಿಗತಿಗಳು ಚನ್ನಾಗಿ ಅವರಿಗೆ ಗೊತ್ತಿರಲಿಲ್ಲವಿರಬಹುದು.

ಸರ್ಕಾರದ ಉದಾಸೀನವನ್ನು ನೋಡಿದರೆ ಸತ್ಯಾಗ್ರಹವು ಅನ್ಯಾಯವಾದುದೆಂದು ನಾನು ಹೇಳಲಾರೆ. ಮುಷ್ಕರ ಹಿಡಿದ ಹುಡುಗರು ದಿವಾನರ ಮನೆಬಳಿ ಕೆಲವು ಗಿಡಗಳನ್ನು ಕಿತ್ತರೆಂದೂ, ಹೂಗಳನ್ನು ಕಿತ್ತರೆಂದೂ ಕೇಳಿದ್ದೇನೆ. ಅವರ ಕಾರಿನ ಕಡೆ ಒಂದು ಕಲ್ಲೂ ಬಿತ್ತಂತೆ. ಜಿಲ್ಲಾ ಮ್ಯಾಜಿಸ್ಟ್ರೇಟರು (ದಿವಾನರ ಮನೆಯ ಬಳಿ) ಹುಡುಗರನ್ನು ಹೋಗುವಂತೆ ಆಜ್ಞೆಮಾಡಿದ ಹಾಗೆ ನನಗೆ ಗೊತ್ತಿಲ್ಲ.

ಅ—ಪೋಲೀಸಿನಬಲ ಸಾಕಾದಷ್ಟಿಲ್ಲದಿದ್ದಾಗಲೂ ಸೈನಿಕರನ್ನು ಕರೆಸಬಾರದೋ?

ಉ—ಅದು ಕಟ್ಟಕಡೆಯ ಕೆಲಸ. ಈ ಸಂದರ್ಭದಲ್ಲಿ ಮೊದಲೇ ಮಾಡಿದರು.

ಬ—ಶಿಕ್ಷಣ ಶಾಖಾಧಿಕಾರಿಗಳ ಆಜ್ಞೆಯ ವಿಚಾರದಲ್ಲಿ ಜನರ ಅಭಿಪ್ರಾಯವೇನು?

ಉ—ಜನರಲ್ಲೂಹೆ 'ದಿವಾನರೂ, ಖಾನರೂ ಇಬ್ಬರೂ ಸೇರಿ ಗಣೇಶನನ್ನು ಕದಲಿಸಲಿಕ್ಕೆ ಸೂಚನೆ ಕೊಟ್ಟಿರಬೇಕು'? ಎಂದು.

ಶ್ರೀ ಕಲಾವಿಯವರ ಪ್ರಶ್ನೆಗಳಿಗೆ—

ಪ್ರ—ಮುಸಲ್ಮಾನ ಹುಡುಗರು ಬಾಬಯ್ಯನನ್ನಾಡಬೇಕೆಂದು ಶಾಲೆಯಲ್ಲಿ ಮುಷ್ಕರ ಹಿಡಿದರೆ ಶಾಲೆಯ ಗತಿಯೇನಾಗಬೇಕು?

ಉ—ಅದಕ್ಕೂ ಈ ಗಣೇಶನ ವಿಚಾರಕ್ಕೂ ಸಂಬಂಧವಿಲ್ಲ.

ಪ್ರ—ಸುಲ್ತಾನ್‌ಪೇಟೆ ಶಾಲೆಯು ೧೨ ವರುಷಗಳ ಹಿಂದೆ ಮಾತ್ರ ಅಲ್ಲಿಗೆ ಬಂತು.

ಉ—ಅಬ್ಬಾಸ್ ಖಾನರೇ ೨೦ ವರ್ಷಗಳಿಂದ ಗಣೇಶ ಅಲ್ಲಿತ್ತೆಂದು ಹೇಳಿದ್ದಾರೆ.

ಪ್ರ—ಬ್ರಿಟಿಷ್ ಇಂಡಿಯಾ ಸರ್ಕಾರಕ್ಕೂ, ನಮ್ಮ ಸರ್ಕಾರಕ್ಕೂ ಏನು ವ್ಯತ್ಯಾಸ?

ಉ—ಆ ಶಾಸ್ತ್ರದಲ್ಲಿ ನಾನು ಪ್ರವೀಣನಲ್ಲ. ಕೆಲವು ಸಂದರ್ಭಗಳಲ್ಲಿ ನಮ್ಮ ಸರ್ಕಾರ ಚೆನ್ನಾಗಿದೆ. ಇತರ ದೇಶೀಯ ಸಂಸ್ಥಾನಗಳ ಪ್ರಭುತ್ವಕ್ಕಿಂತ ಚೆನ್ನಾಗಿದೆ.

ಅ—ಅದು ಜುಲೈ ೫೦ಕ್ಕೆ ಮೊದಲು!!

ಪ್ರ—ನಮ್ಮ ಮಹಾರಾಜರು ಪ್ರಜಾರಂಜಕ ಪ್ರಭುಗಳಲ್ಲವೆ?

ಅ—ಆ ಪ್ರಶ್ನೆ ಹಾಕಬೇಡಿ.

ಪ್ರ—ಈಗಿನ ದಿವಾನರ ಆಡಳಿತದಲ್ಲಿ ನಿಮಗೆ ಆಸಮಾಧಾನವೇನು?

ಉ—ನಾನು ಈಗ ಹೇಳಲಾರೆ. ಸಮಾಧಾನಾಂಶವೂ ಇದೆ; ಅಸಮಾಧಾನಾಂಶವೂ ಇದೆ.

ಪ್ರ—ಬ್ರಾಹ್ಮಣೇತರ ಅದರಲ್ಲೂ ಮುಸಲ್ಮಾನ ದಿವಾನರು ಬೇಡವೆನ್ನುವವರಲ್ಲಿ ನೀವೊಬ್ಬರಲ್ಲವೊ.

ಉ—ಅಲ್ಲ. ಆ ಮಾತು ಸುಳ್ಳು.

ಪ್ರ—ಹೋದವರ್ಷ ಪ್ರ. ಪ್ರ. ಸಭೆಯಲ್ಲಿ ಕೆಲವರು ಹೊರಗೆ ಹೋದದ್ದು ದಿವಾನರಿಗೆ ಬುದ್ಧಿಕಲಿಸಲಿಕ್ಕಂತೆ ಹೌದೊ.

ಉ—ಅಲ್ಲ.

ಪ್ರ—ಶ್ರೀ ಮಲ್ಲಪ್ಪ, ಸಂಜೀವಪ್ಪ ಇವರು ನಿಮ್ಮ ಮನೆಯಲ್ಲಿ ಒಂದು ಸಭೆ ಮಾಡಿದರೊ.

ಉ—ಶುದ್ಧ ಸುಳ್ಳು.

ಪ್ರ—ಖಾನರು ಬ್ರಾಹ್ಮಣದ್ವೇಷಿಗಳೊ.

ಉ—ನನಗೆ ಗೊತ್ತಿಲ್ಲ.

ಪ್ರ—ಖಾನರನ್ನು ಮೇಲಿಂದ ಕೆಳಗುರುಳಿಸಲಿಕ್ಕೆ ನೀವೂ ಕೈಹಾಕಿದರೊ.

ಉ—ಆ ಆಪಾದನೆಗೆ ಬುಡವೇ ಇಲ್ಲ. ಅವರು ಮೇಲಿದ್ದರೋ ಎಲ್ಲಿದ್ದರೋ ನನಗೆ ಗೊತ್ತಿಲ್ಲ.

ಪ್ರ—ಗಣೇಶನ ಗಲಾಟೆಯು ಖಾನರನ್ನು ಉರುಳಿಸಲಿಕ್ಕೇ ಅಲ್ಲವೊ.

ಉ—ನನಗೆ ಗೊತ್ತಿಲ್ಲ.

ಪ್ರ—ಇದಕ್ಕೆ ಖಾನರೂ, ದಿವಾನರೂ ಕಾರಣವೆಂದು ನೀವು ನಂಬುವಿರೊ.

ಉ—ಅದು ಜನರ ನಂಬಿಕೆ. ಸರ್ಕಾರದವರು ನಿಜ ಹೇಳಿದರೂ, ಶಿಕ್ಷಣಶಾಖಾಧಿಕಾರಿಗಳೇ ಜಬಾಬುದಾರಿ ತೆಗೆದುಕೊಂಡರೂ ಪತ್ರಿಕಾಕರ್ತರು ಸರ್ಕಾರದ ಹೇಳಿಕೆಯನ್ನು ಅಂಗೀಕರಿಸಲು ಕಾರಣವಿಲ್ಲ. ನಿಜವಾವುದೋ ನನಗೆ ಗೊತ್ತಿಲ್ಲ.

ಪ್ರ—ನಮ್ಮ ದೇಶೀಯ ಪತ್ರಿಕೆಗಳಲ್ಲಿ ಸುಳ್ಳೆಲ್ಲ ಪ್ರಚಾರಮಾಡುತ್ತಿದ್ದಾರೆ—ಮುಸಲ್ಮಾನರ ನೀಚಕೃತ್ಯಗಳು, ದೇವಾಲಯಗಳಲ್ಲಿ ನೀಚಕೃತ್ಯಗಳು ಇತ್ಯಾದಿ, ಇತ್ಯಾದಿ.

ಉ—ಆಗಾಗ ಅವರು ತಿದ್ದಿಕೊಳ್ಳುತ್ತಿದ್ದಾರೆ. ಸರ್ಕಾರದ ತಿದ್ದುಪಡೆಗಳನ್ನು ನಾನು ಪೂರ್ಣ ನಂಬುವುದಿಲ್ಲ.

ಪ್ರ—ಈ ಗಲಾಟೇಕೋರರೇ ಗಿರಣಿ ಕೆಲಸಗಾರರನ್ನು ಮುಷ್ಕರಕ್ಕೆ ಪ್ರೋತ್ಸಾಹಿಸಲಿಲ್ಲವೊ.

ಉ—ನನಗೆ ಗೊತ್ತಿಲ್ಲ. ಮುಷ್ಕರ ಹುಡಿಯಬೇಡಿರೆಂದು ಹೇಳಿದೆನು. ಸುಬ್ರಹ್ಮಣ್ಯಂಗೆ ಅಲ್ಲಿ ಒಂದು ಸಲ ಮಂಗಳಾರತಿಯಾಯಿತು.

ಪ್ರ—ದಿವಾನ ಸತ್ತ, ಅಬ್ಬಾಸಖಾನ ಸತ್ತ, ಸರ್ಕಾರ ಸೋತುಹೋಯಿತು ಎಂದು ಕೂಗು ಕೇಳಿದಿರೊ.

ಉ—ನಾನು ಕೇಳಲೇ ಇಲ್ಲ. ಇನೇ ತಾರೀಖಿನ ದಿನ ಶಾಂತಿಸಾಧನ ಸಭೆಯಲ್ಲಿ ಮೊದಲು ಈ ಮಾತು ಕೇಳಿದೆ.

ಪ್ರ—ಗಣೇಶನ್ನ ಬಿಟ್ಟಮೇಲೂ ಸತ್ಯಾಗ್ರಹಮಾಡುವಂತೆ ನೀವು ಹುಡುಗರನ್ನು ಪ್ರೋತ್ಸಾಹಿಸಿದಿರೊ.

ಉ—ಅದು ಶುದ್ಧಸುಳ್ಳು. ಸತ್ಯಾಗ್ರಹ ನಿಲ್ಲಿಸಿರೆಂದು ನಾನು ಹುಡುಗರಿಗೆ ಹೇಳಿದೆ.

ಪ್ರ – ದಿವಾನರ ಮನೆಗೆ ಹುಡುಗರನ್ನು ಕಳಿಸಿದು ನೀವೇನೋ.

ಉ— ಅದು ಸುಳ್ಳು.

ಪ್ರ—ಭದ್ರಾವತಿ ಇತ್ಯಾದಿಗಳ ವಿಚಾರ ನಿಮ್ಮ ಅಭಿಪ್ರಾಯವೇನು.

ಉ—ಈ ಸಮಿತಿಗೂ ಅವಕ್ಕೂ ಸಂಬಂಧವೇನಿದೆ.

ಪ್ರ—ದಿವಾನರ ಮೇಲಿನ ಕೋಪಕ್ಕಾಗಿ ಬಿನ್ನವತ್ತಳೆ ಮಹಾರಾಜರಿಗೆ ಕೊಟ್ಟಿರೊ?

ಉ—ದಿವಾನರ ಮೇಲೇನೂ ಅದರಲ್ಲಿ ಹೇಳಿಲ್ಲ. ಜನರ ಗೋಳನ್ನು ವರ್ಣಿಸಿದೆ ಅಷ್ಟೆ.

ಪ್ರ—ಜನರ ಹೆಸರಿನಲ್ಲಿ ಸಂಪಾದಕರು ಸಿಕ್ಕಿದಹಾಗೆಲ್ಲ ಬರದರೂ ಸರ್ಕಾರದವರು ಅವರನ್ನು ಮಟ್ಟಹಾಕಚಾರದೋ

ಉ—ಪತ್ರಿಕೆಗಳ ಮೇಲೇನೂ ಮಾಡಲಾಗದು. ಪತ್ರಿಕೆಗಳು ಶಾಶ್ವತಸ್ವಾತಂತ್ರ್ಯ ವಸ್ತುಗಳಾಗಿರಬೇಕು. ಕೋಮುವಾರು ವಿಚಾರ ಚರ್ಚೆಮಾಡಿದ ಮಾತ್ರಕ್ಕೇ ಅವರು ಮಹಾಪಾಪಮಾಡಿದಂತಾಗಲಿಲ್ಲ.

ಪ್ರ—ಪೋಲೀಸಿನವರ ವಿಚಾರದಲ್ಲಿ ನಿಮ್ಮ ಅಭಿಪ್ರಾಯವೇನು?

ಉ—ಈ ಸಂದರ್ಭದಲ್ಲಿ ಅವರು ಕರ್ತವ್ಯಮಾಡಲಿಲ್ಲ. ಸಾಕಾದಷ್ಟು ನಿರ್ವಾಹ ಶಕ್ತಿತೋರಿಸಲಿಲ್ಲ.

ಪ್ರ—ದಿವಾನರನ್ನು ಬದಲಾಯಿಸಿ ಮುತ್ಸದ್ದಿಕೊಂಡಿದ್ದಾಗ ಜಿಲ್ಲಾಧಿಕಾರಿಗಳು ಸುಮ್ಮನಿದ್ದು ನ್ಯಾಯವೋ

ಉ—ಆ ಪರಿಸ್ಥಿತಿ ನನಗೆ ಗೊತ್ತಿಲ್ಲ.

ಪ್ರ—ಈಗಲಾಟಿಗೆಲ್ಲಾ ರಾಜು, ಶಾಮರಾಯ ರೆಷ್ಟುಮಟ್ಟಿಗೆ ಕಾರಣ

ಉ—ಆ ವಿಚಾರ ಹೇಳಲು ನನಗೆ ಶಕ್ತಿಯೂ ಯಿಲ್ಲ. ಉಚಿತವೂ ಅಲ್ಲ.

ಪ್ರ—ಬ್ರಾಹ್ಮಣ ಬ್ರಾಹ್ಮಣೇತರ ಬಾಂಧವ್ಯ ಈಗ ಹೇಗಿದೆ

ಉ—ಏನೂ ವೈರವಿಲ್ಲ. ಕೆಲವರು ಸ್ವಾರ್ಥಿಗಳು ಒಬ್ಬರಮೇಲೊಬ್ಬರನ್ನು ಹಾಕುತ್ತಿದ್ದಾರೆ. ಬ್ರಾಹ್ಮಣೇತರ ಶಬ್ದದಲ್ಲಿ ಮುಸಲ್ಮಾನರಿಗೂ ಈಸಾಯಿಗಳಿಗೂ ಎಲ್ಲರಿಗೂ ಸ್ಥಳವಿಶಾಲವಾಗಿದೆ.

ಪ್ರ—ದೇವಾಲಯಗಳ ನೀಚಕೃತ್ಯಗಳಿಗೆಲ್ಲ ಮುಸಲ್ಮಾನರೇ ಕಾರಣವೊ?

ಉ—ಮುಸಲ್ಮಾನ ಪಂಗಡ ಕಾರಣವಲ್ಲ. ಕೆಲವು ಜನರು ಕಾರಣ.

ಪ್ರ—ಗಟನೇ ತಾ: ಹೊಸತರಗು ಪೇ ಟೆ ಯ ಲ್ಲಿ ಒಂದು ತುಪಾಕಿ ಹಾರಿತು ಗೊತ್ತಿತ್ತಾ

ಉ—ಈಗಲೇ ನಿಮ್ಮ ಬಾಯಿಂದ ಆ ಮಾತು ನಾನು ಕೇಳಿದ್ದು.

ಶ್ರೀ ವೊದಲಿಯಾರ್ ಪ್ರಶ್ನೆಗಳಿಗೆ—

ಪ್ರ—ಕೋರ್ಟಿನಲ್ಲಿ ಖಾನರ ವಾಂಗ್ಮೂಲದಲ್ಲಿ ಬ್ರಾಹ್ಮಣರ ಪಿತೂರಿ ಹೇಳಿದ್ದಾರಲ್ಲ ಅದನ್ನು ನಂಬುತ್ತೀರೋ

ಉ—ಶುದ್ಧಸುಳ್ಳು.

ಪ್ರ—ಸತ್ಯಾಗ್ರಹವು ಮಹಾತ್ಮರು ಈ ಊರಿಗೆ ಬಂದಿದ್ದ ಫಲವೊ?

ಉ—ಆದು ಸರಿಯಲ್ಲ

ಲ್ಯೆ ಗುಲ್ಲುಗಾರರನ್ನು ಬೆಂಗಳೂರಿಗೆ ಸ್ವೇಚ್ಛೆಯಿಂದ ಬಿಡುವುದು ನ್ಯಾಯವೋ

ಉ—ಯಾಕಲ್ಲ.

ಪ್ರ—ತ್ರಿಮೂರ್ತಿಗಳು—ಗಾಂಧಿ, ಪಟೇಲ್ ಮುಂತಾದವರಿಗಿಂತ ಬಲಿಷ್ಟರೊ ಅವರಿಗೆ ಅಷ್ಟು ಭಯಪಡಬೇಕೊ?

ಉ—ಅಲ್ಲ. ಭಯಕ್ಕೆ ಕಾರಣವೇ ಇಲ್ಲ.

ಪ್ರ—ಶಿಕ್ಷಣ ಶಾಖಾಧಿಕಾರಿಗಳ ಅಜ್ಞೆ ಸರಿಯೋ ತಪ್ಪೊ

ಉ—ತಪ್ಪು.

ಅಧ್ಯಕ್ಷ—ತಾವು ತ್ರಿಕರಣಪೂರ್ವಕವಾಗಿ ಸಾಕ್ಷ್ಯಕೊಟ್ಟಿದ್ದೀರಿ ಬಹಳ ಸಂತೋಷ

(ಒಂದು ಘಂಟೆಕಾಲ ರಹಸ್ಯವಾಗಿ ಸಾಕ್ಷ್ಯಕೊಟ್ಟರು.)

(೧೯ ಮತ್ತು ೨೦ನೇ ತಾರೀಖುಗಳಲ್ಲಿ)

ಶ್ರೀ ನಂಜುಂಡಪ್ಪ

(ಮಂಡಿವ್ಯಾಪಾರಿ)

"ಅಬ್ಬಾಸಖಾನರ ಮನೆಯಿಂದಲೂ ಗುಂಡುಗಳು ಬಂದವು"

ಇವರು ಆ ರಾತ್ರಿ ಶಾಲೆಯ ಬಳಿಗೆ ಹೋದರೆಂದೂ, ಗಲಾಟೆ ವೊದಲಾಗಿತ್ತೆಂದೂ, ನಾಲಬಂದವಾಡಿ ಚೌಕದ ಮನೆಯಿಂದಲೂ, ಅಬ್ಬಾಸ್‌ಖಾನರ ಮನೆಯಿಂದಲೂ ಗುಂಡುಗಳು ಬಂದವೆಂದೂ ಹೇಳಿದರು. ೨೭, ೨೮, ೨೯ನೇ ತಾರೀಖುಗಳಲ್ಲೂ "ನಾನು ಶಾಲೆಯ ಬಳಿ ಹೋಗಿ ಹುಡುಗರು ಸತ್ಯಾಗ್ರಹ ಮಾಡಿದ್ದನ್ನು ನೋಡಿದೆ" ಎಂದು ಹೇಳಿದರು. ಊರಿನ ಕೆಲವರು ಬಂದು ಹುಡುಗರಿಗೆ ತಿಂಡಿತೀರ್ಥಗಳನ್ನು ಕೊಡುತ್ತಿದ್ದರು. ಆನಂದಭವನದವರೂ ಕೊಟ್ಟರೆಂದೂ, ಘಂಡಿನಿಂದಲೂ ಕೊಡಿಸಿದರೆಂದೂ, ಒಬ್ಬ ಮುಸಲ್ಮಾನರು ಜಾಳೆಹಣ್ಣಿಗೆ ಒಂದು ರೂಪಾಯನ್ನು ಕೊಟ್ಟರೆಂದೂ ಕೇಳಿದೆನೆಂದು ಹೇಳಿದರು. "ಮುಖಂಡರ ಮೆರವಣಿಗೆ ಬಂದಾಗ ಅಬ್ಬಾಸಖಾನರು ಸತ್ತರು, ದಿವಾನರು ಸತ್ತರು, ಸರ್ಕಾರವು ಸೋತುಹೋಯಿತು ಎಂದು' ಜನರು ಕೂಗುತ್ತಿರಲಿಲ್ಲವೊ" ಎಂದು ಮಿ॥ ಕಲಾಮಿಗಳು ಕೇಳಲು "ನಾನು ಕೇಳಲೇ ಇಲ್ಲ" ಅಂದರು.

ಶ್ರೀ ಸಿದ್ದರಾಮಪ್ಪನವರು

(ಸೆಂಟ್ರಲ್ ಜೈಲಿನ ಅಧಿಕಾರಿಗಳು)

'ಸುಳ್ಳು ಹೇಳುವ ಪತ್ರಿಕೆಗಳನ್ನೆಲ್ಲ ಮಟ್ಟಹಾಬೇಕು"

"ಹುಡುಗರಿಗೆ ನಮ್ಮ ಬಲದ ರುಚಿ ಕೊಂಚ ತೋರಿಸಿದ್ದರೆ ಅವರೇನೂ ಮಾಡುತ್ತಿರಲಿಲ್ಲ"

ಶ್ರೀ ರಾಮರಾಮ ಪ್ರಶ್ನೆಗಳಿಗೆ ಈ ಉತ್ತರಗಳು ಬಂದವು:—

೨೯ನೇ ಮಧ್ಯಾಹ್ನ ಫೀಮರಾವ್, ಸುಬ್ರಹ್ಮಣ್ಯಂಗಳನ್ನು ಜೈಲಿಗೆ ಕಳಿಸಿದರು. ೬॥ ಘಂಟೆಗೆ ತಿವಾನಿಗಳನ್ನು ಬಂಧಿಸಿದ್ದಾಯಿತು. ಶ್ರೀ ರಾಜು ಶಾಮರಾಜರು ಬಂದು ದಸ್ತಗಿರಿಮಾಡಿದವರೊಂದಿಗೆ ಮಾತಾಡಿಹೋದರು. ಅವರಿಂದ ಕ್ಷಮಾಪತ್ರ ಬರಿಸಿಕ್ಕೆ ಆನೇಕರು ಬಹು ಪ್ರಯತ್ನಮಾಡಿ ನಿಷ್ಫಲವಾಗಿ ಹೊರಟುಹೋದರು. ಮತ್ತೆ ರಾತ್ರಿಯೂ ಈ ಸಂಧಾನ ನಡೆಯಿತು. ೮ ಘಂಟೆಹೊತ್ತಿಗೆ ೨೦೦ ಮಂದಿ ದೊಡ್ಡವರು, ಚಿಕ್ಕವರು "ಅವರನ್ನು ಬಿಡಿ, ನಾವು ನಾಡುಲಿಕ್ಕೆ ಸಿದ್ಧರಾಗಿದ್ದೇವೆ" ಅಂದರು. ಅವರನ್ನೆಲ್ಲ ಕೂತಿಸಿ ಬುದ್ಧಿ ಹೇಳಿದ್ದಾಯಿತು. ಅವರೆಲ್ಲ ಸದ್ದಿಲ್ಲದೆ ಕೂತರು. ನಿಂಗಿಟ್ಟಿ ಮಂದಿ ಮಾತನಾಡಿದರು. ಮಾರನೆಯ ದಿನ ಕೆಲವರನ್ನು ನೋಡಲಿಕ್ಕೆ ಬಿಡುವೆನೆಂದು ಹೇಳಿದೆ. ಒಪ್ಪಿದರು. ಫಲವಾಗಲಿಲ್ಲ. "ನಮ್ಮ ದೇವರುಗಳನ್ನು ಯಾರೂ ಕಿತ್ತುಹಾಕಲಿಲ್ಲ. ಏನೆಲ್ಲ ಮಾಡಬೇಡಿ, ಹೋಗಿ" ಎಂದು ಹೇಳಿದೆ. "ಮುಷ್ಕರ ಮಾಡದಿದ್ದರೆ ಗಣೇಶನೇ ಬರುತ್ತಿರಲಿಲ್ಲ" ಎಂದು ಹೇಳಿ ೨೦ ನಿಮಿಷ ಇದ್ದು ಹೊರಟುಹೋದರು.

೩೦ನೇ ತಾ: ಮಧ್ಯಾಹ್ನ ೧೨॥ ಘಂಟೆಹೊತ್ತಿಗೆ ೨೦೦—೩೦೦ ಹುಡುಗರು ಬಂದು ರೆಂಬೆಗಳನ್ನು ಕಿತ್ತು, ಕಲ್ಲೆಸೆದು, ಸಿಕ್ಕಾಪಟ್ಟೆ ಗಲಾಟೆಮಾಡಿದರು. ಜೈಲು ಗೇಟಿನ ರಕ್ಷಣೆಗೆ ಸಿದ್ಧಮಾಡಿ, ಮೇಲಧಿಕಾರಿಗಳಿಗೆಲ್ಲ ಫೋನುಮಾಡಿದ್ದಾಯಿತು. ಕಿಟಿಕಿ ಗಾಜುಗಳು, ಹೂವಿನ ವಾಟಿಕೆಗಳು ಎಲ್ಲ ಧ್ವಂಸವಾಯಿತು. ನನಗೂ, ೩—೪ ಮಂದಿ ಜೈಲರುಗಳಿಗೂ ಪೆಟ್ಟು ಬಿತ್ತು. ವಾರ್ಡರುಗಳನ್ನು ಸಹಾಯಕ್ಕಾಗಿ ದಿವಾನರ ಮನೆಗೂ ಕಳಿಸಿದೆ.

ಸುಮಾರು ೧೦೦ ಮಂದಿ ಹುಡುಗರು ಜೈಲುಬಳಿ ಜಮಾಯಿಸಿದರು. ನಾನು ಜೈಲು ಗೇಟ್ ಬಳಿ ಇದ್ದೆ. ೧೦—೧೫ ಮಂದಿ ರಕ್ಷಣೆಕರಿದ್ದರು. ಆಯುಧ ಪಾಣಿಗಳಾಗಿಯೂ ಇದ್ದರು. "ನೀವು ಸುಗ್ಗಿದರೆ ಗುಂಡು ಹಾರಿಸ್ತೀನಿ ನೋಡಿ. ನಂಗೆ ಅಧಿಕಾರ ವಿದೆ" ಎಂದು ಹುಡುಗರಿಗೆ ಹೇಳಿದೆ. ತುಪಾಕಿಗಳನ್ನು ಎತ್ತಿ ಹಿಡಿದಿದ್ದೆವು. ಹುಡುಗರಲ್ಲಿ ದೊಡ್ಡವರೂ ಇದ್ದರು, ಸಣ್ಣವರೂ ಇದ್ದರು. ಸಿಕ್ಕಾಪಟ್ಟೆ ಕೂಗುತ್ತಿದ್ದರು. ೨೦—೨೫ ಹುಡುಗರು ಮರದ ರೆಂಬೆಗಳನ್ನು ಕಿತ್ತು ಕೈಲಿ ಹಿಡಿದಿದ್ದರು. ಜನರ ಕಡೆಗೂ, ಬಾಗಲುಕಡೆಗೂ ಕಲ್ಲುಗಳೆಸೆದರು—ಬಾಗಲೊಳಕ್ಕೆ ನುಗ್ಗುತ್ತಾ ಬಂದರು. ಜಟ್ಟಿಗಳ್ಯಾರನ್ನೂ ನೋಡಲಿಲ್ಲ. ಅವರನ್ನು ಬಿಡಿಸಲಿಕ್ಕೆ ನನಗೆ ಅಧಿಕಾರವಿಲ್ಲೆಂದು ಹೇಳಿದೆ. ಆಮೇಲೆ ಹುಡುಗರು ದಿವಾನರ ಮನೆ ಕಡೆ ನುಗ್ಗಿದರು. ನಾನು ಜೈಲಿಗೆ ಹೋದೆ. ಹುಡುಗರು ದಿವಾನರನ್ನೂ, ಅವರ ಮಗನನ್ನೂ ಸುತ್ತಿಕೊಂಡಿದ್ದರು. ದಿವಾನರು ಪೋರ್ಟಿಕೋದಲ್ಲಿದ್ದರು. ನಗುನಗುತ್ತಲೇ ಇದ್ದರು. ಸುಮಾರು ೧ ಘಂಟೆಹೊತ್ತು ಮಾತನಾಡುತ್ತಿದ್ದರು. ಸಚಿವನ್ನೂ, ಶ್ರೇಷ್ಠ ಕಾರ್ಯದರ್ಶಿಗಳನ್ನೂ ಸಹ ಹುಡುಗ ದಿವಾನರ ಬಳಿ ಬಿಡಲಿಲ್ಲ. ದಿವಾನರ ಭಾವಮೈದುನ ಕಾತುರದಿಂದ ನನ್ನನ್ನು ಕೂಗಿದರು. ಮುಖಂಡರು ಬಿಡುಗಡೆಯೇ ಹುಡುಗರ ಆಶೆ. ದಿವಾನರಿಗೆ ಅಪಾಯಮಾಡುವ ಬುದ್ಧಿ ಹುಡುಗರಿಲ್ಲೋ ಇಲ್ಲವೋ ನಾನು ಹೇಳಲಾರೆ. ಕಾನಸ್ಟೇಬಲ್‌ಗಳು ಕಲ್ಲು ಹಾಕಿರೆಂದು ಹೇಳಿದೆ. ನಾನು ಕಾರ್ಡಾರ್ ನೋಡಲಿ ನಾನು ಕಛೇರಿ ಬಳಿ ಫೋನು ಮಾಡುತ್ತಿ

ನಾನು ಹೋದಮೇಲೆ ಪೋಲೀಸು ರಿಸರ್ವ್ ಬಂದರು. ಹುಡುಗರು ಸಿಕ್ಕಾಪಟ್ಟೆ ಗಲಾಟೆಮಾಡುತ್ತಿದ್ದರು. ಬಾಗಲು ತಟ್ಟುತ್ತಿದ್ದರು. ಹೊರಟುಹೋದಮೇಲೆ ಗೇಟು ಬಳಿ ಆಮೇಲೆ ಜೈಲಿಗೆ ಹೋದೆ ಸೈಕಲ್‌ಮೆ

ತಿಳುವಳಿಕೆಯ ಇಸ್ತಿಹಾರು

ಬೆಂಗಳೂರು ನಗರದಲ್ಲಿ ಈಚೆಗೆ ನಡೆದ ಗಲಭೆಯ ವಿಷಯವಾಗಿ ನಾನಾ ಅಂಶಗಳನ್ನೂ ಕುರಿತು ವಿಚಾರಣೆಯನ್ನು ನಡೆಯಿಸುವುದಕ್ಕಾಗಿ ೧೯ನೆಯ ತಾರೀಖಿನಿಂದ ಇಸವಿ ೨೦ನೇ ತಾರೀಖಿನ ೧೦೪೬-೧೧೦೩ನೆಯ ಬಿ.ಪಿ.ಎಲ್-೨೮-೧೧೨೪ನೆಯ ನಂಬರು ಹುಕುಮಿನಲ್ಲಿ ನಮೂದು ಮಾಡಲ್ಪಟ್ಟಿರುವ ನೋರೆಗೆ ಸರ್ಕಾರದವರು ಒಂದು ವಿಚಾರಣಾ ಸಮಿತಿಯನ್ನು (ಕಮಿಟಿಯನ್ನು) ನೇಮಕ ಮಾಡಿರುವುದು ಸರಿಯಷ್ಟೆ. ಆ ಸಮಿತಿಯವರು ಬೆಂಗಳೂರು ನಗರದಲ್ಲಿ ಸೆನಟಾಫ್ ರಸ್ತೆಯಲ್ಲಿರುವ "ಡಾಲ್ಟಿ ಮೆಮೋರಿಯಲ್ ಹಾಲ್" ಸಭಾಮಂದಿರದಲ್ಲಿ ೧೯ನೆಯ ಇಸವಿ ಸೆಪ್ಟೆಂಬರ್ ೧೩ನೆಯ ತಾರೀಖಿನ ದಿನ ವಿಚಾರಣೆಯನ್ನು ಪ್ರಾರಂಭಿಸುವರೆಂಬುದಾಗಿ ಮಹಾಜನಗಳೆಲ್ಲರಿಗೂ ಈ ಮೂಲಕ ತಿಳಿಸಲಾಗಿದೆ.

ಈಗಿನ ಏರ್ಪಾಡುಗಳ ರೀತ್ಯಾ ಈ ಸಮಿತಿಯವರು ವಾರದ ನಾಲ್ಕು ದಿನಗಳಲ್ಲಿ. ಎಂದರೆ, ಸೋಮವಾರ, ಮಂಗಳವಾರ, ಗುರುವಾರ, ಮತ್ತು ಶುಕ್ರವಾರ, ಈ ನಾಲ್ಕು ದಿನಗಳಲ್ಲಿ ವಿಚಾರಣೆಯನ್ನು ನಡೆಯಿಸುತ್ತಾರೆ. ಅವುಗಳಲ್ಲಿ ಯಾವುದಾದರೂ ದಿನವು ರಜಾದಿನವಾದರೆ, ಆ ದಿವಸ ವಿಚಾರಣೆಯು ನಡೆಯುವುದಿಲ್ಲ, ವಿಚಾರಣೆ ನಡೆಯುವ ಪ್ರತಿ ದಿವಸವೂ ಸಾಮಾನ್ಯವಾಗಿ ಬೆಳಗ್ಗೆ ಹತ್ತೊಂದುವರೆ ಘಂಟೆಗೆ ವಿಚಾರಣೆಯು ಪ್ರಾರಂಭವಾಗುತ್ತದೆ.

ಸಮಿತಿಯವರಲ್ಲಿ ಒಂದು ಸಾಕ್ಷ್ಯಕೊಡಲು ಅಪೇಕ್ಷೆ ಇರತಕ್ಕವರೆಲ್ಲರೂ "ಡಾಲ್ಟಿ ಮೆಮೋರಿಯಲ್ ಹಾಲ್" ಸಭಾಮಂದಿರದಲ್ಲಿ ವಿಚಾರಣಾ ಸಮಿತಿಯ ಕಾರ್ಯದರ್ಶಿಯವರೊಡನೆ ಅಸಂಗತಿಯನ್ನು ತಿಳಿಸಬೇಕೆಂಬುದಾಗಿ ವಿನ್ನಹ.

(Sd.) C. NORONHA,
ಬೆಂಗಳೂರಿನಲ್ಲಿ ನಡೆದ ಗಲಭೆಯ ವಿಚಾರಣಾಸಮಿತಿಯ ಕಾರ್ಯದರ್ಶಿ
(ಸೆಕ್ರೆಟರಿ)

ಬೆಂಗಳೂರು,
ತಾ॥೪-೯-೨೮.

ದೇವಾಲಯಗಳಲ್ಲಿ ನೀಚಕೃತ್ಯಗಳು

ಮೇಡಹಳ್ಳಿ ದೇವಾಲಯದಲ್ಲಿ ಲಿಂಗಗಳು ಚೂರುಚೂರಾದವು!

ಎಡತೊರೆ ಸ್ಥಾನಘಟ್ಟದ ಹನುಮ ಮಂಗಮಾಯ!

ಕುಂಸಿ ಆಂಜನೆಯನಿಗೆ ಕೆಟ್ಟಕಾಲ!

ದಾದಿನಾಯಕನ ಪಾಳ್ಯದ ರಂಗನಾಥನಿಗಾದನಿದ್ರಾಭಂಗ

ಎಡತೊರೆ ವಿಚಾರ

ಎಡತೊರೆಯ ಸ್ನಾನಘಟ್ಟದಬಳಿಯ ಒಂದು ಸಣ್ಣ ಆಂಜನೇಯನ ಗುಡಿಯಿದೆ. ಆಂಜನೇಯ ವಿಗ್ರಹವು ಮಾಯವಾಗಿತ್ತು. ಆ ಸ್ಥಳದಲ್ಲಿ ಆ ದೇವಾಲಯದಲ್ಲೇ ಇದ್ದ ಬಸವಣ್ಣನನ್ನು ಕೂರಿಸಿದ್ದರು. ೨೯೫ರ ವಿಧಿಯಂತೆ ವ್ಯವಹಾರ ನಡೆಸಲಾಗಿದೆ. ಪೋಲೀಸಿನವರು ವಿಚಾರಣೆ ನಡೆಸುತ್ತಿದ್ದಾರೆ. ಅದೇ ಸ್ನಾನಘಟ್ಟದಲ್ಲಿ ಒಂದು ಬಸವಣ್ಣ ವಿಗ್ರಹವು ಮಾಯವಾಗಿತ್ತು. ನದಿಯಲ್ಲಿ ಹನುಮವಿಗ್ರಹ ಹುಡುಕುತ್ತಿದ್ದಾಗ ಅದು ಸಿಕ್ಕಿತು. ಅದನ್ನೀಗ ಆರ್ಕೇಶ್ವರ ದೇವಾಲಯದಲ್ಲಿಡಲಾಗಿದೆ.

೧೯-೯-೩೮ ಆರ್. ರಂಗರಾವ್,
ಪ್ರ. ಶಾಖಾಧಿಕಾರಿ.

ಮೇಡಹಳ್ಳಿ ಕಾಡು ಮಲ್ಲೇಶ್ವರ

ಬೆಂಗಳೂರು ಜಿಲ್ಲಾಧಿಕಾರಿಗಳು ಹೀಗೆ ಹೇಳುತ್ತಾರೆ:—

ಆನೇಕಲ್ಲು ತಾಲ್ಲೂಕು ಮೇಡಹಳ್ಳಿಗೆ ಸುಮಾರು ಒಂದು ಮೈಲು ದೂರದಲ್ಲಿ ಒಂದು ಗುಡಿಯಿದೆ. ಅಲ್ಲಿದ್ದ ಎರಡು ಲಿಂಗಗಳನ್ನು ಯಾರೋ ಒಡೆದು ಹಾಕಿದ್ದಾರೆ. ದೇವಾಲಯದ ಪ್ರಧಾನಮೂರ್ತಿಯೂ, ಗಣೇಶ, ಲಕ್ಷ್ಮೀನಾರಾಯಣ, ಮತ್ತು ಮೂರು ಲಿಂಗಗಳು ಭದ್ರವಾಗಿವೆ. ಸ್ಥಳೀಯ ಪೋಲೀಸಿನವರು ದೇವಾಲಯವನ್ನು ಜಾಗರೂಕತೆಯಿಂದ ರಕ್ಷಿಸುತ್ತಿದ್ದಾರೆ.

೧೯-೯-೩೮ ಆರ್. ರಂಗರಾವ್,
ಪ್ರ. ಶಾಖಾಧಿಕಾರಿ.

ಕುಂಸಿ ಆಂಜನೇಯ

ಕುಂಸಿತಾಲ್ಲೂಕು ಆಯನೂರು ಆಂಜನೇಯನ ಗುಡಿಯಲ್ಲಿ ಹೇಸಿಕೆ ಮುಂತಾದ್ದಾಗಿದೆಯೆಂಬ ವಿಚಾರವಾಗಿ ನಿಜಾಂಶವನ್ನು ಬಯಸಲು ಪ್ರ. ಶಾಖಾಧಿಕಾರಿಗಳು "ಈ ವಿಚಾರ ನಮಗೆ ವರದಿ ಬಂದಿಲ್ಲ" ವೆಂದು ಹೇಳಿದರು.

ದಾದಿನಾಯಕನ ಪಾಳ್ಯ

ಈ ಗ್ರಾಮದಲ್ಲಿ ಕಳೆದ ೧೩ನೇ ತಾರೀಖು ಸಂಪೂರ್ಣದಿನವೆಂಬ ಅಮಾವಾಸ್ಯೆ ರಾತ್ರಿಯಲ್ಲಿ ಈ ಗ್ರಾಮದ ಶ್ರೀ ಲಕ್ಷ್ಮೀಕೇಶವೇಶ್ವರಸ್ವಾಮಿಯವರ ದೇವಸ್ಥಾನದ ಕಾಂಪೌಂಡಿನಲ್ಲಿ ಅನಾದಿಯಾಗಿ ಪ್ರತಿಷ್ಠೆಯಾಗಿರುವ ಸರ್ಪಶಾಯಿ ದಕ್ಷಿಣ ರಂಗನಾಥಸ್ವಾಮಿಯವರನ್ನು ಕೆಳಕ್ಕೆ ಯಾರೋ ಘಾತುಕರು ತಳ್ಳಿರುವರು. ಬೆಂಗಳೂರು ಸ್ಥಿತಿಯು ನಮಗೂ ಪ್ರಾಪ್ತವಾಯಿತೆಂತ ಹಾಹಾಕಾರವಾಡುತ್ತಾ ಜನರು ಗುಜುಗುಟ್ಟುತ್ತಾ ಮೇಲ್ಪಟ್ಟ ಅಧಿಕಾರಿಗಳ ಭಯಕ್ಕೋಸ್ಕರ ಯಾರೊಬ್ಬರೂ ಯಾವುದೊಂದು ಸಂಗತಿಯನ್ನೂ ಹೊರಪಡಿಸಲಾರದೆ ಸ್ತಬ್ದರಾಗಿ ಶಿಲಾಪ್ರತಿಮೆಗಳಂತೆ ಇದ್ದಾರೆ. ಅಧಿಕಾರಿಗಳಂತೂ ಈ ವಿಚಾರಕ್ಕಾಗಿ ಬರುತ್ತಲೂ ಇದ್ದಾರೆ. ಹೋಗುತ್ತಲೂ ಇದ್ದಾರೆ. ವರದಿಯಿನ್ನೂ ತಯಾರಾಗಿಲ್ಲ.

—ಪ್ರತ್ಯಕ್ಷದರ್ಶಿಗಳು

ಆನೆಕಲ್ ಸುದ್ದಿ

ಯಾರೋ ದುರಾತ್ಮರು ಈ ತಿಂಗಳ ೧೩ನೇ ತಾರೀಖಿನಲ್ಲಿ ಆನೆಕಲ್ಲಿಗೆ ಸವಿಾಪದಲ್ಲಿರುವ ಶ್ರೀ ಕ ಕ ಮಲ್ಲೇಶ್ವರ ಗುಡ್ಡದ ಮೇಲಿರುವ ದೇವಸ್ಥಾನದಲ್ಲಿ ಪ್ರತಿಷ್ಠಿಸಿದ್ದವುಗಳಲ್ಲಿ, ಒಂದು ಲಿಂಗವನ್ನು ಒಡೆದುಹಾಕಿಯೂ, ಮತ್ತೊಂದು ಲಿಂಗವನ್ನು ಛಿನ್ನವಾಡಿಯೂ ಇದ್ದರು. ಇದೇ ತಿಂಗಳು ೧೫ನೇ ತಾರೀಖಿನಲ್ಲಿ ಯಾರೋ ದುರಾತ್ಮರು ಆನೆಕಲ್ ಬಳಿ ಇರುವ ಮಹಮದೀಯರ ಈದ್ಗಾವನ್ನು ಭಂಗಪಡಿಸಿ, ಇಲ್ಲಿನ ಹಿಂದೂ ಮುಸಲ್ಮಾನರಿಗೆ ಬಹಳ ವ್ಯಾಕುಲವನ್ನುಂಟುಮಾಡಿದರು. ಇಲ್ಲಿನ ಸದ್ಗೃಹಸ್ಥರಾದ ಹಿಂದೂ ಮುಸಲ್ಮಾನರು ಏಕೀಭವಿಸಿ, ಗಲಾಟೆಗೆ ಅವಕಾಶ ಕೊಡದೆ, ತಮ್ಮಲ್ಲೇ ಚಂದಾ ಎತ್ತಿ, ಕಕಮಲ್ಲೇಶ್ವರ ಬೆಟ್ಟದ ಮೇಲಿರುವ ದೇವಾಲಯದಲ್ಲಿ ಲಿಂಗಗಳನ್ನು ಪ್ರತಿಷ್ಠಿಸುವುದಕ್ಕೂ ಈದ್ಗಾವನ್ನು ರಿಪೇರಿಮಾಡುವುದಕ್ಕೂ ಏರ್ಪಡಿಸಿರುವುದು ಬಹಳ ಸ್ತುತ್ಯವಾದ ಕೆಲಸವಾಗಿದೆ.

(ಈ ಸಂದರ್ಭದಲ್ಲಿ ನಾವು ಸರ್ಕಾರಕ್ಕೆ ಪತ್ರ ಬರೆದವು. ಅವರು ಕೊಟ್ಟ ಉತ್ತರದಲ್ಲಿ ಈಗ್ಗಿದ ಸುದ್ದಿಯೇ ಇಲ್ಲ. ಉಭಯ ಪಂಗಡದವರು ಮಾಡಿಕೊಂಡ ಸಮಾಧಾನ ಸಭೆಯ ವಾರ್ತೆಯೂ ಇಲ್ಲ. ಮತ್ತೊಂದು ಮಾತು. ಆನೇಕಲ್ಲಿನಲ್ಲಿ ಈ ಗಲಾಟೆಯು ಮೊದಲು ತಾಲ್ಲೂಕು ಕಚೇರಿಯಲ್ಲಿ ಮೊಳಾಯಿತೆಂದೂ, ಅಮಲ್ದಾರರೇ ಇದಕ್ಕೆ ಕಾರಣವೆಂದೂ, ಅವರು ಕಚೇರಿಯಲ್ಲಿದ್ದ ಲಕ್ಷ್ಮೀಪಟವನ್ನು ಕಿತ್ತೆಸೆದು ಹಿಂದೂಗಳ ಮನನೋಯಿಸಿದರೆಂದೂ ಕೇಳಿಬರುತ್ತೇವೆ. ಈ ವಿಚಾರದ ವಾಸನೆಯೂ ಸಹ ಸರ್ಕಾರದವರ ಉತ್ತರದಲ್ಲಿಲ್ಲ. ಸಂ)

ಕಾಣಿಗಲ್ಲಿನ ವಿಷಯಗಳು

ಇತ್ತೀಚೆಗೆ ತಮ್ಮ ಪತ್ರಿಕೆಯಲ್ಲಿ ನಮ್ಮ ತಾಲ್ಲೂಕಿನ ಸಮಾಚಾರ ಬಂದಾಗಿನಿಂದ ಇಲ್ಲಿನ ಅಮಲ್ದಾರ್ ವಿ|| ಅಬ್ದುಲ್‌ಖಾದರ್‌ರವರಿಗೂ ಮತ್ತು ಇನ್‌ಸ್ಪೆಕ್ಟರ್ ವಿ|| ಅನ್ವರ್ ಆಲಿ ಮೆಕ್ರಿಯವರಿಗೂ ಕಣ್ಣುಕೆಂಪಾಗಿ ಪತ್ರಿಕೆ ಓದುತ್ತಿದ್ದ ಪೋಸ್ಟ್‌ಮಾಸ್ಟರ್ ಶ್ರೀ ಶ್ರೀಕಂಠಯ್ಯನವರು ಮತ್ತು ಸೊಸೈಟಿ ಸೆಕ್ರಿಟರಿ ಶ್ರೀ ನಂಜುಂಡಯ್ಯನವರ ಮೇಲೂ ಅಧಿಕಾರದರ್ಪ ತೋರಿಸಲಿಕ್ಕೆ ಬಂದರು. ಉಭಯ ಸದ್ಗೃಹಸ್ಥರೂ ಉಭಯ ಆಫೀಸರುಗಳಿಗೆ ಬುದ್ಧಿ ಕಲಿಸಿದರು. ಅಲ್ಲಿಂದೀಚೆಗೆ ಪೋಸ್ಟಾಫೀಸು, ಸೊಸೈಟಿ, ರೀಡಿಂಗ್‌ರೂಂ ಕಾಗದಪತ್ರಗಳ ಬಳಿ ಪತ್ರಿಕೆಗಳನ್ನೋದುವವರ ಮೇಲೆ ನಿಗಾ ಇಟ್ಟು ಪೋಲೀಸ್‌ನವರು ವರ್ತಿಸುತ್ತಿದ್ದಾರೆ.

ಅಲ್ಲದೆ ಇಲ್ಲಿಗೆ ಬಂದಿದ್ದ ಮೌಲ್ವಿ ಮುಸ್ಲಿಂ ರಹೀದ್ ಸಾಹೇಬರನ್ನು ಈ ಡಿಸ್ಟ್ರಿಕ್ಟಿನಿಂದ ಆಚೆಗೆ ರವ್ಹಾಮಾಡಬೇಕೆಂದು ಶ್ರೀ ಮಲ್ಲಿಕಾರ್ಜುನಸ್ವಾಮಿ ಸಂಪ್ರೋಕ್ಷಣೆಗಾಗಿ (ತಾ|| ೧೪—೯—೩೮ ರಲ್ಲಿ) ಬಂದಿದ್ದ ಹ|| ಪೋಲೀಸ್ ಸೂಪರಿಂಟೆಂಡೆಂಟ್ ಸಾಹೇಬರು ಅಪ್ಪಣೆಮಾಡಿದ್ದಾಗ್ಗೂ ಸಹ ೧೬-೯-೩೮ ರಲ್ಲಿ ಗುಜ್ಜಾರಿಬಂಗ್ಲೆಯಲ್ಲಿ ಅಮಲ್ದಾರರ ಅಧ್ಯಕ್ಷತೆಯಲ್ಲಿ ಇವರ ಉಪನ್ಯಾಸ ನಡೆಯಿತು. ಇದರಿಂದ

೨ ಘಂಟೆ ಆಗಿತ್ತು. ಆಮೇಲೆ ಸವಾರರು ಬಂದರು. ಸು. ೨೫ ಮಂದಿ ಜೈಲುಬಳಿ ನಿಂತರು. ಆಮೇಲೆ ಜೈಲುಬಳಿ ಹೆಚ್ಚು ಗಲಾಟೆ ಇರಲಿಲ್ಲ. ಸವಾರರು ಹುಡುಗರನ್ನು ಛಲ್ಕಾದಿಂದ ತಿವಿಯುತ್ತಿದ್ದಾರೆ, ಹಾಗೆ ಹೀಗೆ ಎಂದು ಹುಡುಗರು ಹೇಳುತ್ತಿದ್ದರು.

ಸಾಯಂಕಾಲ ೬ ಘಂಟೆ ಹೊತ್ತಿಗೆ ಸುಮಾರು ೩-೪ ಸಾವಿರ ಜನ ಜೈಲು ರಸ್ತೆಯಲ್ಲಿ ತುಂಬಿದರು. ಆಮೇಲೆ ೬॥ ಘಂಟೆಗೆ ಬಿಡುಗಡೆಯಾಯಿತು. ಆಗ ಸಿಟಿ ಮ್ಯಾಜಿಸ್ಟ್ರೇಟರೇ ಮುಂತಾದವರು ಅಲ್ಲಿದ್ದರು. ಬಿಟ್ಟುಬಿಡಿರೆಂದು ಜನರಲ್ ಸೆಕ್ರೆಟರಿಗಳು ಫೋನು ಮಾಡಿದರು. ಗರುಡಾಚಾರ್ಯರು ಮುಖಂಡರಿಗೆ 'ನೆಟ್ಟಗೆ ಮನೆಗೆ ಹೋಗಿ, ಶಾಲೆಗೆ ಹೋಗಬೇಡಿ' ಎಂದು ಹೇಳಿದರು. ಮುಖಂಡರೇನೂ ಹೇಳಲಿಲ್ಲ.

೩೧ನೇ ತಾರೀಖಿನ ಸಾಯಂಕಾಲ ಮಾರ್ಕೆಟ್ ಬಳಿ ಮದ್ದಿನ ಗಾಡಿಗಳಿದ್ದುವು. ಅಧಿಕಾರಿಗಳೆಲ್ಲ ಇದ್ದರು. ಗುಂಪೇನೂ ಅಷ್ಟಿರಲಿಲ್ಲ. ಮದ್ದಿನ ಮೊಟಾರು ಪ್ರದರ್ಶನವು ಜನರಿಗೆ ಭಯವನ್ನು ಉಂಟುಮಾಡಿತು. ಮುಸಲ್ಮಾನರು ಮನೆಗಳಲ್ಲಿ ಹೆಂಗಸರಿಗೆ ಅಪಾಯವಾದೀತೆಂದು ಭಯವಿತ್ತು. ಆದ್ದರಿಂದ ಇವುಗಳನ್ನು ಸರ್ಕಾರದವರು ತರಿಸಿರಬಹುದು. ವರ್ತಕರೆಲ್ಲ ಭಯದಿಂದ ಅಂಗಡಿಗಳನ್ನು ಹಾಕಿದ್ದರು. ಮುಸಲ್ಮಾನರು ಗಲಾಟೆಮಾಡಿಯಾರೆಂಬ ಭಯವು ವರ್ತಕರಿಗಿತ್ತು.

ಅಧ್ಯಕ್ಷರು—ಗಲಾಟೆಗಳ ಕಾಲದಲ್ಲಿ ಹಿಂದುಗಳು ಪತ್ರಿಕೆಗಳಿಗೆ ಬರೆಯುತ್ತ ಹೋಗುತ್ತಾರೆ. ಮುಸಲ್ಮಾನರು ದೊಣ್ಣೆಗಳನ್ನು ಹಿಡಿದು ಬೀದಿಗಳಲ್ಲಿ ಹೊರಡುತ್ತಾರಲ್ಲವೆ? (ಕೊಂಚ ರಹಸ್ಯ ವಿಚಾರಣೆಯಾಯಿತು.)

ಮೊದಲಿ—ಬ್ರಾಹ್ಮಣರಿಗೂ, ದೀನದಾರ ಪತ್ರಿಕೆಗೂ ಏನು ಸಂಬಂಧ?

ಉ—ದೀನ್‌ದಾರ ಪತ್ರಿಕೆಯ ಮೇಲೆ ಲಿಂಗಾಯಿತರು ವಿರೋಧವಾಗಿದ್ದಾರೆ. ದೀನದಾರನು ಚನ್ನಬಸವೇಶ್ವರನೆಂದು ಹೇಳಿಕೊಳ್ಳುತ್ತಿದ್ದಾನೆ. ಆದ್ದರಿಂದ ಲಿಂಗಾಯಿತರ ಮನಸ್ಸಿಗೆ ನೋವಾಗಿದೆ. ಗೋಮಾಂಸಭಕ್ಷಣಮಾಡಬಹುದೆಂದು ಆ ಪತ್ರಿಕೆ ಹೇಳುತ್ತದೆ. ಆದ್ದರಿಂದ ಹಿಂದೂಗಳ ಮನಸ್ಸಿಗೆ ಖೇದವಾಗಿದೆ.

ಕಲಾಮಿ—ಮುಸಲ್ಮಾನ ಪಂಗಡದವರ ಮೇಲೆ ಹರಡಿರುವ ವದಂತಿಗಳ ವಿಚಾರವೇನುಗೊತ್ತು?

ಉ—ವದಂತಿಗಳೆಲ್ಲ ಶುದ್ಧಸುಳ್ಳು. ಆ ವದಂತಿಗಳಿಂದ ಮುಸಲ್ಮಾನರಿಗೆ ವ್ಯಥೆಯಾಗಿದೆ. ಈ ವದಂತಿಗಳೆಲ್ಲ ೩೦ರಿಂದ ಈಚೆಗೆ ಹುಟ್ಟಿದ್ದೆ. ಪತ್ರಿಕೆಗಳೇ ಇದಕ್ಕೆ ಕಾರಣ.

ಕ—ಮೆರವಣಿಗೆ ಹೋದಾಗಲೆಲ್ಲ ನಿಂತುನಿಂತು ಮುಸಲ್ಮಾನರನ್ನು ರೇಗಿಸುವಂತಿರಲಿಲ್ಲ? ಆಬ್ದಾಸ ಖಾನ್ ಸತ್ತ, ದಿವಾನರು ಸತ್ತರೆಂದು ಕೂಗಲಿಲ್ಲವೆ?

ಉ—ಹೌದು. ನನ್ನ ಮಕ್ಕಳೂ ಹೇಳಿದರು. ನಾನೂ ಕೇಳಿದೆ. ಎಲ್ಲರಿಗೂ ಗೊತ್ತಿದೆ ಬೀದಿರಹಸ್ಯವಿದು.

ಕ—ನೀವಾಗಿದ್ದರೆ ರಾತ್ರಿ ಹೊತ್ತು ಮುಖಂಡರನ್ನು ಬಿಡುಗಡೆಮಾಡುತ್ತಿದ್ದಿರಾ?

ಉ—೧೪ಳ ವಿಧಿ ಅವರ ಮೇಲೆ ಪ್ರಯೋಗಮಾಡಿ ಆಮೇಲೆ ಬಿಡುತ್ತಿದ್ದೆ. ಕಾರುಗಳು ತಂದು ಅವರನ್ನು ಮನೆಗಳಲ್ಲಿ ಬಿಟ್ಟುಬರುತ್ತಿದ್ದೆ. ಜಿಲ್ಲಾ ಮ್ಯಾಜಿಸ್ಟ್ರೇಟರು ಈ ರೀತಿ ಏಕೆ ಮಾಡಲಿಲ್ಲವೆಂಬುದನ್ನು ನಾನೇಕೆ ಹೇಳಬೇಕು. ಸವಿತಿಯವರಿಗೇ ವೇದ್ಯ.

ಕ—ಇದೆಲ್ಲ ಮುಸಲ್ಮಾನರೇ ಮಾಡಿದ್ದರೋ?

ಉ—ಕಾನೂನುಗಳು ಎಲ್ಲರಿಗೂ ಒಂದೆ,

ಕ—ಕೆಲವರು ಮುಸಲ್ಮಾನರು ಕೊಂಚ ಗಲಾಟೆ ಮಾಡಿದರೂ ಅವರನ್ನು ಪೂರ್ತ ದಂಡಿಸುತ್ತಿಲ್ಲವೆ?

ಉ—ಗಲಾಟೆಮಾಡಿದಾಗ ದಂಡಿಸುವುದೆ?

ಪ್ರ—ಪತ್ರಿಕೆಗಳೆಷ್ಟು ಇದಕ್ಕೆಲ್ಲ ಕಾರಣ?

ಉ—ಇಲ್ಲಿನ ಪತ್ರಿಕೆಗಳು, ಹೊರಗಿನ ಪತ್ರಿಕೆಗಳಿಗೆ ಬರೆಯುವವರು ಇವರೆಲ್ಲ ಕಾರಣ.

"ಸುಳ್ಳು ಬರೆಯುವ ಪತ್ರಿಕೆಗಳನ್ನೆಲ್ಲ ಮಟ್ಟಹಾಕ

(೭ನೇ ಪುಟದಿಂದ)

ಮಿ॥ ಎಂ. ಅಬ್ದುಲ್‌ಲತೀಫ್

(ದಂಡಿನ ಪೌರಸಭಾಸದ್ಯರು)

"ಮಿರಜಾ ದಿವಾನರಾದ್ದು ಬ್ರಾಹ್ಮಣರಿಗೆಲ್ಲ ಹೊಟ್ಟೆಕಿಚ್ಚು"

೩೦ನೇ ತಾ: ಸಾಯಂಕಾಲ ವಿಕ್ಟೋರಿಯಾ ಆಸ್ಪತ್ರೆ ಬಳಿ ಇದ್ದೆ. ಗಾಯಪಟ್ಟವರನ್ನು ಆಲ್ಲಿಗೆ ಒಯ್ಯುತ್ತಿದ್ದರು. ಆಲ್ಲಿಗೆ ಮೆರವಣಿಗೆ ಬಂತು. ಆಮೇಲೆ ಶಾಲೆಯ ಕಡೆ ಹೋಯಿತು. ಹೋಗುವಾಗ "ಖಾನಸತ್ತ, ದಿವಾನಸತ್ತ, ಸರ್ಕಲ್ ದಿವಾನ" ಮುಂತಾಗಿ ಕೂಗುತ್ತಿದ್ದರು. ಶಾಲೆಯ ಬಳಿ ನಾನು ಹೋಗಲಿಲ್ಲ.

೩೬ನೇ ತಾರೀಖಿನ ದಿನ ಸಾಯಂಕಾಲ ದಂಡಿನಲ್ಲಿ ಬೆಂಗಳೂರಲ್ಲಿ ಮಂತೀದಿಗಳನ್ನೂ, ಗೋರಿಗಳನ್ನೂ ಹಿಂದೂಗಳು ಧ್ವಂಸಮಾಡುವರೆಂಬ ವದಂತಿ ಹರಡಿತು. ಮಾರ್ಕೆಟ್ ಗೋರಿಯನ್ನು ಕೆಡುವುವರೆಂದು ಕೇಳಿದೆವು. ಆಲ್ಲಿನ ಮುಸಲ್ಮಾನರು ರೇಗಿದರು. ಆಲ್ಲಿನ ಅಧಿಕಾರಿಗಳು ತಕ್ಕ ಎಚ್ಚರಿಕೆ ತೆಗೆದುಕೊಂಡು ಮುಸಲ್ಮಾನರು ಬೆಂಗಳೂರಿಗೆ ಬರದಂತೆ ಆಡ್ಡಿಪಡಿಸಿದರು. ಆದನ್ನು ನಾನು ಕಾಡೆ.

೩೦ನೇ ಸಾಯಂಕಾಲ ದಿವಾನರನ್ನು ಹುಡುಗರು ಹೊಡೆದರೆಂದೂ, ಅವರ ಮನೆಗೆ ಸುಗ್ಗಿದರೆಂದೂ, ಅಬ್ಬಾಸಖಾನರ ಮನೆಮಸ್ಜಿದನ್ನು ಮುತ್ತುವರೆಂದೂ ವದಂತಿ ಹರಡಿತು. ಮುಸಲ್ಮಾನರಿಗೆ ಕಳವಳವಾಯಿತು. ಆಗಲೂ ಆಲ್ಲಿನ ಅಧಿಕಾರಿಗಳು ಮುಸಲ್ಮಾನರನ್ನು ತಡೆದರು. ನಾನು ಈ ವದಂತಿಗಳೆಲ್ಲ ಸುಳ್ಳೆಂದು ಹೇಳಿದೆ. ನಾನು ಹೇಳಿದನ್ನು ಕೇಳಿ ಅನೇಕರು ಹಿಂದಿರುಗಿದರು. ದಂಡಿನ ಮುಸಲ್ಮಾನರು ದಿವಾನರ ಮನೆ ಕಡೆಗೂ ಹೋಗಲಿಲ್ಲ. ಎಲ್ಲೂ ಹೋಗಲಿಲ್ಲ. ಆ ರಾತ್ರಿ ಬೆಂಗಳೂರಲ್ಲಿ ಮರಾಮರಿಯಾಯಿತೆಂದು ಕೇಳಿದೆ.

೩೧ನೇ ತಾ॥ ಬೆಳಿಗ್ಗೆ ಸಿಟಿ ಮಾರ್ಕೆಟ್ ಬಳಿ ಇದ್ದೆ. ಜನರು ಉದ್ರೇಕದಿಂದಿದ್ದರು. ಹಿಂದೂಗಳೂ ಮುಸಲ್ಮಾನರೂ ಇದ್ದರು. ಗಿರಣಿ ಕೂಲಿಗಳು ಮುಷ್ಕರಹಿಡಿದು ಗೋರಿ ಕೆಡುವುತ್ತಾರೆಂದು ಎಲ್ಲರೂ ಹೇಳಿಕೊಳ್ಳುತ್ತಿದ್ದರು. ನಾನು ಸಹ ಉಭಯ ಪಂಗಡಗಳೂ ಕಾದಾಡಬಹುದೆಂದು ಊಹಿಸಿದೆ. ಹಾಗೆ ಜನರು ಆಡಿಕೊಳ್ಳುತ್ತಿದ್ದರು. ಬೆಂಗಳೂರಿನ ಪೋಲೀಸಿನವರು ತಮ್ಮ ಕಾರ್ಯವನ್ನು ಸರಿಯಾಗಿ ನಿರ್ವಹಿಸಲಿಲ್ಲವೆಂದು ನನ್ನ ಆಭಿಪ್ರಾಯ. ನಾನು ದಂಡಿನ ವ್ಯಾಜಿಸ್ಟ್ರೇಟರ ಬಳಿ ಹೋಗಿ ಕೊಂಚ ಸೈನ್ಯಕಳಿಸಿರೆಂದೂ ಸೂಚಿಸಿದೆ. ಪೋಲೀಸಿನವರು ಹುಡುಗರೊಂದಿಗೆ ಸಹಾನು ಭೂತಿಯುಳ್ಳವರಾಗಿದ್ದರೆಂದು ನನ್ನ ಭಾವನೆ.

ಶ್ರೀ ಕಲಾಮಿಯವರ ಪ್ರಶ್ನೆಗಳಿಗೀ ಉತ್ತರಗಳು ಬಂದವು:—

ದಿವಾನರ ಮೇಲೆ ಸಿಕ್ಕಾಪಟ್ಟೆ ಮಾತಾಡುತ್ತಿದ್ದದು ಅವರಿಗೇಟು ಬಿದ್ದದ್ದೂ ಇದೇ [illegible]ಲ್ಮಾರಿಗೆ ನೋವುಂಟುಮಾಡಿತು. ಮಾರ್ಕೆಟ್ [illegible] ಭಾಷಣವಾಗುತ್ತಿತ್ತು. ನಾನು ಕೇಳಲಿಲ್ಲ. ಕೇಳಿದ ಮುಸಲ್ಮಾನರು—ಗಲಾಟೆಗೆಲ್ಲ ಮುಸಲ್ಮಾನರೇ ಕಾರಣವೆಂದು ಹೇಳುತ್ತಿದ್ದಾರೆ—ಎಂದು ಹೇಳಿದರು.

ಮಿರಜಾರವರು ದಿವಾನರಾದಾಗಿನಿಂದ ಬ್ರಾಹ್ಮಣರಲ್ಲಿ ಅಸೂಯೆ ಇದ್ದೇ ಇದೆ. ಜಗತ್ತಿಗೆಲ್ಲ ಇದು ಗೊತ್ತು. ಬ್ರಾಹ್ಮಣೇತರರಿಗೆ ಈಭಾವನೆಯಿಲ್ಲ. ಮಹಾರಾಜರ ಮೆರವಣಿಗೆಯಾದಾಗ ಅಂಬಾರಿಯಲ್ಲಿ ದಿವಾನರು ಕೂತಿದ್ದು ಹಿಂದೂಗಳಿಗೆ ಸಹಿಸಲಿಲ್ಲ. ಹೆಂಗಸರೂ ಆ ಮಾತು ಮಾತನಾಡುತ್ತಿದ್ದರು. ೧೦॥ ಲಕ್ಷ ಪೊಗದಿ ಕಡಮೆ ಮಿರಜಾಕಾಲದಲ್ಲಿ ಆದದ್ದೂ ಜನರ ಅಸೂಯೆಗೆ ಕಾರಣವೆಂದು ನಾನು ನಂಬುತ್ತೇನೆ. ದಿವಾನರು ಚಿಕ್ಕವಯಸ್ಸಿನವರು. ಬಹಳ ವರ್ಷ ದಿವಾನರಾಗಿರುತ್ತಾರೆಂದು ಬೀದಿಗಳಲ್ಲೆಲ್ಲ ಆಡಿಕೊಳ್ಳುತ್ತಾರೆ. ಹಿಂದುಗಳಿಗೂ ಮುಸಲ್ಮಾನರಿಗೂ ಈಗಲೂ ದ್ವೇಷವಿದ್ದೇ ಇದೆ. ಗೋರಕ್ಷಣೆ ಪ್ರಚಾರ, ಆರ್ಯ ಸಮಾಜದ ಚಳವಳಿ, ಉತ್ತರದೇಶದ ಗುಲ್ಲುಗಾರರ ಚಳವಳಿಗಳೂ ಭಾಷಣಗಳೂ ಇವೆಲ್ಲ ಈ ದ್ವೇಷಕ್ಕೆ ಕಾರಣ.

ಒಳಗಿನ, ಹೊರಗಿನ ಪತ್ರಿಕೆಗಳ ತುಂಟತನವಿಲ್ಲದಿದ್ದಲ್ಲಿ ಈ ಗಲಾಟೆಗಳೇ ಇರುತ್ತಲಿರಲಿಲ್ಲ. ಅಕ್ಷರಜ್ಞರಲ್ಲದ ಪಾಮರರನ್ನು ಈ ಲೇಖನಗಳೇ ರೇಗಿಸುವುವು.

ಶ್ರೀ ಟಿ. ಟಿ. ಶರ್ಮ

(ವಿಶ್ವಕರ್ಣಾಟಕದ ಸಂಪಾದಕರು)

"ದಿವಾನರೂ, ಖಾನರೂ ಇದಕ್ಕೆಲ್ಲ ಎಷ್ಟುಮಟ್ಟಿಗೆ ಜಬಾಬುದಾರರೆಂಬುದನ್ನು ಸ್ಪಷ್ಟಪಡಿಸಿರಿ"

"ತಪ್ಪುಮಾಡಿದವರನ್ನೆಲ್ಲಾ ಕೂಡಲೇ ಹಿಡಿದು, ದೊಡ್ಡವರು, ಚಿಕ್ಕವರೆನ್ನದೆ ಶಿಕ್ಷೆಮಾಡಿ. ಆಗ ಎಲ್ಲ ಸರಿಹೋಗುತ್ತದೆ"

ತಮ್ಮ ಲಿಖಿತವಾಂಗ್ಮೂಲದಲ್ಲಿ ಈ ವಿಚಾರಗಳನ್ನು ಹೇಳಿದರು:—

೧. ಜೂನ್ ೨೯ರಿಂದ ಜುಲೈ ೭ರವರೆಗೂ ನನಗೂ ಸರ್ಕಾರಕ್ಕೂ ಗಣೇಶನ ವಿಚಾರವಾಗಿ ನಡೆದ ಪತ್ರವ್ಯವಹಾರ. ಸರ್ಕಾರದ ಕನಿಕರಶೂನ್ಯವಾದ ಔದಾಸೀನ್ಯ. ಆನೇ ತಾರೀಖಿನ ವಿಶ್ವಕರ್ಣಾಟಕದ ಎಚ್ಚರಿಕೆ;

೨. ಜುಲೈ ೨ರಿಂದ ೨ಆರ ರಾತ್ರಿ ೮॥ ಘಂಟೆವರೆಗೆ ಪ್ರತಿನಿತ್ಯವೂ ಶಾಲೆಗೆ ಹೋಗುತ್ತಿದ್ದೆ. ಮುಷ್ಕರ ಪ್ರಸಂಗವನ್ನು ಕಂಡೆ. ೨ಆನೇ ದಿನ ಪುರಪ್ರಮುಖರ ಸಹಿಗಳನ್ನು ಪಡೆದು ಮುಷ್ಕರ ಮುಖಂಡರಿಗೆ ಅಭಯ ಕೊಟ್ಟು ಮುಷ್ಕರ ಸದ್ಯಕ್ಕೆ ನಿಲ್ಲಿಸಿರೆಂದು ಹೇಳಿದೆ. ಅವರು ಒಪ್ಪದೆಹೋದರು;

೩. ೨೯ನೇ ತಾ॥ ಮುಂಖಂಡರ ದಸ್ತಗಿರಿ. ನನ್ನ ಭಾಷಣ. ದಿವಾನರಿಗೆ ಕಳುಹಿಸಿದ ಪತ್ರ—ಅದರಲ್ಲಿದ್ದ ಗಣೇಶನ ಬಿಡುಗಡೆ, ದಸ್ತಗಿರಿಯಾದ ನಾಯಕರ ಬಂಧವಿಮೋಚನೆ ವಿಚಾರ. ಸು. ೩ ಘಂಟೆಯ ಹೊತ್ತಿಗೆ ಗಣೇಶನಿಗೆ ಬಿಡುಗಡೆಯಾಯಿತು. ಇನ್ನುಳಿದದ್ದು ನಾಯಕರ ಬಿಡುಗಡೆ. ಅದುವರೆಗೆ ಇದು ಶಾಲಾ ಹುಡುಗರ ವಿಷಯ;

೪. ೩ನೇ ತಾ॥ ವಿದ್ಯಾರ್ಥಿಗಳ ಪ್ರಚಂಡ ಮುಷ್ಕರ. ಸೈನಿಕರ ಪ್ರತಾಪ. ಸಾಯಂಕಾಲ ನಾಯಕರ ಬಿಡುಗಡೆ. ಶಾಲೆಯ ಬಳಿ ಅವರ ಆಗಮನ. ಮಂಗಳಾರತಿ.

೫. ಕಲ್ಲಿನ ಮಳೆ—ಗುಂಡುಗಳು ಹಾರಿಸಿದ್ದು. ಹಿಂದುಗಳನ್ನು ಮುಸಲ್ಮಾನರು ದೊಣೆಗಳಿಂದ ಹೊಡೆದದ್ದು ಇತ್ಯಾದಿ, ಇತ್ಯಾದಿ. ಸಣ್ಣ ವಿಚಾರ ದೊಡ್ಡದಾಗಿ ದೇಶದಲ್ಲೆಲ್ಲ ಹಬ್ಬಿತು;

೬. ಪೋಲೀಸಿನವರ, ಅಧಿಕಾರಿಗಳ ದೌರ್ಬಲ್ಯ. ಮಾರಾಮಾರಿ ಕೋರರನ್ನು ದಸ್ತಗಿರಿಮಾಡದೆ ಹೋದದ್ದು. ಶಾಲಾ ಬಾಲಕರ ಅತೃಪ್ತಿ, ಕಲಹವು ಕೋಮುವಾರು ಭೂತ ಪ್ರಭಾವದಿಂದ ದೊಡ್ಡದಾದದ್ದು.

ಶರ್ಮರವರು ಜುಲೈ ೨ನೇ ತಾರೀಖಿನಿಂದ ಆಗಸ್ಟು ೧ನೇ ತಾರೀಖಿನ ವರೆಗೆ ನಡೆದದ್ದನ್ನೆಲ್ಲ ಹೇಳಿದರು. ಅದರಲ್ಲಿ ೨ಆನೇ ತಾರೀಖು ಅವರು ಸತ್ಯಾಗ್ರಹ ನಿಲ್ಲಿಸಲು ನಡೆಸಿದ ಸಂಧಾನ ೨೯ನೇ ತಾರೀ

(೧೨ನೇ ಪುಟವನ್ನು ನೋಡಿ)

ಬೆಂಗಳೂರು ಡಿಸ್ಟ್ರಿಕ್ಟು ಜಡ್ಜಿಯವರ ಕೋರ್ಟಿನಲ್ಲಿ

Mis Case No. 51 of 27—28.

ಅರ್ಜಿದಾರರು:

ಕ. ಗೋವಿಂದಪ್ಪ

ಎ. ಅರ್ಜಿದಾರರು:

ದಿ. ಡೈಮಂಡ್ ಪ್ರಿಂಟಿಂಗ್ ಮತ್ತು ಪೈಲ ವರ್ಕ್ಸ್ ಲಿಮಿಟೆಡ್ ಕಂಪೆನಿ, ಬೆಂಗಳೂರು

ಮೇಲೆ ನಮೂದಿಸಿರುವ ಕಂಪೆನಿಗೆ ಒಟ್ಟು ಆಫೀಸಿಯಲ್ ಲಿಕ್ವಿಡೇಟರನ್ನು ನೇಮಮಾಡಲು ಬೆಂಗಳೂರು ಡಿಸ್ಟ್ರಿಕ್ಟು ಜಡ್ಜಿಯವರ ಕೋರ್ಟಿನಲ್ಲಿ 8—10—1928ನೇ ಸೋಮವಾರ 11 ಘಂಟೆಗೆ ಕಾಲವನ್ನು ನಿಷ್ಕರ್ಷೆ ಮಾಡಿದ್ದಾರೆಂದು ತಿಳಿಯುವುದು.

21-9-28 ಬೆಂಗಳೂರು ಸಿಟಿ. } H. V. Narayana Rao, Advocate for Petitioner.

ಕನ್ನಡ ಗದ್ಯಕ್ಕೆ

ಅತ್ಯಪೂರ್ವ ಗ್ರಂಥಗಳು

1. ಶ್ರೀ ದಾಸಬೋಧ (ಸಮರ್ಥ ರಾಮದಾಸ ಕೃತಪುಸ್ತಕದ ಭಾಷಾಂತರ 10ಂದ 6 ಭಾಗಗಳು. ಪ್ರತಿಯೊಂದು ಭಾಗಕ್ಕೆ ರೂ.) 5-14-0, 2 ಶ್ರೀ ಮದ್ಭಾಗವತ 12 ಸ್ಕಂಧ ಸಂಪೂರ್ಣ 6-0-0, 3. ಶ್ರೀ ಜನನ ರಾಮಾಯಣ 1-8 0, 4 ಶ್ರೀ ನವನಾಥ ಭಕ್ತಿಸಾರ 2-8-0, 5. ಸೂರ್ಯಗ್ರಹಣ(ವೈಜ್ಞಾನಿಕ ಕಾದಂಬರಿ)1-0-0, 6. ಭಗವಾನದಾಸ (ರಿಪಬ್ಲಿಕ್ವ್ ಕಾದಂಬರಿ) 1 0-0, 7. ಜಿನುನಾಜಿಲಿಪ್ಪ! (ಪೇಶ್ವಾಯಿಕಾದಂಬರಿ) 1-2-0, 8. ನರವಾರಕಾಶೀಮ (ಟೀಪು ಸುಲ್ತಾನನಿಗೆ ಸಂಬಂಧಿಸಿದ ಕಾದಂಬರಿ) 1-4-0.

ವಿಳಾಸ:—ಮ್ಯಾನೇಜರ್, ಸದ್ವಿಚಾರಚಂದ್ರಿಕೆ, ಮೊಕ್ಕಾಂ ಆನಂದವನ ಜಿಲ್ಲಾ—ಧಾರವಾಡ.

ಬೆಂಗಳೂರು, ಶಿವಮೊಗ್ಗ, ಮತ್ತು ಕಡೂರು ಡಿ॥ಪ್ರದರ್ಶನಗಳಲ್ಲಿ ಬೆಳ್ಳಿಪದಕಗಳು, ಸರ್ಟಿಫಿಕೇಟುಗಳು ಪಡೆದ

ಉತ್ತಮ ಕಾಫಿ ಪುಡಿ

ಕಾಫಿ ಕುಡಿದರಾಯಿತೆ? ಶ್ರೀ ದತ್ತಾತ್ರೇಯ ಕಾಫೀ ಪುಡಿಯನ್ನು ಕೊಂಡು ಕಾಫಿ ಮಾಡಿ ಕುಡಿಯಿರಿ !! ಉತ್ತಮ ಕಾಫಿಯೆಂದು ಆಗ ನೀವೇ ಹೇಳುವಿರಿ.

ಹಳದೀಚೀಟಿಯ ೬ ಪೌಂಡಿನ ಟಿನ್ನಿಗೆ ರೂ. ೬—೪—೦

ಶ್ರೀ ದತ್ತಾತ್ರೇಯ ಕಾಫಿ ಕಾರ್ಯಾಲಯ, (ಬ್ರಾಂಚ್—ಹಳೇತರಗುಪೇಟೆ) ಬೆಂಗಳೂರು ಸಿಟಿ

ಮೈಸೂರ ಟೋ॥ ಸೆ॥ ಪರೀಕ್ಷೆಗೆ ಹೋಗುವ ವಿದ್ಯಾರ್ಥಿಗಳ ಸೌಕರ್ಯಕ್ಕಾಗಿ ಹೊರಡಿಸುವ ಅತ್ಯಂತ ಶ್ರೇಷ್ಠವಾದ ಮಾಸಪತ್ರಿಕೆ

ವಿದ್ಯಾರ್ಥಿನಿಧಿ

ಪಾರಿತೋಷಕವಾಗಿ ಅಂಚೆವೆಚ್ಚಸಹಿತ

1. ಇಂಗ್ಲೀಷ್ ಪ್ರಥಮಭಾಷೆ ಮತ್ತು ಕನ್ನಡ 2-8-0; 2. ಇಂಗ್ಲೀಷ್ ದ್ವಿತೀಯ ಭಾಷೆ ಮತ್ತು ಕನ್ನಡ 2-0-0; 3. ಕನ್ನಡ ಎಲ್ಲಾ ಭಾಗಗಳು 1-12-0; 4. ಇಂಗ್ಲೀಷ್ ಪ್ರಥಮಭಾಷೆ ಮಾತ್ರ 1-[illegible]; ಹೊಸವಾದಾರರಿಗೆ ಒಂದು ಕ್ಲಾಟಿ ವ್ಯಶ್ನೋತ್ತರ ಕ್ಯಾಲೆಂಡರ್ ಉಚಿತ.

ಕ॥ ಟಿ॥ ಪ್ರಶ್ನೋತ್ತರ 0-5-0; ಹಿಂದೂ ಚರಿತ್ರೆ ಪ್ರಶ್ನೋತ್ತರ 0-6-0; ಭೂವಿವರಣೆ ಪ್ರಶ್ನೋತ್ತರ 0-6-0; ಹೆಚ್ಚಾಗಿ ಕಳಿಸುವವರಿಗೆ ಉಚಿತ ಕಮಿಷನ್ ಕೊಡಲಾಗುವುದು.

ವಿಳಾಸ:—ವಿದ್ಯಾರ್ಥಿನಿಧಿ ಆಫೀಸ್, ಚಿಕ್ಕಬಳ್ಳಾಪುರ.

ಕಾಸಿಗೆ ತಕ್ಕ ಕಜ್ಜಾಯ

ನಾವು ಸರ್ವಗ್ರಾಹ್ಯವಾದ ಅತ್ಯುತ್ತಮವಾದ ಯಾವವಿಧವಾದ ಬೆರಕೆಯೂ ಇಲ್ಲದಿರುವ ಶುದ್ಧವಾದ ಸಾಬೂನುಗಳನ್ನೇ ತಯಾರು ಮಾಡುತ್ತೇವೆ. ಸುಲಭ ಬೆಲೆಯುಳ್ಳ ಸಾಬೂನುಗಳು ಅಂಗಡಿಗಳಲ್ಲಿ ಮಾರಾಟಕ್ಕೆ ಬರುತ್ತವೆ. ಅವುಗಳು ಒಳ್ಳೆ ಸಾಬೂನುಗಳಲ್ಲ. ಅಂಥಾ ಸಾಬೂನುಗಳು ಬಟ್ಟೆಗಳನ್ನು ಧ್ವಂಸಮಾಡುತ್ತವೆ. ಮತ್ತು ಮೈಗೆ ಹಚ್ಚಿಕೊಂಡರೆ ತುಂಬಾ ಕೆಡಕು ಮಾಡುತ್ತವೆ. ಸುಲಭ ಖರೀದಿಯೊಂದನ್ನೇ ನೋಡಿದರೆ ಪೂರ್ವದ ಗಾದೆಯಂತೆ **"ಕಾಸಿಗೆ ತಕ್ಕ ಕಜ್ಜಾಯ"** ಬರುತ್ತೆ.

ನಮ್ಮ ದೇಶದಲ್ಲಿರುವ ಎಲ್ಲಾ ಅಂಗಡಿಗಳಲ್ಲೂ ನಮ್ಮ ಸಾಬೂನುಗಳು ದೊರಯುತ್ತವೆ.

ಪರಿಮಳ ಭರಿತಗಳಾದ ಮೈಗೆ ಉಜ್ಜಿಕೊಳ್ಳಬಹುದಾದ ಸಾಬೂನುಗಳು ಸ್ಯಾಂಡಲ್ (ಶ್ರೀಗಂಧ), ಜೆಸ್‌ಮಿನ್ (ಜಾಜಿ), ಗುಲಾಬ್ ಮತ್ತು ಲಾವೆಂಡರ್ ಎಂಬವುಗಳು. "ಮೈಸೂರು ಸೋಪ್" ಎಂಬ ಹೆಸರುಳ್ಳ ಬಟ್ಟೆ ಸಾಬೂನು ಬಹಳ ಗುಣವುಳ್ಳದ್ದು.

ಸ್ವದೇಶೀ ಪದಾರ್ಥಗಳನ್ನು ಕೊಂಡರೆ ನಮ್ಮ ಹಣವು ನಮ್ಮ ದೇಶದಲ್ಲೇ ಚಲಾವಣೆಯಲ್ಲಿದ್ದು ನಮ್ಮ ದೇಶದ ಸಂಪದಭ್ಯುದಯಕ್ಕೆ ಕಾರಣವಾಗುತ್ತೆ. ಪರದೇಶದ ಮಾಲನ್ನು ಕೊಂಡರೆ ಹಣವು ನಮ್ಮ ಕೈಬಿಟ್ಟು ಪರದೇಶಕ್ಕೆ ಹೋಗುತ್ತೆ. ಸ್ವದೇಶದ ಮಾಲನ್ನೇ ಎಲ್ಲರೂ ಕೊಳ್ಳಬೇಕು.

ಗೌರ್ನಮೆಂಟು ಸೋಪು ಫ್ಯಾಕ್ಟರಿ, ಬೆಂಗಳೂರು.

Government Soap Factory, Bangalore.

[26 - 7]

ಇದಕ್ಕಿಂತ ಸುಸಮಯವೆ? ಪುಕಟ್ಟೆ! ಕೊಡಲಾಗುತ್ತೆ ಪುಕಟ್ಟೆ!!

ಪೇಟೆಂಟ್ ಲಿವರ್ ರೇಡಿಯಂ ರಿಸ್ಟ್ ವಾಚಿನೊಂದಿಗೆ

ಬೆಲೆಯುಳ್ಳ ೨೦ ಬಹುಮಾನಗಳು ಉಚಿತವಾಗಿ ಕೊಡಲಾಗುತ್ತೆ

ಪೇಟೆಂಟ್ ಲಿವರ್ ರೇಡಿಯಂ ಕೈಗಡಿಯಾರವನ್ನು ೨೦ ಬಹುಮಾನವಸ್ತುಗಳೊಂದಿಗೆ ಕೊಡುತ್ತೇವೆ.

ಎರಡು ತಿಂಗಳುಮಾತ್ರ

೨೦ ವಸ್ತುಗಳು:—ಜೇಬುದೀಪ, ಚಾಕು, ಫೌಂಟನ್ ಪೆನ್, ಮಸೀಬುಡ್ಡಿ, ಆಟೋಮ್ಯಾಟಿಕ್ ಪೆನ್ಸಿಲ್, ಪೆನ್ಸಿಲ್ ಜೀವೋದು, ಇಮಿಟೇಷನ್ ಕೆಂಪಿನ ಉಂಗುರ, ಹತ್ತಕಡಕಗಳು. ರೋಲ್ಡ್‌ಗೋಲ್ಡ್ ಸೇಫ್ಟಿಪಿನ್, ಕನ್ನಡಕ, ತೊಗಲುಪಟ್ಟಿ, ರೋಲ್ಡ್‌ಗೋಲ್ಡ್ ಲಾಕೆಟ್, ಸಿಗರೇಟ್ ಹಚ್ಚೋದು, ಷರ್ಟ್‌ಬಟನ್‌ಸೆಟ್ಟು, ಆಂಗಿಬಟನ್‌ಸೆಟ್, ಕೈವಸ್ತ್ರ, ಸೆಂಟ್‌ಬಾಟಲ್, ಟಮ್ಲರ್, ಇಸ್ಪೇಟುಪ್ಯಾಕು, ಕತ್ತರಿ, ೧೦ ವರುಷ ಗ್ಯಾರೆಂಟಿ.

ಕಾಲ ನಿಮಗೋಸ್ಕರ ಕಾಯುತ್ತದೆಯೇ? ಇಲ್ಲ! ಹಾಗಾದರೆ ಈ ದಿನವೇ ಬರೆದುಹಾಕಿ.

ಬೆಲೆ ರೂ ೧೦. ವಿ. ಪಿ. ವೆಚ್ಚ ರೂ ೧.

ದಿ ಮಾಸ್ಟರ್ ವಾಚ್ ಕಂಪೆನಿ,

ಭೂಲೇಶ್ವರ, (೩೪) ಮುಂಬಯಿ.

ಇಂಗ್ಲೆಂಡಿನಲ್ಲಿತಯಾರಾದ

ರಾಯಲ್ ಆರ್ಚರ್

ಬೈಸಿಕಲ್



(ಬೈಸಿಕಲ್ಲಿನ ಪ್ರತಿಯೊಂದು ಭಾಗದ ಮೇಲೂ 'ಆರ್ಚರ್' ಎಂಬ ಗುರುತು ಇರತ್ತದೆ.)

ಉತ್ತಮವಾದ ರೀತಿಯಲ್ಲಿ ಮರದ ಚೌಕದ ಟ್ಟಿನಿಂದ ಬಿಗಿಯಲ್ಪಟ್ಟು ರೈಲ್ವೆ ಖರ್ಚಿಲ್ಲದೆ ನಿಮ್ಮೂರಿಗೆ ಶೇರಿದ ಸ್ಟೇಷನ್ನಿಗೆ ತಲಪಿಸುತ್ತೇವೆ.

—ಅಱ ರೂಪಾಯಿ ೮ ಆಣೆ ಮಾತ್ರ—

ಇದರಲ್ಲಿ ಡನ್‌ಲಪ್ ಕಾರ್ಡ್ ಟೈರುಗಳು, ಫ್ರೀವೀಲು, ಎರಡು ರಿಂ ಬ್ರೇಕುಗಳು, ಮಡ್‌ಗಾರ್ಡುಗಳು, ಬಲವದಸ್ಪ್ರಿಂಗುಳ್ಳ ಆಸನವೂ ರಬ್ಬರಿನ ಪಾದುಕೆಗಳೂ ಲೂಕಸಿನ 'ಪಾಕ್‌ಫ್ಲೆಂ ಡರ್' ಎಂಬ ಲಾಂಛನವೂ ಸರ್ವೋತ್ಕೃಷ್ಟವಾದ ಫಾಂಟಿಯೂ ರ್ಡನಷ್ಟಿನ ಪ್ಲೇಟ್ಮಾಡಿದಪಂಪೂ ಬೇಕಾಗುವ ಆಯುಧಗಳೂ ಕೊಡಸಿಪವುಗಳನ್ನಿಡುವ ಚೀಲವೂ ಎಂಜಿಹಾಕುವ ಕೊಬೂ ಇರುತ್ತವೆ.

ಆರ್ಡರಿನಜೊತೆಯಲ್ಲಿ ೨೫ ರೂಪಾಯಿಗಳನ್ನು ಮುಂಗಡ ಕಳುಹಿಸಿಕೊಡಬೇಕು, ಮಿಕ್ಕಿದ್ದನ್ನು ವಿ. ಪಿ. ಮೂಲಕ ವಸೂಲ್ಮಾಡಲಾಗುತ್ತೆ.

ವೆಲಿಂಗಟನ್ ಸೈಕಲ್ ಅಂಡ್ ಮೋಟಾರ್ ಕಂಪೆನಿ,

ಮುಂಬಯಿ-ಹಾರ್ನಬಿರೋಡ್, ಪುಣೆ-ಆರ್ಸೆನಾಲ್‌ರೋಡ್

ಟೆಲಿಗ್ರಾಂ: "ಕಾಯಸಿದ್ಧಿ" ಟೆಲಿಫೋನ್: ನಂ. ೩೭೬೭

ತಿನ್ನಿಳುನಾಡು ಆಯುರ್ವೇದಿಕ್ ಫಾರ್ಮೆಸಿ, ಲಿಮಿಟೆಡ್.

P.O. Box 278. ಮದರಾಸು.

ಮದನಕಾಮೇಶ್ವರಿ ಲೇಹ್ಯಂ:—ವಯಸ್ಸಿನಲ್ಲಿ ಬಲವನ್ನೂ, ಮುದಿತನದಲ್ಲಿ ಪ್ರಾಯವನ್ನೂ ಉಂಟುಮಾಡುವುದು. ಇದು ನಪುಂಸಕತ್ವ, ಧಾತುಕ್ಷೀಣತೆ, ವಂಧ್ಯತ್ವ, ಸಂಭೋಗ ಕಾಲದಲ್ಲಿ ಬೇಗ ಇಂದ್ರಿಯಸ್ಖಲಿತವಾಗುವುದು. ವೀರ್ಯವು ನೀರಾಗಿರುವುದು ಇವನ್ನು ಹೋಗಲಾಡಿಸಿ, ಸಂಭೋಗಕಾಲದಲ್ಲಿ ತೃಪ್ತಿ, ಬಹಳ ಉತ್ಸಾಹ, ಕಡೆಗೆ ಕಣ್ಣಿಗೆ ತಂಪು, ದೇಹಕ್ಕೆ ಶಾಂತಿ ಇವುಗಳನ್ನುಂಟುಮಾಡುತ್ತೆ. ಬೆಲೆ ೧ ಸೇರಿಗೆ ರೂ. ೫;

ಮಹಾಕಾಯಾಮೃತ:—(ಸ್ತ್ರೀಯರ ಪ್ರದರರೋಗ) ಕುಸುಮವ್ಯಾಧಿಗಳಿಗೆ ಎತ್ತಿದೌಷಧ. (ರಿಜಿಸ್ಟರ್ಡ್) ಇದು ರಕ್ತಪ್ರದರ, ಶ್ವೇತಪ್ರದರ, ವಾತಪ್ರದರ, ಪಿತ್ತಜಪ್ರದರ, ಅಧಿಕಸ್ರಾವ, ದ್ರವ, ಜೇನುತುಪ್ಪ, ತುಪ್ಪ ಈ ವರ್ಣದಿಂದ ಮಜ್ಜಿಗೆಯಹಾಗೆ ದಪ್ಪವಾಗಿ, ವಾಸನೆಯಿಂದ ಕೂಡಿರುವುದು. ಮಲಬದ್ಧತೆ, ಹೊಟ್ಟೆಯುಬ್ಬರ, ನಡುವಿನಲ್ಲಿ ಭಳುಕು ಮೊದಲಾದ ವ್ಯಾಧಿಗಳನ್ನು ತಕ್ಷಣ ಗುಣಪಡಿಸುತ್ತೆ. ಬೆಲೆ ಡಬ್ಬಿ ೧ಕ್ಕೆ ರೂ. ೩

ಸಾವಿರಾರು ಸಿದ್ಧೌಷಧಿಗಳ ಪೂರ್ತಿ ಕ್ಯಾಟಲಾಗಿಗೆ ಬರೆಯಿರಿ.

ವಿಳಾಸ:—ಸೋಲ್ ಏಜಂಟರು (ಮೈಸೂರು ದೇಶಕ್ಕೆ) **ಸಿಟಿ ಮೆಡಿಕಲ್ ಜನರಲ್ ಏಜೆನ್ಸಿ, (V)**

೯೨, ಚಿಕ್ಕಪೇಟೆ ಬೆಂಗಳೂರು ಸಿಟಿ.

ನಾವು ಪ್ರತಿಯೊಂದು ಶಾಲೆಯ ಆಡಳಿವನ್ನೂ ಸಾಧ್ಯವಾದಮಟ್ಟಿಗೆ ಒಬ್ಬ ಹೆಂಗಸು ಮತ್ತು ಒಬ್ಬ ಗಂಡಸಿಗೆ ವಹಿಸಿದೆವು. ಈ ಸ್ವಯಂಸೇವಕರು ಔಷಧೋಪಚಾರದ ಮತ್ತು ಗ್ರಾಮನೈರ್ಮಲ್ಯದ ವ್ಯವಸ್ಥೆಯನ್ನು ನೋಡಿಕೊಳ್ಳಬೇಕಾಗಿದ್ದಿತು. ಸ್ತ್ರೀ ವರ್ಗಕ್ಕೆ ಸಂಬಂಧಪಟ್ಟ ಕೆಲಸವನ್ನು ಹೆಂಗಸರೇ ಮಾಡಬೇಕಾಗಿದ್ದಿತು.

ಔಷಧೋಪಚಾರದ ಕೆಲಸವು ಬಹು ಸುಲಭವಾಗಿದ್ದಿತು. ಹರಳೆಣ್ಣೆ, ಕ್ವಿನೈನ್ (ಜ್ವರದ ಗುಳಿಗೆ) ಮತ್ತು ಗಂಧಕದ ಮುಲಾಮು ಈ ಔಷಧಗಳು ಮಾತ್ರ ಸ್ವಯಂಸೇವಕರ ವಶದಲ್ಲಿರುತ್ತಿದ್ದುವು. ಕಾಹಿಲೆ ಮನುಷ್ಯನ ನಾಲಿಗೆಯು ಬಿಳ್ಳಗಾಗಿದ್ದರೆ ಅಥವಾ ಅವನು ತನಗೆ ಅಜೀರ್ಣವೆಂದು ಹೇಳಿದರೆ ಅವನಿಗೆ ಹರಳೆಣ್ಣೆಯನ್ನು ಕೊಡುತ್ತಿದ್ದರು. ಜ್ವರ ವಿದ್ದವರಿಗೆ ಮೊದಲು ಸ್ವಲ್ಪ ಹರಳೆಣ್ಣೆಯನ್ನು ಕೊಟ್ಟು ಆಮೇಲೆ ಕ್ವಿನೈನನ್ನು ಕೊಡುತ್ತಿದ್ದರು. ಕುರು, ಕಜ್ಜಿ ಮುಂತಾದವುಗಳಿಂದ ಪೀಡಿತರಾದವರಿಗೆ ಆ ಭಾಗಗಳನ್ನು ಚೆನ್ನಾಗಿ ತೊಳೆದು ಗಂಧಕದ ಮುಲಾಮನ್ನು ಹಚ್ಚುತ್ತಿದ್ದರು. ಯಾವ ಔಷಧವನ್ನೂ ಯಾರಿಗೆ ತೆಗೆದುಕೊಂಡು ಹೋಗುವುದಕ್ಕೆ ಕೊಡುತ್ತಿರಲಿಲ್ಲ. ಹೆಚ್ಚಿನ ರೋಗವಿದ್ದ ಕಡೆ ಡಾ. ದೇವರ ಸಲಹೆಯಂತೆ ನಡೆಯುತ್ತಿದ್ದರು. ಅವರು ಪ್ರತಿಯೊಂದು ಕೇಂದ್ರಕ್ಕೂ ವಾರಕ್ಕೊಂದುಬಾರಿ ಗೊತ್ತಾದ ದಿನ ಹೋಗುತ್ತಿದ್ದರು.

ಎಷ್ಟೋಮಂದಿ ಈ ಸುಲಭವಾದ ಚಿಕಿತ್ಸಾಕ್ರಮವನ್ನು ಉಪಯೋಗಿಸಿಕೊಂಡರು. ಅಲ್ಲಿ ಹರಡಿದ್ದ ಕಾಹಿಲೆಗಳು ಕಡಿಮೆಯಾಗಿದ್ದುವೆಂದೂ ಅವುಗಳ ನಿವಾರಣೆಗೆ ಸಾಧಾರಣ ಚಿಕಿತ್ಸೆಯು ಸಾಕಾಗಿದ್ದಿತೆಂದೂ ದೊಡ್ಡ ವೈದ್ಯರ ಸಹಾಯವೇನೂ ಬೇಕಾಗಿರಲಿಲ್ಲವೆಂದೂ ನೆನಪಿನಲ್ಲಿಟ್ಟುಕೊಂಡರೆ ಈ ಕಾರ್ಯ ವ್ಯವಸ್ಥೆಯು ವಿಚಿತ್ರವಾಗಿ ಕಾಣಲಾರದು. ಜನರಿಗಾದರೋ ಈ ಏರ್ಪಾಡು ಅತ್ಯನುಕೂಲವಾಗಿದ್ದಿತು.

ಗ್ರಾಮನೈರ್ಮಲ್ಯದ ಕೆಲಸವು ಕಠಿಣವಾಗಿದ್ದಿತು. ಜನರು ತಾವೇ ಏನು ಮಾಡಲೂ ಸಿದ್ಧರಾಗಿರಲಿಲ್ಲ. ಹೊಲದ ಕೂಲಿಗಾರರು ಕೂಡ ಸ್ವಂತವಾಗಿ ಝಾಡಮಾಲಿ ಕೆಲಸವನ್ನು ಮಾಡಲು ಸಿದ್ಧರಾಗಿರಲಿಲ್ಲ. ಆದರೆ ಡಾ. ದೇವರು ಸಲಭವ್ಯಾಗಿ ಎದೆಗುಂದುವವರಾಗಿರಲಿಲ್ಲ. ಒಂದು ಹಳ್ಳಿಯಲ್ಲಿ ಆದರ್ಶನೈರ್ಮಲವು ಕಂಗೊಳಿಸುವಂತೆ ಅವರೂ ಸ್ವಯಂಸೇವಕರೂ ತಮ್ಮ ಶಕ್ತಿಯನ್ನೆಲ್ಲಾ ಉಪಯೋಗಿಸಿದರು. ಅವರು ಬೀದಿಗಳನ್ನೂ ಅಂಗಳಗಳನ್ನೂ ಗುಡಿಸಿದರು. ಭಾವಿಗಳನ್ನು ಶುದ್ಧಿಮಾಡಿದರು, ಸುತ್ತಮುತ್ತಲಿನ ಗುಂಡಿಗಳನ್ನು ಮುಚ್ಚಿದರು. ಗಾಮಸ್ಥರು ತಮ್ಮಲ್ಲಿಯೇ ಸ್ವಯಂಸೇವಕರನ್ನು ಏರ್ಪಡಿಸುವಂತೆ ಒಲವಿನಿಂದ ಪ್ರೇರಿಸಿದರು. ಈ ಮಧುರ ಅನುಭವಗಳೊಡನೆ ಜನರ ಔದಾಸೀನ್ಯದ ಕಟುವಾದ ಅನುಭವಗಳೂ ಬೆಯದೆ ಇರಲಿಲ್ಲ. ಕೆಲವು ಹಳ್ಳಿಯ ಜನರು ತಮಗೆ ಈರೀತಿಯ ಕೆಲಸವು ಇಷ್ಟವಿಲ್ಲವೆಂಬುದನ್ನು ಬಾಯಿಬಿಟ್ಟು ಹೇಳಿದುದು ನನಗೆ ಜ್ಞಾಪಕವಿದೆ.

ಇಂದಿಗೆ ಮುಂಚೆ ಎಷ್ಟೋ ಸಭೆಗಳಲ್ಲಿ ನಾವು ವರ್ಣಿಸಿರುವ ಅನುಭವವೊಂದನ್ನು ಇಲ್ಲಿ ವಿವರಿಸಿದರೆ ಅಸಂಗತವಾಗಲಾರದು. ಭಿತಿಹರ್ವಾ ಎಂಬುದೊಂದು ಸಣ್ಣ ಹಳ್ಳಿ. ಅಲ್ಲಿ ನಮ್ಮ ಶಾಲೆಯಿದ್ದಿತು. ಅದರ ಹತ್ತಿರಲೇ ಇದ್ದ ಇನ್ನೂ ಸಣ್ಣ ಹಳ್ಳಿಯೊಂದಕ್ಕೆ ನಾನು ಹೋದಾಗ ಬಹು ಕೊಳಕಾದ ಬಟ್ಟೆಗಳನ್ನುಟ್ಟುಕೊಂಡ ಕೆಲವು ಹೆಂಗಸರನ್ನು ನಾನು ಕಂಡೆನು. ಅವರು ತಮ್ಮ ಒಬ್ಬೆಗಳನ್ನೇಕೆ ಒಗೆದುಕೊಳ್ಳುವುದಿಲ್ಲವೆಂದು ಕೇಳಲು ನಾನು ಕಸ್ತೂರಿಬಾಯಿಯನ್ನು ಕೇಳಿದೆನು. ಆಕೆಯು ಅವರಲ್ಲಿ ಒಬ್ಬಳೊಡನೆ ಮಾತನಾಡಲು ಆ ಹೆಂಗಸು ಕಸ್ತೂರಿಬಾಯಿಯನ್ನು ತನ್ನ ಗುಡಿಸಿಲಿನೊಳಕ್ಕೆ ಕರೆದುಕೊಂಡುಹೋಗಿ "ನೋಡಿ ಇಲ್ಲಿ ಬೇರೆ ಒಬ್ಬೆಯಿಟ್ಟುಕೊಳ್ಳುವುದಕ್ಕೆ ಪೆಟ್ಟಿಗೆಯೂ ಇಲ್ಲ ಮಾಡವೂ ಇಲ್ಲ. ನಾನುಟ್ಟುಕೊಂಡಿರುವ ಸೀರೆಯೊಂದೇ ನನಗಿರುವುದು ನಾನು ಅದನ್ನು ಒಗೆಯುವುದು ಹೇಗೆ? ಮಹಾತ್ಮಜಿಯವರಿಗೆ ಹೇಳಿ ನನಗಿನ್ನೊಂದು ಸೀರೆಯನ್ನು ತಂದುಕೊಡಬೇಕೆಂದು. ಆಗ ನಾನು ನಿತ್ಯವೂ ಎರಡು ಒಗೆದ ಒಬ್ಬೆಯನ್ನುಡುವೆಂದು ಮಾತು ಕೊಡುತ್ತೇನೆ." ಎಂದಳು.

ಇಂತಹ ಗುಡಿಸಲು ಇದೊಂದೇ ಅಲ್ಲ. ಹಿಂದೂಸ್ಥಾನದ ಎಷ್ಟೋ ಹಳ್ಳಿಗಳಲ್ಲಿ ಇಂತಹವು ಇವೆ. ಧರತಪಿಡದ ಲೆಪ್ಪವಿಲ್ಲದಷ್ಟು ಗುಡಿಸಿಲುಗಳಲ್ಲಿ ಜನರು ಒಂದು ಸಾಮಾನಿಲ್ಲದೆ ಮಾಸಕ್ಕಾಗಿ ಮೈಮೇಲೆ ಹಾಕಿಕೊಂಡಿರುವ ಚಿಂದಿಯನ್ನು ಬಿಟ್ಟು ಬೇರೆ ಒಬ್ಬೆಯೊಂದಿಲ್ಲದೆ ಜೀವನ ನಡೆಸುತ್ತಾರೆ.

ಇನ್ನೊಂದು ಅನುಭವವನ್ನು ಇಲ್ಲಿ ತಿಳಿಸುತ್ತೇನೆ. ಚಂಪಾರಣ್ಯದಲ್ಲಿ ಹುಲ್ಲಿಗೂ ಬಿದಿರಿಗೂ ಬರವಿಲ್ಲ. ಭಿತಿಹರ್ವದಲ್ಲಿ ಈ ಸಾಮಗ್ರಿಗಳಿಂದ ಶಾಲೆಯ ಗುಡಿಸಲನ್ನು ಕಟ್ಟಿದ್ದರು. ಯಾರೋ ಒಬ್ಬರು ಹತ್ತಿರವಿದ್ದ ಬನಿಯಾನ್ದಾರರ ಆಳುಗಳಲ್ಲಿ ಕೆಲವರಿರಬಹುದು—ಆ ಗುಡಿಸಿಲಿಗೆ ಎಂದೋ ರಾತ್ರಿ ಬೆಂಕಿ ಹಚ್ಚಿದರು. ಇನ್ನೊಂದು ಗುಡಿಸಿಲನ್ನು ಬಿದಿರಿನಿಂದಲೂ ಹುಲ್ಲಿನಿಂದಲೂ ಕಟ್ಟುವುದು ಉಚಿತವಲ್ಲವೆಂದು ತೋರಿತು. ಆ ಶಾಲೆಯನ್ನು ಶ್ರೀ ಸೋಮಣರು ಸರಿಯಾದ ಒಂದು ಮನೆಯನ್ನೇ ಕಟ್ಟಬೇಕೆಂಯ ನಿಶ್ಚಯಿಸಿದರು. ಅವರು ಪಡುತ್ತಿದ್ದ ಶ್ರಮವನ್ನು ನೋಡಿ ಇತರರನೇಕರು ಅವರೊಡನೆ ಸೇರಿದರು. ಹೀಗೆ ಒಂದು ಇಟ್ಟಿಗೆಯ ಮನೆಯು ಶೀಘ್ರದಲ್ಲಿಯೇ ಸಿದ್ಧವಾಯಿತು. ಇನ್ನು ಅದನ್ನೇನೂ ಸ್ಫುಟ್ಟಹಾಕುವ ಭಯವಿರಲಿಲ್ಲ.

ಈ ರೀತಿಯಾಗಿ ಸ್ವಯಂಸೇವಕರು ತಮ್ಮ ಶಾಲೆಗಳು, ಗ್ರಾಮನೈರ್ಮಲ್ಯ ವ್ಯವಸ್ಥೆ, ಔಷಧೋಪಚಾರ-ಇವುಗಳಿಂದ ಹಳ್ಳಿಯ ಜನರ ವಿಶ್ವಾಸವನ್ನೂ ಮನ್ನಣೆಯನ್ನೂ ಸಂಪಾದಿಸಿ ಅವರ ಮೇಲೆ ಸತ್ಪ್ರಭಾವವನ್ನು ಬೀರಲು ಶಕ್ತರಾದರು.

ಆದರೆ ಈ ಗ್ರಾಮೋಜ್ಜೀವನ ಕಾರ್ಯವನ್ನು ಚಿರಸ್ಥಾಯಿಯಾದ ಆಸ್ತಿಭಾರದಮೇಲೆ ನಿಲ್ಲಿಸಬೇಕೆಂಬ ನನ್ನ ಆಶೆಯು ಕೈಗೂಡಲಿಲ್ಲವೆಂದು ನಾನು ವಿಷಾದ ಪೂರ್ವಕವಾಗಿ ಒಪ್ಪಿಕೊಳ್ಳಬೇಕು. ಸ್ವಯಂಸೇವಕರು ಕೆಲವುಕಾಲ ಮಾತ್ರ ನಿಲ್ಲಲು ಬಂದಿದ್ದರು. ಹೊರಗಿನಿಂದ ಇನ್ನೂ ಹೆಚ್ಚುಮಂದಿ ದೊರಕಲಿಲ್ಲ. ಸದಾ ನಿಂತು ಪ್ರತಿಫಲವಿಲ್ಲದೆ ಕೆಲಸಮಾಡುವ ಜನರಾರೂ ವಿಹಾರದಲ್ಲಿಯೇ ದೊರಕಲಿಲ್ಲ. ಚಂಪಾರಣ್ಯದಲ್ಲಿ ನನ್ನ ಕೆಲಸವು ಮುಗಿದೊಡನೆಯೇ ಈ ಮಧ್ಯೆ ಬೇರೆಕಡೆ ಹೊಂಚುಹಾಕುತ್ತಿದ್ದ ಕಾರ್ಯವು ನನ್ನನ್ನು ಸೆಳೆದೊಯ್ದಿತು. ಆದರೂ ಚಂಪಾರಣ್ಯದಲ್ಲಿ ನಾಲ್ಕಾರುತಿಂಗಳು ಮಾಡಿದ ಕೆಲಸವು ಎಷ್ಟು ಆಳವಾಗಿ ಬೇರೂರಿತೆಂದರೆ ಅದರ ಪ್ರಭಾವವು ಇಂದುಕೂಡ ಅಲ್ಲಿ ಒಂದಲ್ಲದಿದ್ದರೆ ಇನ್ನೊಂದುರೂಪದಲಿ ಕಾಣಬರುವುದು.

ಹೊಸ ಪುಸ್ತಕ ! ಅಲಭ್ಯ ಲಾಭ !! ಹೊಸ ಪುಸ್ತಕ !!!

ಕನ್ನಡ ಭಾಷೆಯಲ್ಲಿ ಇದುವರೆಗೆ ಯಾರವ ಓದದಿರುವ ಅತ್ಯಂತ ನೂತನ ಗ್ರಂಥ! ಸ್ತ್ರೀಪುರುಷರು ಅತ್ಯಗತ್ಯವಾಗಿ ಓದಬೇಕಾದ ಗ್ರಂಥ! ಗೃಹಸ್ಥಾಶ್ರಮಿಗಳು ಸೌಖ್ಯವನ್ನೂ ಮನಶಾಂತಿಯನ್ನೂ ಹೊಂದುವುದು ಹೇಗೆಂದು ತಿಳಿಯಬೇಕಾದರೆ ಓದಬೇಕಾದ ಗ್ರಂಥ!

ದಾಂಪತ್ಯ ವಿಜ್ಞಾನ

ಪುಟ ಸಂಖ್ಯೆ ಕನ್ನಡ ಬಾಲಬೋಧೆಯ ಆಕಾರದಲ್ಲಿ ೨೫೦ ಪುಟ ಸಚಿತ್ರವಾಗಿರುವುದು. ಈ ಗ್ರಂಥವನ್ನು ನೂರಾರು ವರ್ಷಗಳ ಹಿಂದಿನ ಶಾಸ್ತ್ರಗ್ರಂಥಗಳು, ಪಾಶ್ಚಾತ್ಯ ತತ್ವಜ್ಞರ ಗ್ರಂಥಗಳು, ಮತ್ತು ಅನೇಕ ಆಯುರ್ವೇದ, ಸಾಮಾಜಿಕ, ಯೌಗಿಕ ಗ್ರಂಥಗಳು-ಇವುಗಳ ಆಧಾರದಿಂದ ಬರೆಯಲಾಗಿದೆ. ಇದನ್ನು ಓದಿ, ಪ್ರತಿಯೊಬ್ಬ ಸ್ತ್ರೀಪುರುಷ ವ್ಯಕ್ತಿಯು ಲಾಭವನ್ನು ಹೊಂದಬೇಕೆಂಬ ಉದ್ದೇಶದಿಂದ ಇದರ ಬೆಲೆಯನ್ನು ಕಡಿಮೆ ಯಾಗಿಟ್ಟಿರುವೆವು. ಕನ್ನಡ ಭಾಷೆಯಲ್ಲಿ ಇಂತಹ ಗ್ರಂಥವು ಇದುವರೆಗೆ ಮುದ್ರಣವಾಗಲಿಲ್ಲ. ಇದರಲ್ಲಿರುವ ವಿಷಯಗಳನ್ನು ನೋಡಿದರೆ ಇದನ್ನು ಓದುವುದರಿಂದಾಗುವ ಲಾಭವನ್ನು ತಿಳಿಯಬಹುದು.

ಇದರಲ್ಲಿರುವ ವಿಷಯಗಳು

೧ ದಾಂಪತ್ಯವಿಜ್ಞಾನವೆಂದರೇನು? ೨ ಪುನರ್ಜನ್ಮ ೩ ಸೃಷ್ಟಿಯ ಉತ್ಪತ್ತಿ ಮತ್ತು ಉದ್ದೇಶ್ಯ ೪ ಪ್ರಾಣಿಗಳ ಕರ್ತವ್ಯ ೫ ಚತುರಾಶ್ರಮ ಜೀವನ ೬ ಶರೀರ ರಚನೆ ೭ ಜನನೇಂದ್ರಿಯ ೮ ದೇಹಧರ್ಮ ೯ ಆರೋಗ್ಯ ರಕ್ಷಣೆ ೧೦ ಆಹಾರ ನಿಯಮ ೧೧ ಉತ್ತೇಜಕ ಆಹಾರ ಪರಿಣಾಮ ೧೨ ಆರೋಗ್ಯ, ವ್ಯಾಯಾಮ ೧೩ ಸ್ತ್ರೀದೇಹ ರಚನೆ ೧೪ ಸ್ತ್ರೀಯರ ವಿಶೇಷ ಗುಣಗಳು ೧೫ ಪ್ರೇಮವೆಂದರೇನು? ೧೬ ಲಜ್ಜೆಯೆಂದರೇನು? ೧೭ ಸತಿ ಪತಿಯರ ಪ್ರೇಮ ೧೮ ವಿವಾಹದ ಉದ್ದೇಶ ೧೯ ವಿವಾಹದ ಕಾಲ ೨೦ ವಿವಾಹಯೋಗರಾದ ಸ್ತ್ರೀಯರು ೨೧ ವಿವಾಹಯೋಗ್ಯರಾದ ಪುರುಷರು ೨೨ ಪತಿಯ ಧರ್ಮ ೨೩ ಪತ್ನಿಯ ಧರ್ಮ ೨೪ ಅನುರಾಗ ಮತ್ತು ಕಾಮಗುಣಗಳಲ್ಲಿರುವ ಭೇದ ೨೫ ಪತ್ನಿಯು ಪತಿಯನ್ನು ಹೇಗೆ ವಶಪಡಿಸಿಕೊಳ್ಳಬಹುದು ೨೬ ಪತಿಯು ಪತ್ನಿಯನ್ನು ಹೇಗೆ ವಶಪಡಿಸಿಕೊಳ್ಳಬಹುದು ೨೭ ಸಂಯೋಗಕ್ಕೆ ಕಾಲ ೨೮ ಸ್ತ್ರೀಪುರುಷರ ಮರ್ಮಾವಯವಗಳು ೨೯ ರುತುವಿನಿಂದಾಗುವ ಲಾಭಾಲಾಭಗಳೂ, ಅದರ ತತ್ವಗಳು ೩೦ ಜೀವನ ದಲ್ಲಿ ಸ್ತ್ರೀಯರು ತಿಳಿದುಕೊಳ್ಳಬೇಕಾದ ವಿಷಯಗಳು ೩೧ ಇಷ್ಟಾನುಸಾರವಾಗಿ ಗಂಡು ಹೆಣ್ಣು ಮಕ್ಕಳನ್ನು ಪಡೆಯುವುದು ಹೇಗೆ? ೩೨ ಗರ್ಭದಲ್ಲಿರುವ ಶಿಶುವನ್ನು ಸ್ತ್ರೀ ಅಥವಾ ಪುರುಷನೆಂದು ತಿಳಿಯುವ ಬಗೆ ೩೩ ಗರ್ಭಸ್ರಾವವಾಗುವುದೇಕೆ? ಮತ್ತು ಅದರ ನಿವಾರಣೆ ೩೪ ಸುಖ ಪ್ರಸವವಾಗುವುದಕ್ಕೇನು ಮಾಡಬೇಕು? ೩೫ ಮಗುವನ್ನು ಪೋಷಿಸುವ ಕ್ರಮ ೩೬ ಸಂತಾನೋದ್ದೇಶ್ಯ ೩೭ ಗರ್ಭಕಾಲದಲ್ಲಿ ಉಂಟಾಗಬಹುದಾದ ವ್ಯಾಧಿಗಳೂ ಅವುಗಳ ನಿವಾರಣೆಯ ಉಪಾಯಗಳೂ ೩೮ ಸ್ತ್ರೀಯರು ಬಂಜೆಯರೆ? ಬಂಜೆತನವನ್ನು ಹೋಗಲಾಡಿಸುವ ಕ್ರಮ ೩೯ ಪುರುಷರಲ್ಲಿಯೂ ಬಂಜೆತನವಿದೆಯೆ? ಅದನ್ನು ನಿವಾರಿಸುವ ಉಪಾಯಗಳು ೪೦ ಮಕ್ಕಳು ಹೆಚ್ಚಾಗಿ ಹುಟ್ಟುವುದರಿಂದ ದೇಶಕ್ಕೆ ಹಾನಿಯೋ ಲಾಭವೆ? ಮಕ್ಕಳು ಹೆಚ್ಚಾಗಂತೆ ಬೇರೆ ದೇಶಗಳಲ್ಲಿ ಅನುಸರಿಸುತ್ತಿರುವ ಕ್ರಮಗಳು ೪೧ ವಿವಾಹಿತ ಬ್ರಹ್ಮಚರ್ಯೆ? ೪೨ ಅತಿ ಸಂಭೋಗ ಮತ್ತು ಅದರಿಂದಾಗುವ ಹಾನಿ ೪೩ ಸಂಭೋಗ ಸುಖವೆಂದರೇನು? ೪೪ ತಂದೆತಾಯಿಗಳ ಮೂಲಕ ಮಕ್ಕಳಿಗೆ ಬರುವ ರೋಗಗಳು ೪೫ ಮಕ್ಕಳ ಜೊತೆಗೆ ತಂದೆತಾಯಿಗಳ ವರ್ತನೆ ಹೇಗಿರಬೇಕು. ೪೬ ಈಗ ದೇಶದೇಶಗಳಲ್ಲಿ ಯುವಕ ಯುವತಿಯರು ಬಾಲಕ ಬಾಲಕಿಯರು ಸ್ವಭಾವವಿರುದ್ಧವಾಗಿ ಸುಖ ಹೊಂದಲು ಅನುಸರಿಸುತ್ತಿರುವ ದುರಭ್ಯಾಸಗಳು ೪೭ ಅದರಿಂದಾಗುತ್ತಿರುವ ಹಾನಿ, ಅದನ್ನು ನಿವಾರಿಸಲು ತಂದೆತಾಯಿಗಳು ಗಮನಿಸಬೇಕಾದ ವಿಷಯಗಳು ೪೮ ಈ ದುರಭ್ಯಾಸಗಳನ್ನು ನಿರ್ಮೂಲಗೊಳಿಸುವ ಉಪಾಯಗಳು ೪೯ ವೇಶ್ಯಾಸ್ತ್ರೀಯರಿಂದ ದೇಶಕ್ಕುಂಟಾಗುವ ಲಾಭ ನಷ್ಟಗಳು ೫೦ ಕಾಮುಕರು ಲಕ್ಷ್ಯ ಸಬೇಕಾದ ವಿಷಯ -೫೧ ಸ್ತ್ರೀರೋಗಗಳು—ಅದರಿಂದ ತಪ್ಪಿಸಿಕೊಳ್ಳುವ ಉಪಾಯಗಳು ೫೨ ಗೃಹಸ್ಥಾಶ್ರಮದ ಜೀವನಸಾರ್ಥಕ್ಯತೆ ೫೩ ಗೃಹಸ್ಥಾಶ್ರಮಿಗಳಿಂದ ಸಮಾಜಕ್ಕೂ ದೇಶಕ್ಕೂ ಆಗಬಹುದಾದಸೇವೆ ೫೪ ಗೃಹಸ್ಥಾಶ್ರಮಿಗಳಲ್ಲದವರು ಮಾಡಬಹುದಾದ ಸೇವೆ ೫೫ ಗೃಹಸ್ಥಾಶ್ರಮಿಯು ಪರಮಾರ್ಥ ಸಾಧನೆ ಇತ್ಯಾದಿ, ಇತ್ಯಾದಿ,

ಮೇಲೆ ಹೇಳಿರುವ ವಿಷಯಗಳಲ್ಲದೆ ಇನ್ನೂ ಅನೇಕಾನೇಕ ಮರ್ಮಗಳನ್ನು ಈ ಗ್ರಂಥದಲ್ಲಿ ವಿವರಿಸಲಾಗಿದೆ, ಆದುದರಿಂದ ಪ್ರತಿಯೊಬ್ಬ ಸ್ತ್ರೀ ಪುರುಷ ವ್ಯಕ್ತಿಯೂ ಈ ಗ್ರಂಥವನ್ನು ತರಿಸಿ, ಓದಿ ಸಾರವನ್ನು ಗ್ರಹಿಸಿ, ಆ ಕ್ರಮವನ್ನು ಅನುಷ್ಠಾನಕ್ಕೆ ತಂದರೆ, ಸಂಸಾರದಲ್ಲಿ ಸುಖವನ್ನೂ ಗೃಹಸ್ಥಾಶ್ರಮದಲ್ಲಿ ಪರಮಾರ್ಥ ಸಾಧನೆಯನ್ನೂ ಸಾಧಿಸಬಹುದು, ಅನೇಕ ಆಯುರ್ವೇದ ಗ್ರಂಥಗಳು, ಡಾ॥ ಟ್ರಾಲ್, ಡಾ॥ ಹ್ಯಾಲವಕ್ ಎಲ್ಲಿಸ್, ಗ್ಯಾಂಬರ್ಸ್, ಡಾ॥ ಕೂಟ್ನಿಬೀರ್, ಡಾ॥ ಸ್ವಿವರ್ಟ್ ವಾರನ್, ಡಾ॥ ಮೇರೀಸ್ಟೋಪ್ಸ್ ಇವರ ಗ್ರಂಥಗಳು, ಪಂಡಿತ ಕೃಷ್ಣಕಾಂತ ಮಾಲವೀಯ, ಪಂಡಿತ ಸಂತರಾಮು ಇತ್ಯಾದ್ಯನೇಕ ಮಹನೀಯರ ಗ್ರಂಥಗಳ ಆಧಾರದ ಮೇಲೆ ಇದನ್ನು ಬರೆದಿರುವುದರಿಂದ ಇದರ ಮಹತ್ವವನ್ನು ನಾವು ಪ್ರತ್ಯೇಕವಾಗಿ ವರ್ಣಿಸಬೇಕಾಗಿಲ್ಲ, ಆದ್ದರಿಂದ ಪ್ರತಿಯೊಂದು ಮನೆಯಲ್ಲಿಯೂ ಈ ಪುಸ್ತಕವಿರುವುದು ಶ್ರೇಯಸ್ಕರವಾದುದು, ಗುಪ್ತವಾಗಿ ನಮ್ಮ ಸಮಾಜವನ್ನೇ ನಾಶಮಾಡುತ್ತಿರುವ ಅನೇಕ ದುಷ್ಟ ಪದ್ಧತಿ ಮತ್ತು ದುರಭ್ಯಾಸಗಳನ್ನು ನಿವಾರಿಸಿ, ಸಮಾಜೋನ್ನತಿಯೂ ಆ ಮೂಲಕ ದೇಶೋನ್ನತಿಯೂ ಉಂಟಾ. ಎಂತೆಮಾಡಬೇಕೆಂದು ನಾವು ಈ ಗ್ರಂಥವನ್ನು ಮುದ್ರಿಸಿರುವೆವು.

ಬೆಲೆ ರೂ. ೧—೮—೦ ಮಾತ್ರ ಅಂಚೆವೆಚ್ಚ ಬೇರೆ. ಕ್ಯಾಲಿಕೋ ಬೈಂಡ್ ಲೈಬ್ರರಿ ಮುದ್ರಣ ೨—೦—೦.

ಪುಸ್ತಕ ದೊರೆಯುವ ಸ್ಥಳ:

ಟಾಗೋರ್ ಕಂಪೆನಿ,
೧೨೪, ಚಾಮರಾಜಪೇಟೆ, ಬೆಂಗಳೂರು ಸಿಟಿ.

ಎಂ. ಎಸ್. ರಾವ್ ಕಂಪೆನಿ,
ಅವೆನ್ಯೂರೋಡ್, ಬೆಂಗಳೂರು ಸಿಟಿ.

(೮೬ ಪುಟದಿಂದ)

ವಿನ ಬೆಳಿಗ್ಗೆ ಜನರನ್ನು ಶಾಂತಗೊಳಿಸಲು ಮಾಡಿದ ಭಾಷಣ, ೩೦ನೇ ತಾರೀಖಿನ ದಿನ ಗುಂಡು ಹಾರಿಸಿದ್ದನ್ನು ಕೇಳಿದ್ದು, ೧೧ನೇ ತಾರೀಖಿನ ದಿನ ಸರ್ಕಾರದವರು ಪತ್ರಿಕೆಗಳ ಬಾಯಿಗೆ ಬೀಗಹಾಕಿದ್ದು ಇವೇ ಮುಂಖ್ಯಾಂಶಗಳು.

ಅಧ್ಯಕ್ಷರ ಮುಖ್ಯ ಪ್ರಶ್ನೆಗಳು :—

ಪ್ರ—ಸಂಪಾದಕ ವೃತ್ತಿಯಲ್ಲಿ ನಿಮಗೆಷ್ಟು ವರ್ಷಗಳ ಅನುಭವವಿದೆ?

ಉ—೪-೫ ವರ್ಷಗಳು.

ಪ್ರ—ಸಣ್ಣ ವಿಷಯ ಇಷ್ಟು ಪ್ರಬಲವನ್ನಾಗಿ ಪರಿಣಮಿಸುವಂತೆ ಮಾಡಿದ್ದು ಸರಿಯೆ?

ಉ—೩೦ನೇ ತಾ॥ ಸಾಯಂಕಾಲದ ವರೆಗೆ ಇದು ಸಣ್ಣ ಶಾಲಾವಿಚಾರವೇ ಆಗಿತ್ತು. ಆಮೇಲೆ ನಡೆದ ವಿದ್ಯಮಾನಗಳಿಂದ ಪ್ರಚಂಡವಾಗಿ ಹೋಯಿತು.

ಪ್ರ—ಇದಕ್ಕೆಲ್ಲ ಹೊರಗಿನ, ಒಳಗಿನ ಪತ್ರಿಕೆಗಳೇ ಕಾರಣವಲ್ಲವೆ?

ಉ—ಅಲ್ಲ. ಸರ್ಕಾರದ ಔದಾಸೀನ್ಯ, ೩೦ನೇ ತಾರೀಖಿನ ರಾತ್ರಿ ಅಧಿಕಾರಿಗಳು ತೋರಿಸಿದ ದೌರ್ಬಲ್ಯ ಮುಂತಾದುವೇ ಮೂಲಕಾರಣ. ಇದರ ಮೇಲೆ ಅದಕ್ಕೆ ಕೋಮುವಾರು ಬಣ್ಣಬೇರೆ ಬಂತು.

ಪ್ರ—ಹೊರಗಿನ ಪತ್ರಿಕೆಗಳಲ್ಲಿ ಉತ್ಪ್ರೇಕ್ಷೆಯ ಸುದ್ದಿಗಳೆಲ್ಲ ಬಂದಿಲ್ಲವೆ. ಸ್ಥಳೀಯ ಪತ್ರಿಕೆಗಳಲ್ಲಾ ಸಿಕ್ಕಾಪಟ್ಟೆ ಬರೆಯುತ್ತಿರಲಿಲ್ಲವೆ?

ಉ—ಅಲ್ಲಿ ಇಲ್ಲಿ ಒಂದೆರಡು ಉದಾಹರಣೆಗಳನ್ನು ತೋರಿಸಬಹುದಲ್ಲದೆ ಉಳಿದುದೆಲ್ಲ ಸರಿಯಾದ ವರ್ತಮಾನಗಳೆಂದೇ ಹೇಳಬೇಕು.

ಪ್ರ—ಸರ್ಕಾರದ ಕಮ್ಯೂನಿಕೆಗಳ ವಿಚಾರ ನಿಮ್ಮ ಅಭಿಪ್ರಾಯವೇನು?

ಉ—ಅವುಗಳಲ್ಲಿ ಮುಪ್ಪಾಗ ಮೂರುವೀಸ ಪಾಲು ಸುಳ್ಳು ಸುದ್ದಿಗಳಿವೆ. ಮನಃಪೂರ್ವಕವಾಗಿ ಹೇಳಿದುವೆಂದು ನಾನು ಹೇಳಲಾರೆ.

ಪ್ರ—ತಾವು ಪತ್ರಿಕಾವೃತ್ತಿಯ ಮುಖ್ಯ ಪ್ರತಿನಿಧಿಗಳು. ಕಮ್ಯೂನಿಕೆಗಳ ಟೀಕೆ. ಇತರ ಪತ್ರಿಕೆಗಳಲ್ಲಿ ಪ್ರಕಟವಾಗಿರುವ ಲೇಖನಗಳು ಈ ವಿಚಾರವನ್ನೆಲ್ಲ ಕುರಿತೊಂದು ವರದಿಯನ್ನು ಬರೆದು ನಮಗೆ ಕೊಟ್ಟು ಸಹಾಯ ಮಾಡುವಿರಾ?

ಉ—ಸಂತೋಷವಾಗಿ ಮಾಡುತ್ತೇನೆ.

ಶ್ರೀ ರಾಮರಾಯರವರ ಮುಖ್ಯ ಪ್ರಶ್ನೆಗಳು :—

ಪ್ರ—ಸಂಪಾದಕರಿಗೆಂತಹ ವಿದ್ಯಾಸಂಪತ್ತಿಯಿರಬೇಕು?

ಉ—ಸಂಪಾದಕ ವೃತ್ತಿಗಾರರಿಗೆ ಓದುಬರಹ ಚನ್ನಾಗಿ ಬಂದಿರಬೇಕು. ಲೋಕಸುಖಕ್ಕೆ ಕಾರಣವಾದ ಲೌಕೀಕ ವಿಚಾರಗಳೆಲ್ಲ ತಿಳಿದಿರಬೇಕು. ಹೀಗೆ ಇರಬೇಕೆಂದು ಹೇಳಲು ಯಾರಿಗೂ ಅಧಿಕಾರವಿಲ್ಲ.

ಪ್ರ—ಪ್ರೆಸ್ಸಿಗೆ ಯಾವ ಅಡ್ಡಿಯೂ ಇರಬಾರದೊ?

ಉ—ಹೌದು. ಪ್ರೆಸ್ಸು ಸಂಪೂರ್ಣ ಸ್ವತಂತ್ರವಾಗಿರಬೇಕು.

ಪ್ರ—ಗುಂಡುಹಾರಿಸಿದ್ದನ್ನು ತಾವು ಕಂಡಿರೊ?

ಉ—ಹೌದು. ೩೦ನೇ ತಾರೀಖು ಸಾಲಬಂದವಾಡಿ ಮೂಲೆ ಮನೆಯ ಮಹಡಿಯಿಂದ ೫-೬ ಗುಂಡುಗಳು ಬಂದವು. ಅಬ್ಬಾಸಖಾನರ ಮನೆಯಿಂದ ಬಂತೋ ಇಲ್ಲವೋ ನಾನು ಕಾಣೆ.

ಪ್ರ—ನೀವು ಶಾಲೆಯ ಬಳಿ ಬಂದಾಗ ಅಲ್ಲಿ ಇಲ್ಲಿ ಮುಸಲ್ಮಾನರನ್ನು ನೋಡಿದೆನೆಂದು ಹೇಳಿದ್ದೀರಿ. ಖಾನರ ಮನೆಯ ಕಾಂಪೌಂಡಿನಲ್ಲೂ ಕೆಲವು ಮುಸಲ್ಮಾನರಿದ್ದರೆಂದು ಹೇಳಿದ್ದೀರಿ. ಹಾಗಾದರೆ ಮುಸಲ್ಮಾನರು ಮೊದಲೇ ಹಿಂದುಗಳನ್ನು ಹೊಡೆಯಲಿಕ್ಕೆ ಸಿದ್ಧಮಾಡಿಕ್ಕೊಂಡಿದ್ದರೆಂದು ನಿಮ್ಮ ಅಭಿಪ್ರಾಯವೊ? ಅಬ್ಬಾಸಖಾನರು ಬಹಳ ಯುಕ್ತಿವಂತರು. ಹೀಗೆಲ್ಲ ಸಿದ್ಧಮಾಡಿಕ್ಕೊಂಡರೆ ಮುಂದೆ ಕೆಡಕಾದೀತೆಂದು ಅವರಿಗೆ ಗೊತ್ತುಂಟು.

ಉ—ಪೂರ್ವ ಸಿದ್ಧತೆಯು ಕೊಂಚ ಮಟ್ಟಿಗೆ ಇತ್ತೆಂದು ನಾನು ಭಾವಿಸುತ್ತೇನೆ.

ಪ್ರ—ಅದಕ್ಕೆ ನಿಮ್ಮ ಕಾರಣಗಳೇನು?

ಉ—೩೦ನೇ ತಾರೀಖಿನ ದಿನವೇ ನಾನು ಪೋಲೀಸು ಶಾಖಾಧಿಕಾರಿಗಳನ್ನು (ಶ್ರೀ ಹಿರಿಯಣ್ಣಯ್ಯ) ಅವರ ಮನೆಯಲ್ಲಿ ಕಂಡು, ಪೆಟ್ಟುಬಿದ್ದ ಅವರ ಕ್ಲೀನ್ ಮುಸನುಷಾರ ಕೇಳಿದೆ. ಆಗ ಅವರು "ನಾನು ಖಾನರ ಮನೆಯೊಳಕ್ಕೆ ಹೋದೆ. ಮನೆಯಲ್ಲಿ ಆಯುಧಪಾಣಿಗಳಾದ ಜನರಿದ್ದರು. ಅವರೆಲ್ಲ ಜನ್ನಾಗಿ ಕುಡಿದಿದ್ದರು. ಖಾನರನ್ನು ನಾನು ಹೊರಕ್ಕೆ ಕರದೆ. ಆದರೆ ಅಲ್ಲಿದ್ದವರು ಅವರನ್ನು ಬಿಡಲಿಲ್ಲ" ಎಂದು ಹೇಳಿದರು. ಅಷ್ಟೇ ಅಲ್ಲ. ಮುಂದೆ ನಡೆದ ಕೃತ್ಯಗಳನ್ನೆಲ್ಲ ಕುರಿತು ಯೋಚಿಸಿದರೆ ಪೂರ್ವಸಿದ್ಧತೆಯ ಸಿದ್ಧಾಂತಕ್ಕೆ ಕೊಂಚ ಬುಡವಿದೆಯೆಂದೇ ಹೇಳಬೇಕು.

ಮಿ॥ ರಾಲ್ಫ್‌ನೈ—ಸತ್ಯಾಗ್ರಹ ಮಾಡಿದರಲ್ಲ. ಸರಿ. ಇದರಲ್ಲಿ ಯಾರು ಸೋಲಬೇಕು? ಸರ್ಕಾರದವರೋ ಇಲ್ಲ ಜನರೋ?

ಉ—ಅದೆಲ್ಲ ಸ್ಥಿತಿಗತಿಗಳ ಮೇಲಿದೆ. ಕೆಲವು ಸಾರೆ ಪ್ರತಿಷ್ಠೆ, ಬಿಂಕ ಬಿಟ್ಟುಬಿಟ್ಟು ಸರ್ಕಾರದವರೂ ಸೋಲಬೇಕು. ಕೆಲವು ಸಲ ಜನರೂ ಸೋಲಬೇಕು. ಕೆಲವು ಸಾರೆ ಇಬ್ಬರೂ ಕೊಂಚಕೊಂಚ ಸೋಲಿಗೆ ಸಿದ್ಧರಾಗಿರಬೇಕು. ಹೀಗೇ ಎಂದು ಹೇಳಲಿಕ್ಕಾಗದು. ಬರ್ಮೋಲಿ ಸತ್ಯಾಗಹ ವಿಚಾರ ನೋಡಿ. ಮುಂಬಯಿ ಸರ್ಕಾರದವರೇ ಸೋಲಬೇಕಾಗಿಬಂತಲ್ಲ.

ಶ್ರೀ ನಾಗಪ್ಪನವರ ಮುಖ್ಯಪ್ರಶ್ನೆಗಳು :—

ಪ್ರ—ಪ್ರ. ಪ್ರ. ಸಭೆಯಲ್ಲಿ 'ವಾಕ್‌ಔಟ್' ಆಯಿತಲ್ಲ. ಆಗಿನಿಂದ ಪತ್ರಿಕೆಗಳೆಲ್ಲ ದಿವಾನರನ್ನು ಸಿಕ್ಕಾಪಟ್ಟೆ ಬಯ್ಯುತ್ತಿಲ್ಲವೂ?

ಉ—ಇಲ್ಲ. ಸಭೆಯ ಅಧ್ಯಕ್ಷರ ಮೇಲೆ ಟೀಕೆಗಳು ನಡೆದಿವೆ. ಹಾಗೆ ಟೀಕೆಮಾಡಲು ಪ್ರಜೆಗಳಿಗೂ, ಪತ್ರಿಕೆಗಳಿಗೂ ಹಕ್ಕುಂಟು.

ಪ್ರ—'ಪಿತೂರಿ' ವಿಚಾರ ನಿಮಗೇನಾದರೂ ಗೊತ್ತೊ?

ಉ—ಯಾರೋ ಒಬ್ಬ ಸದ್ಗೃಹಸ್ಥರು ಆಗಸ್ಟು ಮೂರನೆಯ ತಾರೀಖಿನ ದಿನ ದಿವಾನರ ಕೋಣೆಯಲ್ಲಿ ಆ ಪಿತೂರಿಯನ್ನು ಕಂಡುಹಿಡಿದರಂತೆ!

ಪ್ರ—ಪರದೇಶ ಪತ್ರಿಕೆಗಳಿಗೆ ತಂತೀ ಸಮಾಚಾರಗಳು ಹೋಗಿರುವುದು ತಮಗೆಗೊತ್ತುಂಟೊ?

ಉ—ಒಂದು ಮಾತ್ರ ನನಗೆ ಗೊತ್ತುಂಟು. ಅದು ದಿವಾನಾಫೀಸಿನಿಂದ ಹೋಯಿತು.

ಶ್ರೀ ಕಲಾಮಿಯವರ ಮುಖ್ಯ ಪ್ರಶ್ನೆಗಳು:—

ಪ್ರ—೮ನೇ ತಾರೀಖಿನ ದಿನವೇ ನಿಮ್ಮ ಪತ್ರಿಕೆಯಲ್ಲಿ ಮಹಮ್ಮದೀಯ ಪಂಗಡವನ್ನು ಎಳೆದು ಭವಿಷ್ಯಹೇಳಲಿಕ್ಕೇನುಕಾರಣ?

ಉ—ಜನರ ಚಿತ್ತವೃತ್ತಿಯನ್ನು ಗತಿಯನ್ನು ನಾನು ನೋಡುತ್ತಿದ್ದೇನೆ. ಸರ್ಕಾರದವರು ಕಾಲು ನೀಡಿಕೊಂಡು ಕೂತಿದ್ದರು. ಆದ್ದರಿಂದ ಎಲ್ಲರಿಗೂ ಎಚ್ಚರಿಕೆಕೊಟ್ಟೆ.

ಪ್ರ—ಹಾಗೆ ಬರೆದು ಹಿಂದೂಮಹಮ್ಮದೀಯರಿಗೆ ಜಗಳ ಹುಟ್ಟಿಸಿದವರು ನೀವೇ ಅಲ್ಲವೊ?

ಉ—ಹಾಗೆ ಆಪಾದನೆ ಹೊರಿಸುವುದು ತಮಗೆ ಧರ್ಮವಲ್ಲ.

ಪ್ರ—ಉತ್ತರದೇಶದಲ್ಲೆಲ್ಲ ಹಿಂದೂಗಳು ಮುಸಲ್ಮಾನರನ್ನು ಮಟ್ಟಹಾಕಿ ಅದುಮುತ್ತಿದಾರಲ್ಲವೊ?

ಉ—ಮುಸಲ್ಮಾನರು ತಮ್ಮ ಹಕ್ಕುಬಾಧ್ಯತೆಗಳ ಸಂರಕ್ಷಣೆಯನ್ನು ಮಾಡಿಕೊಳ್ಳಬಲ್ಲರು.

ಪ್ರ—ಒಂದುವೇಳೆ ಆಶಾಲೆಗೆ ೧೨೦-೧೫೦ ಮುಸಲ್ಮಾನ ಹುಡುಗರು ಸೇರಿದರೆ ಅವರಿಗೆ ಪೂಜೆಗೆ ಅನುಕೂಲಮಾಡಿಕೊಡಬೇಕು. ಈಸಾಯಿಗಳು ಬಂದರೆ ಅವರಿಗೂ ಅನುಕೂಲವಾಗಬೇಕು. ಹೀಗೆಲ್ಲ ಶಾಲೆಗಳಲ್ಲಿ ಕೋಮುವಾರು ದೇವರ ಗುಡಿಗಳನ್ನು ಕಟ್ಟುವುದು ಸರಿಯೋ?

ಉ—ಕ್ಷಮಿಸಬೇಕು. ನಾನು ಕೊಂಚ ಸವಿಕನಸು ಕಾಣುವವ! ಪಕ್ಕಪಕ್ಕದಲ್ಲೇ ಗುಡಿ, ಮಸೀದಿ, ಚರ್ಚುಗಳನ್ನು ಒಂದಿಲ್ಲೊಂದುದಿನ ನೋಡಬಯಸುತ್ತೇನೆ.

ಪ್ರ—ಪತ್ರಿಕೆಗಳೆಲ್ಲ ಮುಸಲ್ಮಾನರನ್ನು ರೇಗಿಸುವ, ಉದ್ರೇಕಗೊಳಿಸುವ, ಅಸಹ್ಯ ಪಡಿಸುವಂತಹ ಲೇಖನಗಳನ್ನು ಬರೆಯುತ್ತಿರುವುದೇ ಇದಕ್ಕೆಲ್ಲ ಕಾರಣವಲ್ಲವೊ?

ಉ—ಎಂದಿಗೂ ಅಲ್ಲ. ಗಲಾಟೆಗೆಲ್ಲ ಕಾರಣಗಳು ಬೇರೆ. ದಿವಾನರು, ಖಾನರೂ ಇದಕ್ಕೆ ಕಾರಣವೆಂದು ಲೋಕವಾರ್ತೆ. ಈ ಸಂಶಯ ನಿವೃತ್ತಿ ಮಾಡದೇ ಹೋದದ್ದು ಮುಖ್ಯಕಾರಣ.

ಶ್ರೀ ಬಸಪ್ಪ—ಇತರ ಪತ್ರಿಕಾ ಕರ್ತರ ವಿಚಾರ ಹೇಗೆ?

ಉ—ಈ ಪ್ರಶ್ನೆ ಕೇಳುವುದೂ ಸರಿಯಲ್ಲ. ನಾನು ಉತ್ತರ ಹೇಳುವುದೂ ಸರಿಯಲ್ಲ.

ಶ್ರೀ ಮೊದಲಿಯಾರ್—ನಿಮ್ಮ ಪತ್ರಿಕೆಗೆ ಯಾರಾದರೂ ದುಡ್ಡು ಕೊಡುತ್ತಾರೊ?

ಉ—ನಾನಿನ್ನೂ ನನ್ನ ಭಿಕ್ಷಾ ಪಾತ್ರವನ್ನು ಹೊರಕ್ಕೆ ಕಳಿಸಿಲ್ಲ.

ಮೊದಲಿ—ಹೇಳಿ ಬಿಡಿ. ಈ ಗಲಾಟೆಗೆಲ್ಲ ಏನು ಕಾರಣ?

ಉ—ಸರ್ಕಾರದವರ ಉದಾಸೀನತೆ; ಪತ್ರಿಕೆಗಳಿಗೆ ಬಿದ್ದ ಬಾಯಿ ಬೀಗ; ೩೦ನೇ ರಾತ್ರಿ ಅಧಿಕಾರಿಗಳು ಯಾರನ್ನೂ ದಸ್ತಗಿರಿ ಮಾಡದೆ ಹೋದದ್ದು; ಗುಂಡು ಹಾರಿಸಿದ ಮನೆಗಳನ್ನು ಝಡತಿ ಮಾಡದೆ ಹೋದದ್ದು; ಎಂಟು ದಿನದ ಮೇಲೆ ಮಹಜರು ಮಾಡಿದ್ದು, ಬ್ರಾಹ್ಮಣ ಪಿತೂರಿಯನ್ನು ಕಂಡು ಹಿಡಿದದ್ದು ಇತ್ಯಾದಿ

ಅಧ್ಯಕ್ಷರು—ಇದೆಲ್ಲ ಸರಿಹೋಗಬೇಕಾದರೆ ಏನು ಮಾಡಬೇಕು ಹೇಳಿ.

ಉ—ದೊಡ್ಡವರು, ಸಣ್ಣವರೆಂದು ನೋಡದೆ ತಪ್ಪುಮಾಡಿದವರನ್ನೆಲ್ಲ ಶಿಕ್ಷೆಗೆ ಗುರಿ ಮಾಡಬೇಕು. ಶಿಕ್ಷಣ ಶಾಖಾಧಿಕಾರಿಗಳ ಆಜ್ಞೆಗೆ ದಿವಾನರೂ, ಖಾನರೂ ಕಾರಣ ಕರ್ತರೆ ಅಲ್ಲವೆ ಎಂಬುದನ್ನು ನಿಶ್ಚಯ ಮಾಡಿ ಬಿಡಬೇಕು. ೩೦ನೇ ತಾರೀಖಿನ ರಾತ್ರಿ ಯಾರನ್ನೂ ದಸ್ತಗಿರಿ ಮಾಡದಿರಲು, ಮನೆಗಳ ಝಡ್ತಿ ಮಾಡದಿರಲು, ೮ ದಿನ ಮಹಜರು ನಡೆಸದಿರಲು ಯಾರು ಕಾರಣ? ಇದು ಯಾರ ಕೈವಾಡವೆಂಬುದು ಸಿದ್ಧಾಂತವಾಗಬೇಕು. ಆಗ ಎಲ್ಲ ಸರಿ ಹೋಗುತ್ತೆ.

ಮೇಜರ್ ಕೃಷ್ಣೇ ಅರಸ್

(ಮೈಸೂರು ಸವಾರ ಪಡೆ)

ಶ್ರೀಮನ್ಮಹಾರಾಜರವರ ಸಮೀಪ ಬಂಧುಗಳಾದ ಮೇಜರ್ ಕೃಷ್ಣೇ ಅರಸುನವರು

"ನನ್ನ ಕೈಯ್ಯಲ್ಲಿದ್ದಿದ್ದರೆ ತಕ್ಷಣದಲ್ಲಿ ಎಲ್ಲರನ್ನೂ ದಸ್ತಗಿರಿ ಮಾಡಿಬಿಡುತ್ತಿದ್ದೆ

ನನಗೆ ಐರೋಪ್ಯ ಯುದ್ಧದ ಅನುಭವವಿದೆ. ೩೦ನೇ ತಾರೀಖಿನ ದಿನ ಆದ ಗಲಾಟೆಗಳಲ್ಲಿ ಸವಾರರೊಂದಿಗೆ ನಾನು ಇದ್ದೆ. ದಿವಾನರ ಬಂಗಲೆ ಬಳಿ ಸು. ೧೫೦ ಸವಾರರಿದ್ದರು. ಅಶೋರಾಕಚೇರಿ ಬಳಿ ಸು. ೨೦೦ ಸವಾರರಿದ್ದರು. ನಾನು ಕಣ್ಣಾರ ಕಂಡಹಾಗೆ ಸವಾರರು ಈಟಿಗಳಿಂದ ಹುಡುಗರನ್ನು ತಿವಿಯಲಿಲ್ಲ. ಕುದುರೆಗಳು ಹೊಸವಾದ್ದರಿಂದ ಅವುಗಳನ್ನು ಹದ್ದಿನಲ್ಲಿಡುವುದು ಕಷ್ಟವಾಗಿತ್ತು. ಸಾಯಂಕಾಲ ಸು. ೭॥-೮ ಕ್ಕೆ ಸುಲ್ತಾನ್‌ಪೇಟೆ ಶಾಲೆಯ ಕಡೆ ಬಂದೆ. ಆಗ ಸು. ೩೦-೩೫ ಸವಾರರಿರಬಹುದು. ನಾನು ಅಲ್ಲಿಗೆ ಬಂದಾಗ ಮಾರಾಮಾರಿ ಮುಗಿದಿತ್ತು. ಮುಸಲ್ಮಾನರು ಡೊಣ್ಣೆಗಳನ್ನು ಹಿಡಿದು ಓಡಾಡುತ್ತಿದ್ದರು. ಹಿಂದುಗಳನ್ನು ಹೊಡೆಯುತ್ತಿದ್ದರು ಖಾನರ ಮನೆ ಕಾಂಪೌಂಡಿನಲ್ಲೂ ೧೨೦-೧೫೦ ಮುಸಲ್ಮಾನರು ದೊಣ್ಣೆಹಿಡಿದು ನಿಂತಿದ್ದರು. ಖಾನರ ಮನೆಯೊಳಕ್ಕೆ ಫೋನುಮಾಡಲು ಹೋದೆ. ಆಲ್ಲೂ ೪೦ರಿಂದ ೫೦ ಮಂದಿ ಮುಸಲ್ಮಾನರು ಕೂತಿದ್ದರು. ಖಾನರನ್ನು ನೋಡಿದೆ. ಅವರ ಸೇವಕನಿಗೆ ಕಲ್ಲಿನೇಟು ಬಿದ್ದಿತು. ಅಲ್ಲಿ ಏಟು ಬಿದ್ದ ಒಬ್ಬ ಬ್ರಾಹ್ಮಣನೊಬ್ಬನನ್ನು ಆಸ್ಪತ್ರೆಗೆ ಸಾಗಿಸಿದರು. ಖಾನರ ಮನೆಯಿಂದ ಗುಂಡುಗಳು ಹಾರಿತೆಂದು ಕೇಳಿದೆ. ಜನರು ೪-೫ ಹುಡುಗರನ್ನು ಖಾನರ ಮನೆಯೊಳಕ್ಕೆ ಎಳೆದುಕೊಂಡು ಹೋದರು. ತುಂಟರನ್ನು ದಸ್ತಗಿರಿಮಾಡಿ, ಆ ಮನೆಗಳನ್ನು ಹುಡುಕಿ" ಎಂದು ಬೊಬ್ಬೆಹಾಕುತ್ತಿದ್ದರು. ಕೇಳುವವರೇ ಇಲ್ಲ. ನಾನಲ್ಲಿ ಹೋದಾಗ ಪೋಲೀಸಿನವನೊಬ್ಬನಾದರೂ ಇರಲಿಲ್ಲ. ಆಮೇಲೆ ಸು.೩೦ ರಿಸರ್ವಿನವರು ಬಂದರು. ಕೆಲವು ಹುಡುಗರು ಭಯದಿಂದ ಶಾಲೆಯ ಕೋಣೆಗಳಲ್ಲಿ ಅವಿತುಕೊಂಡಿದ್ದರು. ಅವರನ್ನೆಲ್ಲ ಬಿಡಿಸಿದೆ.

ಪ್ರ—ಆಗ ಸುಲಭವಾಗಿ ಸಿವಿಲ್ ಅಧಿಕಾರಿಗಳು, ತುಂಟರನ್ನು ದಸ್ತಗಿರಿಮಾಡಬಹುದಾಗಿತ್ತೊ?

ಉ—ಸುಲಭವಾಗಿ ಮಾಡಬಹುದಾಗಿತ್ತು. ನನಗಾ ಅಧಿಕಾರವಿದ್ದಿದ್ದರೆ ಬಹು ಸುಲಭವಾಗಿ ಎಲ್ಲರನ್ನೂ ದಸ್ತಗಿರಿಗಿ ಮಾಡಿಬಿಡುತ್ತಿದ್ದೆ.

ಆರ್ಯ ವೈದ್ಯಶಾಲಾ

ನಂ. ೬೫, ಬಳೇಪೇಟೆ, ಬೆಂಗಳೂರು ಸಿಟಿ.

ಶಸ್ತ್ರಚಿಕಿತ್ಸೆ ಇಲ್ಲದೆ ಅನಾಯಾಸವಾಗಿ ಮೂಲ್ಯವಾಧಿಗೆ ಪರಿಹಾರ—**"ಸಾದಿಷ್ಟ ವಿರೇಚನ ಚೂರ್ಣ"** ಮೂಲವ್ಯಾಧಿಗೆ ಸಿದ್ಧೌಷಧಿಯು. ಮಲಬದ್ಧ ಆಸನ ಇಳೀಬೀಳುವುದು, ಆಸನದ ಬಿರುಕು ರಕ್ತ ಮೂಲ ಕೀವುಮೂಲ ಮತ್ತು ಆಸನದ ನವೆಯನ್ನು ಹೊಗಲಾಡಿಸುವುದು. ಸುಖವಾಗಿ ಮಲವಿಸರ್ಜನೆ ಮಾಡಿಸುವುದು. ಹಸವೆಯನ್ನೂ ಬಾಯಿಗೆ ರುಚಿಯನ್ನೂ ಕೊಡುವುದು. ಬೆಲೆ ಆಣೆ ೦-೮-೦

ಅಶ್ವಗಂಧಾದಿ ಚೂರ್ಣ—ಧಾತುನಷ್ಟಕ್ಕೆ ನರಗಳ ನಿಶ್ಶಕ್ತಿಗೆ ಸಿದ್ಧೌಷಧ. ಧಾತುಗಳನ್ನು ವೃದ್ಧಿಪಡಿಸಿ ಕಾಂತಿ, ಬಲ, ಮತ್ತು ತೇಜಸ್ಸನ್ನು ಕೊಡುವುದು. ಬೆಲೆ ೦-೮-೦

ಜೈವನಪಾಶ—ಕೆಮ್ಮು, ಉಬ್ಬಸ, ಕ್ಷಯ ಹೃದಯರೋಗಗಳನ್ನು ಪರಿಹರಿಸುವುದು. ಬಲ, ಕಾಂತಿ, ಪುಷ್ಟಿ, ತುಷ್ಟಿ, ವರ್ಣ, ಸ್ಮೃತಿ ಮೇಧೆ, ಮನಃಪ್ರಸನ್ನತೆಗಳನ್ನು ಕೊಡುವುದು.

ಬೆಲೆ ೩—೦—೦, ೧—೦—೦.

ಬಾಲಾರ್ಕ ಮಧು

Balarka Madhu.

ಇದನ್ನು ಕೊಡೋಣದ್ದರಿಂದ ಮಕ್ಕಳು ರೋಗರಹಿತರಾಗಿ ಆರೋಗ್ಯವನ್ನು ಪಡೆಯುವರು. ಅಸ್ತಿಜ್ವರ, ಅತಿಸಾರ (ಕೋವೆರೋಗ) ಇವೇ ಮೊದಲಾದ ರೋಗಗಳ ಗುಣವಾಗಿ ಆಹಾರವು ಜೀರ್ಣಿಸಿ ಶರೀರದಲ್ಲಿ ಪೌಷ್ಟಿಕ ರಸಗಳುಂಟಾಗಿ ಎಲುಬುಗಳ ಮಧ್ಯೆ ಮಾಂಸ ಬೆಳೆದು ಕ್ಷೀಣಿಸಿದ ಶರೀರವು ಪುಷ್ಟಿಯಾಗುವುದು. ಮಧುರವಾಗಿದೆ ಮಕ್ಕಳು ಉತ್ಸಾಹದಿಂದ ಸೇವಿಸುತ್ತಾರೆ.

ಸೀಸೆ ೧ಕ್ಕೆ ೦—೧೨—೦ ಪೆ. ಖ. ಬೇರೆ

ಎಂ ವಿ ಪ್ರಾಸಾದಿಕ ಔಷಧಾಲಯ,
ಶಿವಮೊಗ್ಗಾ

ಮೊದಲು
ಪ್ರಾಣ ಉಳಿಸಿಕೊಳ್ಳಿ!

"ಗಾಳಿ ಪಿಸ್ತೂಲು"

ಕಳ್ಳಕಾಕರ ಭಯವಿಲ್ಲ;
ಕಪುರಮೃಗಗಳ ಭಯವಿಲ್ಲ.

ಲೈಸೆನ್ಸು ಬೇಕಾಗಿಲ್ಲ

ಬೆಲೆ ರೂ ೪ — ೪೦ ರವೆಯುಳ್ಳದ್ದು
ವಿ. ಪಿ. ವೆಚ್ಚ ೦—೬—೦
೪೦ ರವೆಗೆ (ಹೆಚ್ಚಾಗಿ ಬೇಕಾದರೆ) ರೂ ೧

The Novelty Stores (102)
Bhuleswar, Bombay.

ರೋಗಗಳನ್ನನುಭವಿಸುವವರಿಗೆ ಸಂಜೀವನವಾದ
ಅಮೃತಾಂಜನ

ವು ಕೆಳಗೆನಮೂದಿರುವ ವ್ಯಾಧಿಗಳನ್ನೆಲ್ಲಾ ನಿರ್ಮೂಲ ಮಾಡುವದ
ತಲೇನೋವು, ಕೆಮ್ಮು, ವಾಯುನೋವು, ಹಲ್ಲುಬೇನೆ
ಕೀಲುನೋವು, ಊದುಏಕೆ, ಕೀಲಸುಡಿಲ, ನೀತವಗೈರು
ಒಂದುಸಲ ಉಪಯೋಗಿಸಿದರಲ್ಲವೆ ಗುಣ ಗೊತ್ತಾಗುವದು
ಬೆಲೆ ಡಬ್ಬಿ ೧ ಕ್ಕೆ ೧೦ ಆಣೆಗಳು
ಎಲ್ಲಾ ವ್ಯಾಪರಗಾರಲ್ಲಿಯೂ ಸಿಗುವದು

ಬೊಂಬಾಯಿ ಅಮೃತಾಂಜನಡಿಪೋ ಮದರಾಸು

ಶ್ರೀ ದಾಸಸೇವಾಕಾರ್ಯಕ್ಕೆ ಸಹಕರಿಸಿ ಪುಣ್ಯಭಾಗಿಗಳಾಗಿ, ಸುಸಮಯ !

('ಕೀರ್ತನ ತರಂಗಿಣಿ'ಯ ದ್ವಿತೀಯ ವರ್ಷಾರಂಭವಾಗಿದೆ.)

'ಶ್ರೀ ಹರಿದಾಸ ಸೇವಾಸಮಿತಿ'ಯವರಿಂದ ಬಹಳ ಶುದ್ಧ ರೀತಿಯಲ್ಲಿ
ಪರಿಶೋಧಿಸಲ್ಪಟ್ಟು ಮಾಸಸಂಚಿಕಾ ರೂಪದಲ್ಲಿ ಪ್ರಕಟವಾಗುತ್ತಲಿರುವ

ಶ್ರೀ ಕರ್ಣಾಟಕ ಹರಿದಾಸಕೀರ್ತನ ತರಂಗಿಣಿ

ತಾವು ನೋಡಿರುವಿರಾ? ಇಲ್ಲವಾದರೆ, ಇಂದೇ ಚಂದಾದಾರರಾಗಿರಿ! ಇದರಲ್ಲಿ ಜಗದ್ವಂದ್ಯರಾದ ಶ್ರೀ ಪುರಂದರದಾಸರು ಕನಕದಾಸರೇ ಮೊದಲಾದ ಹರಿದಾಸರುಗಳು ಲೋಕೋಪಕಾರಾರ್ಥವಾಗಿ ನುಡಿದ ದಿವ್ಯ ಭಗವನ್ನಾಮಕೀರ್ತನೆಗಳು ಪ್ರತಿತಿಂಗಳಲ್ಲಿಯೂ ಕ್ರೌನ್‌ಅಷ್ಟಪತ್ರದ ನಾಲ್ವತ್ತು ಪುಟಗಳ ಪುಸ್ತಕರೂಪದಲ್ಲಿ ಪ್ರಕಟವಾಗುತ್ತಲಿದೆ. ಆಸ್ತಿಕ ಮಹಾಶಯರು ಸಂಗ್ರಹಿಸಲು ಸುಸಮಯ. ಸರ್ವರಿಂದಲೂ ಸಂಗ್ರಹಿಸಲ್ಪಡಲು ಅನುಕೂಲಿಸುವಂತೆ ಚಂದಾ ದರವನ್ನು ಬಹಳ ಕಡಿಮೆಯಾಗಿಟ್ಟಿದೆ.

ವಾರ್ಷಿಕ ಚಂದಾ. (ಅಂಚೆ ಸಾಸಲು ಉಚಿತ).

ಸಾಮಾನ್ಯ ಪ್ರತಿ ರೂ. ೧-೮-೦ ಉತ್ತಮ ಪ್ರತಿ ರೂ. ೨-೪-೦

ಪ್ರಥಮ ಸಂಪುಟದ ಬೈಂಡಾದ ಪ್ರತಿಗಳು

	ಸಾದಾ ಬೈಂಡು	ದಪ್ಪರಟ್ಟಿನ ಬೈಂಡು	ಕಿತ್ತಾನಾರು.
ಸಾಮಾನ್ಯ ಪ್ರತಿ.	೧-೮-೦	೧-೧೨-೦	೨-೪-೦
ಉತ್ತಮ ,,	೨-೪-೦	೨-೮-೦	೩-೦-೦

ಅಂಚೆ ಹಾಸಲು ಪ್ರತ್ಯೇಕ

ವಿಳಾಸ:—ಸುಬೋಧ ಪ್ರಕಟನಾಲಯ—ನ್ಯೂ ಮಾರ್ಕೆಟ್, ಬೆಂಗಳೂರುನಗರ

ಕಾರ್ಯಜಯಪ್ರದ ಮಲಯಾಳಯಂತ್ರ

ಧರಿಸಿದರೆ ಸಂತಾನಹೀನರು ಮಕ್ಕಳನ್ನ ಪಡೆಯುತ್ತಾರೆ, ಕೈ ಹಿಡಿದ ಕೆಲಸವು ಸಿದ್ಧಿಸುತ್ತದೆ. ವ್ಯಾಪಾರದಲ್ಲಿ ಲಾಭ ಉಂಟಾಗುತ್ತದೆ ಇಷ್ಟೇ ಅಲ್ಲದೆ ಭಯ, ಭೀತಿ, ಕೆಟ್ಟಸ್ವಪ್ನ, ಮೈಲಿ ನೆರಳು ಎಲ್ಲ ಪರಿಹಾವಾಗುತ್ತದೆ.

ಸ್ವಳದವರಿಗೆ ೨ ರೂ. ಪರಸ್ವಳದವರಿಗೆ ವಿ. ಪಿ. ೩ ರೂ.

ಪಂಡಿತ ಟಿ. ರಾಮಾಶಾಸ್ತ್ರೀ ವಿಶ್ವಕರ್ಣಾಟಕ ಬೆಂಗಳೂರು ಸಿಟಿ

ಉಚಿತ ಉಚಿತ!!

ಈ ಅಮೂಲ್ಯವಾದ ಸಮಯ ಕೊಂಚ ಕಾಲವೆ!

ಚೆನ್ನದ ಕೈ ಗಡಿಯಾರಗಳ ಬಹುಮಾನ



ಈ ಹತ್ತು ಮಾದರಿಗಳಲ್ಲಿ ಯಾವುದು ಬೇಕಾದರೂ
ರೇಶ್ಮೆ ಅಥವಾ ತೊಗಲು ಪಟ್ಟಿಯೊಂದಿಗೆ ರೂ. ೫—೧೫—೦
೪ ವರ್ಷಗಳ ಗ್ಯಾರಂಟಿ. ವಿ. ಪಿ. ವೆಚ್ಚ ಅ. ೦—೬—೦
೩ ಗಡಿಯಾರ ತರಿಸಿಕ್ಕೊಂಡರೆ ರೂ. ೧೫; (ಅಂಚೆ ವೆಚ್ಚ ಬೇರೆ)
೬ ಗಡಿಯಾರ ತರಿಸಿಕ್ಕೊಂಡರೆ ರೂ ೩೦ (,,)
ಆರ್ಡರಿನೊಂದಿಗೆ ೧ರಿಂದ ೧೦ರ ವರೆಗೆ ಯಾವದಾದರೂ ಒಂದು ಅಂಕೆಯನ್ನು ಬರೆದರೆ ಗಡಿಯಾರನೊಂದಿಗೆ ಆ ಅಂಕೆಗೆ ಇಟ್ಟಿರುವ ಬಹುಮಾನವನ್ನು ಕಳುಹಿಸುವೆವು ಪ್ರತಿಯೊಂದು ಅಂಕೆಗೂ ಒಂದೊಂದು ಬಹುಮಾನವಿದ್ದೇ ಇದೆ.

ಪತ್ರವ್ಯವಹಾರವೆಲ್ಲ ಇಂಗ್ಲೀಷಿನಲ್ಲೇ

THE DILAWAR WATCH COY (34)
Bhuleswar, Bombay.

ಮುಂಬಯಿಯಂಥ ಗಡಬಿಡಿಯ ವ್ಯಾಪಾರಿ ಪಟ್ಟಣದಲ್ಲಿ ಮೋಸಗಾರಿಕೆಯು ಬಹಳ ! ಆದ್ದರಿಂದ
ಸುಪ್ರಸಿದ್ಧ ಜವಳೀ ವ್ಯಾಪಾರಿಗಳು

ಆಠವಲೆ ಶಾಹಡೆ ಮತ್ತು ಕಂಪನಿ

ಸಿನಿಮಾ ಮೆಜೆಸ್ಟಿಕ್ ಎದುರಿಗೆ—ಗಿರಗಾಂವ—ಮುಂಬಯಿ

ಇವರಲ್ಲಿ ಒಪ್ಪಿ. ಅಂದರೆ ಸ್ತ್ರೀಯರಿಗೆ, ಪುರುಷರಿಗೆ ಮತ್ತು ಮಕ್ಕಳಿಗೋಸ್ಕರ ಬೇಕಾದ ಬೆಲೆಯುಳ್ಳ ಹಾಗೂ ಅಗ್ಗವಾದ ನೂಲಿನ, ರೇಶಿಮೆಯ, ಜರಿಯ, ಮುಂತಾದ ಎಲ್ಲಾ ತರದ ಜವಳಿಸರಕುಗಳು ಒಂದೆಡೆಯಲ್ಲಿಯೇ ಖಾತ್ರಿದಾಯಕವಾಗಿ ಯೋಗ್ಯಬೆಲೆಗೆ ದೊರೆಯುವುವು.

ಪರಸ್ವಳದ ಗಿರಾಕಿಗಳು ಬೇಡಿಕೆಯಕೂಡ $\frac{1}{4}$ ಹಣವನ್ನು ಮುಂಗಡವಾಗಿ ಕಳುಹಿಸಬೇಕು.

ಸಿದ್ಧಕಲ್ಪಮಕರಧ್ವಜ

ಸಿದ್ಧಕಲ್ಪಮಕರಧ್ವಜ

ಸಿದ್ಧಕಲ್ಪಮಕರಧ್ವಜ

ಮಾನವ ಶರೀರದ ಸಮಸ್ತ ವ್ಯಾಧಿಗೂ ಒಂದೇ ಔಷಧ.

ಒಂದು ಅಂಗಕ್ಕೊಳಗಾದ ಎಂತಹ ಹಳೆಯ ವ್ಯಾಧಿಯಾದರೂ ಮಾಯವಾಗುವುದು

ತಯಾರಿಸುವವರು :

ಮದರಾಸ್ ಆಯುರ್ವೇದಿ ಫಾರ್ಮಸಿ
(ಲಿಮಿಟೆಡ್)
ಮದರಾಸು.

ಮೈಸೂರು ಸಂಸ್ಥಾನದ ವಿಜಂಟರು

ಭಾರದ್ವಾಜ್ ಬ್ರದರ್ಸ್
ಬಳೇಪೇಟೆ, ಬೆಂಗಳೂರು ಸಿಟಿ

ಅಖಿಲಭಾರತ
ಸಕಲಕಲಾ ವಸ್ತುಪ್ರದರ್ಶನದಲ್ಲಿ
ರಜತ ಪದಕವನ್ನು ಪಡೆದ
ಸ್ಟ್ಯಾಂಡರ್ಡ್ ಕಾಫಿಪುಡಿ

ಎಲೆಕ್ಟ್ರಿಕ್ ಮಿಷ್ಣಗಳಲ್ಲಿ ತಯಾರಾಗುತ್ತದೆ. ಅತಿ ಮನೋಹರವೂ ರುಚಿಕರವೂ ಆದದ್ದು. ಪರೀಕ್ಷಿಸಿ ನೋಡಿರಿ.

ಹೆಚ್. ಭೀಮರಾವ್,
ದಿ ಸ್ಟ್ಯಾಂಡರ್ಡ್ ಕಾಫಿ ಕಂಪೆನಿ,
ಚಿಕ್ಕಪೇಟೆ, — — ಬೆಂಗಳೂರು ಸಿಟಿ.

ದಿ ರಿಲೈಯನ್ಸ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್, ಬೆಂಗಳೂರು.

ಸಮಾಜದ ಸಂಪತ್ತಿನ ಕುಂದುಗಳ ನಿವಾರಣೆಗೆ ಸುಲಭಸಾಧಕವಾದ ಈ ಜೀವವಿಮೆಯ ಕಂಪೆನಿಯು ಇದೇ ಕರ್ನಾಟಕದ ಅರ್ಥಸಾಧಕದ ಏಕೀಕರಣಕ್ಕೆ ಮಾರ್ಗವಾಗಿ ಕರ್ನಾಟಕ ಪ್ರಾಂತ್ಯದಲ್ಲೇ ಕರ್ನಾಟಕಸ್ಥರಿಂದಲೇ ವ್ಯವಹರಿಸಲ್ಪಡುತ್ತದೆ. ಪ್ರೀಮಿಯಂ ದರವು ಕಮ್ಮಿ, ಆಡಳಿತದ ಖರ್ಚು ಬಹು ಮಿತ. ಈಗಿನ ಭಾರತಜವಾಂಗದ ಅವಶ್ಯಕತೆಗಳಿಗನುಕೂಲಿಸಿರುವ ಷರತ್ತುಗಳು. ವಿಮೇದಾರರು ತಮ್ಮ ಪರವಾಗಿ ಕಾರ್ಯನಿರ್ವಾಹಕಮಂಡಳಿಗೆ ಒಬ್ಬ ಸದಸ್ಯರನ್ನೂ ಮತ್ತು ಲೆಕ್ಕಶೋಧನೆ ಮಾಡಲು ಒಬ್ಬ ಆಡಿಟರನ್ನೂ ಚುನಾಯಿಸುವ ಹಕ್ಕಿರುತ್ತದೆ.

ದಿ ರಿಲೈಯನ್ಸ್ ಅಷ್ಯೂರೆನ್ಸ್ ಕಂಪೆನಿಯ ಮ್ಯಾನೇಜಿಂಗ್ ಏಜಂಟರವರಿಗೆ :—

ಗತಿಸಿದ ನಮ್ಮ ಯಜಮಾನರು ನಡಹಳ್ಳಿ ಈರೇಗೌಡರ ಮಕ್ಕಳು ಬಸವೇಗೌಡರು ನಿಮ್ಮ ಕಂಪೆನಿಯಲ್ಲಿ ವಿಮೇಮಾಡಿದ ಪಾಲಸಿ ನಂ. ಲಟರ ಬಾಬ್ತು ರೂ. ೯೪೮-೧೦-೦೦ ಕ್ಕೆ ಮೈಸೂರ್ ಬ್ಯಾಂಕು ಚಕ್ಕು ನಂ. A ೪೪೫೯೭೬೬ ಸಂದಾಯವಾಗಿರುತ್ತೆ. ಈ ಪಾಲಸಿ ಬಾಬ್ತು ಪ್ರೀಮಿಯಂ ರೂ. ೧೫೬-೧೪-೧ ಮಾತ್ರ ಸಂದಾಯವಾಗಿತ್ತು. ನಿಮಗೆ ಬೇಕಾಗುವ ಎಲ್ಲಾ ಫಾರಂಗಳನ್ನು ಹಾಜರ್ಮಾಡಿದಕೂಡಲೆ ಮೇಲ್ಕಂಡ ಹಣ ರೂ. ೯೪೮-೧೦-೧೪ನ್ನು ನನಗೆ ಪಾವತಿಮಾಡಿದ ಬಗ್ಗೆ ನಿಮ್ಮ ಕಂಪೆನಿಗೆ ನಾನು ಬಹಳ ಋಣಿಯಾಗಿದ್ದೇನೆ.

ಸಕ್ಕೇಶಪುರ. ನಡಹಳ್ಳಿ ರಾಮಮ್ಮ.

ಪಿಮಟಿ ಬಲಿಪಾ ಅಂಡ್ ಕಂಪೆನಿ, ಮ್ಯಾನೇಜಿಂಗ್ ಏಜಂಟರುಗಳು, 7/95, ಹೊಸತರಗುಪೇಟೆ, ಬೆಂಗಳೂರು ಸಿಟಿ

ಕೇಸರಿಯವರ

ಲೋಕವಿಖ್ಯಾತವಾದ ಲೋಧ್ರದ ಮಹಿಮೆ

ಸ್ತ್ರೀಯರ ಗರ್ಭಾಶಯ ರೋಗಗಳಿಗೆ ವಜ್ರಾಯುಧವು! ಋತುಶೂಲೆ, ಕುಸುಮರೋಗ, ಮೂರ್ಛೆರೋಗ, ಅಸ್ರಸ್ರಾವ, ಬಂಜೆತನ, ಸೋಮರೋಗ, ಚರ್ಮವ್ಯಾಧಿಗಳು, ಅಜೀರ್ಣ, ಕೀಲುನೋವು, ಬಲಹೀನತೆ, ತಲೆನೋವು, ಮಲಬದ್ಧತೆ, ಪಿತ್ತಜ್ವರ, ಶೋಭೆ, ಹೊಟ್ಟೆಯಲ್ಲಿ ಉರಿ, ಆಯಾಸ, ವಾಂತಿ ತಲೆತಿರುಗುವುದು, ದೃಷ್ಟಿಮಾಂದ್ಯ ಮೊದಲಾದವುಗಳೆಲ್ಲವೂ "ಲೋಧ್ರ" ದ ಸೇವನೆಯಿಂದ ನಿಸ್ಸಂದೇಹವಾಗಿ ಗುಣವಾಗುವುವು!! ಸಾವಿರಾರು ಯೋಗ್ಯತಾಪತ್ರಿಕೆಗಳೂ ಸುವರ್ಣಪದಕಗಳೂ ದೊರೆತಿವೆ. ಕೆಲವು ಅಭಿಪ್ರಾಯಗಳು :—

(೧) ಶ್ರೀ. ಯಂ. ಸುಬ್ಬರಾವ್, ರಿಜಿಸ್ಟ್ರೇಷನ್ ಹೆಡ್‌ಕ್ಲಾರ್ಕ್, ಕಾರ್ಕಾನಹಳ್ಳಿ :—ನನ್ನ ಪತ್ನಿಯು ಬಹಿಷ್ಠೆಯಾದ ಕಾಲದಲ್ಲಿ ಮಹಾ ಭಯಂಕರವಾದ ಹೊಟ್ಟೆಶೂಲೆಯಿಂದ ೪—೬ ದಿನಗಳು ಜ್ಞಾನವಿಲ್ಲದೆ ಬಹಳ ತೊಂದರೆಯನ್ನನುಭವಿಸುತ್ತಿದ್ದಳು. ಇದಕ್ಕಾಗಿ ತೆಗೆದುಕೊಂಡ ಅನೇಕ ಘನಪಂಡಿತರುಗಳ ಔಷಧಿಗಳು ಪ್ರಯೋಜನಕಾರಿಯಾಗಲಿಲ್ಲ. ೧೩ ವರುಷಗಳಿಂದ ಈ ಬಾಧೆಯು "ಲೋಧ್ರ" ದ ೨ ಬಾಟ್ಲುಗಳನ್ನು ಉಪಯೋಗಿಸಿದ ಸ್ವಲ್ಪ ದಿನಗಳಲ್ಲೇ ಗರ್ಭಾಶಯ ರೋಗಗಳೆಲ್ಲವೂ ಗುಣವಾದುವಲ್ಲದೆ ಗರ್ಭಿಣಿಯಾಗಿ ಸುಪ್ರಸವವಾಗಿ ಆರೋಗ್ಯವಾಗಿರುವ ವಿಷಯವನ್ನು ತಿಳಿಸಲು ತುಂಬಾ ಸಂತೋಷಪಡುತ್ತೇನೆ. ಗರ್ಭಿಣಿಯಾಗುವ ನಂಬಿಕೆಯೇ ಇರಲಿಲ್ಲ. ಇಂಥಾ ದಿವ್ಯೌಷಧವನ್ನು ಗರ್ಭಾಶಯರೋಗವನ್ನನುಭವಿಸುವವರು ಸೇವಿಸಿದರೆ ಸಂಪೂರ್ಣವಾಗಿ ಗುಣ ಹೊಂದಬಹುದೆಂದು ಧೈರ್ಯವಾಗಿ ಹೇಳುತ್ತೇನೆ.

(೨) ಶ್ರೀಮತಿ ನರಸಿಂಹೈಯ್ಯಂಗಾರ್, ಮೈಸೂರು ಮಿಲ್ಸ್, ಬೆಂಗಳೂರು —ಇಪ್ಪತ್ತು ವರ್ಷದ ಹೊಟ್ಟೆನೋವು ಮತ್ತು ಬಿಳಿ ಬಟ್ಟೆ ಬಾಧೆಯಿಂದ ನಿವಾರಣೆಯಾಗಿ ನನ್ನ ಹೆಂಡತಿಯು ಸುಮಾರು ಇಪ್ಪತ್ತು ವರ್ಷಗಳಿಂದಲೂ ಬಹಿಷ್ಠೆಕಾಲದಲ್ಲಿ ಹೊಟ್ಟೆನೋವಿನಿಂದ ಬಹಳ ತೊಂದರೆ ಪಡುತ್ತಾ ಇದ್ದಳು. ಅಲ್ಲದೆ ಸ್ರಾವವಿಲ್ಲದೆ ಇದ್ದದ್ದು ಈಗ್ಗೆ ಎರಡು ವರ್ಷಗಳ ಕೆಳಗೆ ನನ್ನ ಸ್ನೇಹಿತರಲ್ಲಿ ಒಬ್ಬರು ಈ ಲೋಧ್ರವನ್ನು ಉಪಯೋಗಿಸಿವಂತೆಯೇ ಹೇಳಿದರು. ಇದರಿಂದ ನನಗೆ ನಂಬಿಕೆಯಿಲ್ಲದೆ ಕೊಟ್ಟೆನು. ಎರಡು ಬಾಟ್ಲಿ ಲೋಧ್ರದಿಂದ ಸ್ವಲ್ಪ ಹೊಟ್ಟೆನೋವು ನಿಂತಿತು. ಪುನಃ ಇನ್ನೊಂದು ಬಾಟಿಯಿಂದ ಪೂರ್ಣ ಗುಣಹೊಂದಿ ಗರ್ಭಿಣಿಯಾಗಿ ಸುಪ್ರಸವವನ್ನು ಪಡೆದು ಕಾರ್ತಿಕ್ಷನನ್ನು ಪಡೆದಳು. ನನ್ನ ಅನುಭವದಲ್ಲಿ ಇದಕ್ಕಿಂತ ಉತ್ತಮವಾದ ಔಷಧಿ ಸ್ತ್ರೀಯರಿಗೆ ಇಲ್ಲವೆಂದು ಮನಃಪೂರ್ವಕವಾಗಿ ಹೇಳುತ್ತೇನೆ. ಸ್ತ್ರೀಯರಿಗೆ ಇದು ಅಮೃತವಾಯುವಾಗಿದೆ.

ಬೆಲೆ: ೧೨ ಔನ್ಸಿನ ದೊಡ್ಡ ಶೀಸೆ ೧ಕ್ಕೆ ರೂ. ೩—೦—೦; ೬ ಔನ್ಸಿನ ಚಿಕ್ಕ ಶೀಸೆ ೧ಕ್ಕೆ ೧—೧೦—೦; ಪ್ಯಾಕಿಂಗ್, ಪೋಸ್ಟೇಜ್ ಅಧಿಕವಾ.

ನೂರಾರು ದಿವ್ಯೌಷಧಗಳುಳ್ಳ ನಮ್ಮ ಕ್ಯಾಟಲಾಗಿಗೆ ಬರೆದಲ್ಲಿ ಕಳುಹಿಸುತ್ತೇವೆ.

ಈ ಔಷಧಗಳು ಎಲ್ಲಾ ಔಷಧಾಲಯಗಳಲ್ಲಿಯೂ ದೊರೆಯುತ್ತವೆ.

ವಿಳಾಸ:— **ಕೇಸರೀ ಕುಟೀರಂ-ಆಯುರ್ವೇದ ಔಷಧಶಾಲಾ, ಎಗ್ಮೋರ್, ಮದರಾಸ.**

ಬೆಂಗಳೂರು ಬ್ರಾಂಚ್ :— ೧೪, ಬಳೇಪೇಟೆ, ಬೆಂಗಳೂರು ಸಿಟಿ.

ಬೆಂಗಳೂರು ಸಿಟಿ ಚಾಮರಾಜಪೇಟೆ ಶ್ರೀ ಲಕ್ಷ್ಮೀನರಸಿಂಹ ಮುದ್ರಣಾಲಯದಲ್ಲಿ ಸಂಪಾದಕರವರಿಗಾಗಿ ಮುದ್ರಿಸಿ ಪ್ರಕಟಿಸಲ್ಪಟ್ಟಿದೆ.

Date	Heading.	Subject.
8-7-28	A great favor.	Reports that, when questioned as to the real cause for the removal of a Ganesha idol from the Hindu A.V.School, he did not get any reply from the Chief Secretary, and thinks that such a removal may affect, in course of time, the Hindu-Muslim unity and goodwill now prevailing here.
22-7-28. & 15-7-28	" Three questions to Government."	Questions the Government why they did not reply at all to his letter written 19 days back regarding the fate of Ganesha idol at Sultanpet, Bangalore City
29-7-28.	Ganesha The/Episode. FL:H	States in its leading article, that the Government's indifference with regard to the question of Ganesha at the Sultanpet A.V.School, Bangalore, indicates their unlimited heartlessness, that this would not bring any credit to them. Appeals therefore to His Highness the Maharaja of Mysore to redress the grievances of the people.

	Heading	Subject.
29-7-28	" Notes."	States that sweeping changes have been taking place in Bangalore, such as the removal of religious (pipal) trees, and that there is also the proposed demolition of two Anjaneya temples and of a Muslim mosque in the City.

An Appeal to the Authorities.

" We urge upon the Government the necessity of an immediate open enquiry as the only means of allaying public unrest. "

Publishes a summary of the further proceedings of the Peace Conference on the 20th from its Special Correspondent.

Gives a full account of the happenings in connection with the Ganapathi episode commencing from the 15th June up to the 2nd of August 1928.

Heading	Subject.

restoring peace and not to swerve from the path of truth in that attempt.

Strikes a note of warning in its editorial comments that the institutio: a Committee setting out to introduce bet disciplinary measures among students in future is not the outcome of popular representations. It seems here and the that the students are definitely proved to be responsible for the recent disturb ances at Bangalore and the Madras Mail has even used an indecent language in condemning the action of the students. " These observations tempt us to believe if the Madras Paper has become the guide of the Mysore Administration."

Heading	Subject.

3. The very idea of instituting a Committee to prevent strikes among students is queer.

Concludes that it is the first duty of every responsible person to see that the students, as elsewhere, should be encouraged to be more manly instead

States that it cannot be said that the actions of Government after the events of the 30th July are such as are calculated to help to the maintenance of public peace. It is well known that several people going the public streets were assaulted. It is necessary that the Government, instead of attempting to conceal this fact, should try to put a stop to this state of affairs. It is needless to say that the authorities should look for the safety of the town before the beautification of it. The desecration of temples at Gudibande, Holalkere, and Avani has wounded the feelings of the people. When a reference was made to the Government, it is pleasant to see that they have replied more quickly than heretofore. But we do not agree that the real facts about the above incidents should not be published. Nothing could be gained by concealment. Why impede the further investigation of the cases by such surmises as were given by Government ?

Heading	Subject.

It is understood that the petition presented to His Highness the Maharaja has been referred to the Government and that the latter have been making enquiries about the signatories. The Editor thinks that it is not a fact. But, if it should be a fact, the Government themselves are liable to be called disloyal. It is the right of the people to lay their grievances before the Maharaja. If the Government come between the people and His Highness and seek to punish those that go to His Highness, it will have the effect of being disloyal to the Soverign.

In regard to the Enquiry Committee thinks that it was possible to select a better personnel.

In regard to the magisterial enquiry thinks that the more the time taken the more difficult would it be to catch hold of the culprits.

States that the resignation of Municipal Presidentship by Mr. Abbas Khan has given room for the restoration of popular confidence towards the Government. Thinks

D 832—GPB—1000—12-9-28.

that the present situation could well be avoided if the Govt. had published true communiques in the beginning itself regarding the Disturbances. Avers that the Additional Dist. Magistrate's Court may be closed if it has not yet found enough material for tracing out culprits of the Bangalore Disturbances. With regard to the Visvesvaraya committee states that it has to take the evidence of the Dewan as people suspect that he was responsible for the calling in of the Military and for the dislodgment of Ganesha. Demands that the committee has to examine the I.G.P., the District Magistrate and the Director of Public Instruction; and that it should question as to who is responsible for issuing inaccurate communiques and for sending a telegraph to a London Paper

Publishes an extract from Karmadira which states that the Mysore Govt. might feel now for the encouragement they gave to the 'Deen-dar'.

Name of newspaper, date and page	Subject
	the people of Mysore to disabuse their mi of these mischievous informations. Questions why the Govt. appointed Prob tioners in the Forest Department afresh wi out encouraging men in the service and wit out even advertising the posts. x x Remarks satirically that the Military Sowars lost articles worth about Rs.24 in their 'War' against School-children. x x Reports that all sorts of rumours are ing set afloat in the Public Offices, rega ing the aftermath of Bangalore Disturbance. Publishes in its headlines that the han of the Parvati idol at Basettahalli is brok that the idols of Lakshmanlinga, Choudeshwar and Basavanna are upside down; that the Ida at Hesargatta is damaged; and that there ar 'temple thieves' in the Kolar District. A correspondent puts six questions to th authorities to learn whether there were any cases of theft and desecration in the Kolar District prior to the 1st of August, if not, what are the special reasons therefor?

Dear Sir

It is observed that you have been publishing in your paper accounts and rumours of alleged desecration of Hindu temples without due verification in some cases. These accounts, appearing under sensational headlines, are calculated to cause alarm and give a misleading impression to the public as to the extent and significance of such occurrences. I am desired to draw your attention to this matter and to express the hope that you will in future avoid ~~giving publicity to~~ publishing news or comments ~~thereon~~ in a manner calculated to inflame communal feelings.

In continuation of my D.O. letter No. S.R. 9 of 1928-29 of the 17th instant stating that the new images of Basava were installed in the Sri Mallikarjunaswamy temple on the Hemagiri hill, Kunigal Taluk, I beg to submit that I have just persued an Article under the heading " ಹೇಮಗಿರಿಯ ಶ್ರೀ ಮಲ್ಲಿಕಾರ್ಜುನ " published in the " Viswakarnataka" in its issue of the 16th instant. A copy of the Article is herein enclosed for ready reference.

(2) The Article in question contains two serious allegations:-

(1) that the Amildar of the Taluk, while camping at Huliyurdurga for three days from 25-8-1928 supressed by using all his influence, the evidence leading to the detection of the offenders.

(2) that he prevented the persons from representing the case to the Deputy Commissioner on the day he visited the place.

Both these allegations are false, and are malicious.

When I visited the temple on the 5th instant, Guru Sidda Sastri, the local Lingayat priest of the temple and many leading persons of the Lingayat community, including the Setti of the caste and the signatories to the petition met me and represented their grievances. Yesterday Guru Sidda Sastri was here, and when he was shown the Article, he said that he was so very sorry and that some mischief-monger must

4. This sort of vilification has a demoralising effect on the officers concerned and also on other officers. Some action seems therefore necessary. I would suggest that the Editor be asked to withdraw the Article with an unqualified apology and if he fails to do so, to prosecute him for defamation after consulting the Govt. Adv

Yours sincerely,

N. Madhava Rao, Esquire, B.A., B.L.,
Chief Secretary to the Govt: of Mysore,
Bangalore.

C.B. 1262.

ತಿರುಮಲೆ ತಾತಾಚಾರ್ಯ ಶರ್ಮ
ಸಂಪಾದಕ

"ವಿಶ್ವಕರ್ಣಾಟಕ"

"VISVAKARNATAKA"

ಸಂ.
No. 3361

CHIEF SECRETARY. 26 SEP. 1928

ಬೆಂಗಳೂರು ನಗರ
Bangalore City
25th Septr: 28.

To

The Chief Secretary,
to the Government of Mysore,
Bangalore.

Dear Sir,

We are in receipt of your D.O. No. 1583/C.B. 3828 dated 22/24th Septr: 1928.

